ಶ್ರೀ ವಾಟಾಳ್ ನಾಗರಾಜ್ : ಆಗಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ : ಬೈರೇಗೌಡರು ಮಧ್ಯೆ ಪ್ರವೇಶ ಮಾಡಿದಾಗ ನಾನು ಏನು ಹೇಳುತ್ತಿದ್ದೆ ಅಂದರೆ, ಬದುಕಿನ ಉದ್ದಗಲಕ್ಕೂ ಸಮಾಜವಾದದ ಸಿದ್ಧಾಂತವನ್ನು ಹೇಳಿಕೊಂಡು ಬಂದು ಆ ಮಸೂದೆಯಲ್ಲಿಯೇ ತಯಾರಾಗಿ ಸ್ಫುಟಗೊಂಡಂತಹ ಒಂದು ಚಿನ್ನ ಎಂದು ನಾನು ಏನು ಭಾವನೆ ಮಾಡಿದ್ದೆ, ಅವಕಾಶ ಸಿಕ್ಕಿದಾಗ ಯಾವ ಸಿದ್ಧಾಂತವನ್ನು ಬದುಕಿನ ಉದ್ದಗಲಕ್ಕೂ ಹೇಳಿಕೊಂಡು ಬಂದಂತಹ ಮಾನ್ಯ ಮುಖ್ಯ ಮಂತ್ರಿಗಳಾದ ಬಂಗಾರಪ್ಪನವರು ಅದನ್ನು ಅನುಷ್ಠಾನ ಗೊಳಿಸುವಂತಹ ಕಾರ್ಯದಲ್ಲಿ ತದ್ವಿರುದ್ಧವಾದ ದಿಕ್ಕನ್ನು ಹಿಡಿದಿದ್ದಾರೆ. ಅದನ್ನು ನಾನು ನಾಳೆ ಪ್ರತಿಪಾದನೆ ಮಾಡುತ್ತೇನೆ.

ಉಪಾಧ್ಯಕ್ಷರು : ಈಗ ಅರ್ಧಗಂಟೆ ಕಾಲಾವಧಿ ಚರ್ಚೆಯನ್ನು ತೆಗೆದುಕೊಳ್ಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು : ಈ ಒಂದು ಬಹಳ ಗಹನವಾದ ಚರ್ಚೆ ಆಗುವಾಗ ಮಾನ್ಯ ಮಂತ್ರಿಗಳ ಹಾಜರಿ ಇಲ್ಲಿ ಅವಶ್ಯಕ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇಲ್ಲದಿದ್ದರೆ ಚರ್ಚೆಯಿಂದ ಏನೂ ಪ್ರಯೋಜನ ಆಗುವುದಿಲ್ಲ, ನಾವು ಅವರ ಸಮ್ಮುಖದಲ್ಲಿ ಇದು ಆಗಬೇಕಾದಂತಹ ಚರ್ಚೆ. ಇಲ್ಲದಿದ್ದರೆ ಡಿಸ್ಕಷನ್ ಮಾಡುವುದರಿಂದ ಏನೂ ಉಪಯೋಗ ಆಗುವುದಿಲ್ಲ...

ಶ್ರೀ ಬಿ.ಹೆಚ್.ಬನ್ನಿಕೋಡ್ : ಮಾನ್ಯ ಮುಖ್ಯ ಮಂತ್ರಿಗಳು ಬರಬೇಕು..

ಶ್ರೀ ಸಿ.ಬೈರೇಗೌಡ : ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳೂ ಇಲ್ಲ....

ಶ್ರೀ ಎಲ್.ಆರ್. ಶಿವರಾಮೇಗೌಡ : ಸಂಸದೀಯ ಮಂತ್ರಿಗಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮೊಯಿಲಿಯವರೇ, ಎಲ್ಲಕ್ಕೂ ನೀವು ಒಬ್ಬರೇ ಸಚಿವರಾ ಇಲ್ಲಿ, ಇದನ್ನು ನೀವು ಒಪ್ಪಿಕೊಳ್ಳುತ್ತೀರಾ? ನಿಮಗೆ ಎಷ್ಟು ತಲೆಗಳು? ಎಷ್ಟು ಕೈಕಾಲುಗಳು? ನಾವು ತಮ್ಮನ್ನು ಒಬ್ಬರೇ ಸಚಿವರು ಅಂದುಕೊಂಡಿದ್ದೆವು. ಎರಡು ಕಣ್ಣು, ಎರಡು ಕಾಲು, ಎರಡು ಕೈ ಎಂದು ತಿಳಿದಿದ್ದೆವು. ಆದರೆ ಇಡೀ ಸಚಿವರ ಸಂಪುಟವೇ ನಿಮ್ಮ ತಲೆಯ ಮೇಲೆ ಇದೆಯೇ ಹೇಗೆ? ನೀರಿನ ಬಗ್ಗೆ ಪ್ರಸ್ತಾಪ ಮಾಡುವಾಗ ಗ್ರಾಮೀಣಾಭಿವೃದ್ಧಿ ಸಚಿವರೇ ಇಲ್ಲ. ನೀವು ಒಂದು ಹೇಳಬಹುದು, ಎರಡು ಹೇಳಬಹುದು. ರಾಮಾಯಣವನ್ನು ನೀವೇ ಹೇಳಿ ಮಹಾಭಾರತವನ್ನು ನೀವೇ ಹೇಳಿದರೆ ಹೇಗೆ? ಪ್ರತಿಯೊಂದಕ್ಕೂ ಅಂದರೆ ಎಲ್ಲ ಚರ್ಚೆಗೂ ನೀವೇ ಉತ್ತರ ಕೊಡುವುದಾದರೆ ಅದು ರುಚಿ ಆಗುವುದಿಲ್ಲ, ಹಿಡಿಸುವುದೂ ಇಲ್ಲ.

ಉಪಾಧ್ಯಕ್ಷರು : ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಬಂದರು.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಇದ್ದಾರೆ. ಅವರಿಗೂ ಸಹ ಅಷ್ಟೆ ಜವಾಬ್ದಾರಿ ಇದೆ, ಚರ್ಚೆಯನ್ನು ಮುಂದುವರಿಸಬಹುದು, ಅದಕ್ಕೆ ತಾವು ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಈಗ ಮಂಜುನಾಥ ಸಿ.ಕುನ್ನೂರ್ ಅವರು ಚರ್ಚೆ ಪ್ರಾರಂಭ ಮಾಡಬಹುದು.

ಅರ್ಧಗಂಟೆ ಕಾಲಾವಧಿ ಚರ್ಚೆ

ಕುಡಿಯುವ ನೀರಿನ ಕಿರು ಬಾವಿಗಳನ್ನೊದಗಿಸುವ ಬಗ್ಗೆ.

ಶ್ರೀ ಮಂಜುನಾಥ್ ಸಿ. ಕುನ್ನೂರು (ಶಿಗ್ಗಾಂ) : ಮಾನ್ಯ ಉಪಾಧ್ಯಕ್ಷರೇ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ನಾವು ಇವತ್ತು ಎಷ್ಟೇ ಚರ್ಚೆ ಮಾಡಿದರೂ ಸಹ ಇದು ಕಡಿಮೆ ಎಂದು ನಾನು ಭಾವಿಸಿದ್ದೇನೆ. ನಾವು ಕೆಲವೇ ದಿವಸಗಳಲ್ಲಿ

ಜನತೆಗೆ ಕುಡಿಯುವ ನೀರು ಕೊಡದೇ ಹೋದರೆ ಅವರು ನಮಗೇ ನೀರು ಕುಡಿಸುತ್ತಾರೆ ಎನ್ನತಕ್ಕ ಮಾತನ್ನು ನಾನು ಮೊದಲನೆಯದಾಗಿ ಹೇಳಬಯಸುತ್ತೇನೆ. ಇವತ್ತು ಬಹಳ ಒಂದು ಜಟಿಲವಾದ ಸಮಸ್ಯೆಯನ್ನು ನಾವು ಗ್ರಾಮಾಂತರ ಪ್ರದೇಶದಲ್ಲಿ ನೋಡುತ್ತಿದ್ದೇವೆ. ಅದರಲ್ಲಿಯೂ ವಿಶೇಷವಾಗಿ ಇವತ್ತು ಅಂತರ್ಜಲದ ಮಟ್ಟ ಕೂಡ ಕಡಿಮೆ ಆಗಿರುವುದರಿಂದ ನಾವು ಎಷ್ಟೇ ಕಾರ್ಯಕ್ರಮಗಳನ್ನು ಹಾಕಿಕೊಂಡರೂ ಕೂಡ ಈ ಒಂದು ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಸಾಧ್ಯ ಆಗಿಲ್ಲ ಎನ್ನತಕ್ಕ ಮಾತನ್ನು ಕೂಡ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವತ್ತು ನಮ್ಮ ಮತ ಕ್ಷೇತ್ರದಲ್ಲಿ ಶಿಗ್ಗಾಂವ್ ಕ್ಷೇತ್ರದಲ್ಲಿ, ಸವಣೂರು ತಾಲ್ಲೂಕಿನಲ್ಲಿ ಕನಿಷ್ಟ ಪಕ್ಷ ಸುಮಾರು ಒಂದು ನೂರು ಬೋರ್‌ವೆಲ್‌ಗಳನ್ನು ಹಾಕಿದರೂ ಕೂಡ ನಮಗೆ ನೀರಿನ ಸಮಸ್ಯೆ ಬಗೆಹರಿಸುವುದಕ್ಕೆ ಆಗುವುದಿಲ್ಲ ಎನ್ನತಕ್ಕ ಮಾತನ್ನು ನಾನು ಹೇಳಬಯಸುತ್ತೇನೆ. ಈ ಕೆಲವೊಂದು ಕುಡಿಯುವ ನೀರನ್ನು ಒದಗಿಸಬೇಕಾದಂತಹ ಸಂದರ್ಭದಲ್ಲಿ ಇವತ್ತು ಜಿಲ್ಲಾ ಪರಿಷತ್ತಿನಲ್ಲಿ ಆಗಲೀ ಮಂಡಲ್ ಪಂಚಾಯಿತಿಯಲ್ಲಾಗಲಿ ಆಗಲೀ ಅಥವಾ ಜಿಲ್ಲಾಧಿಕಾರಿಗಳೇ ಆಗಲಿ, ಇವುಗಳನ್ನು ಒದಗಿಸಬೇಕಾದಾಗ ಕೆಲವೊಂದು ಅಡೆ ತಡೆಗಳು ಬರುತ್ತವೆ ಎನ್ನುವುದನ್ನು ನಾವು ಮರೆಯಬಾರದು. ಮಂಡಲ್ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ ನಲ್ಲಿ ಇವತ್ತು ಇದರ ಮುಖಾಂತರ ನಾವು ಅಲ್ಲಿ ಬೋರ್ ವೆಲ್ ಗಳನ್ನು ಹಾಕಿಸಬೇಕೆಂದರೂ ಜಿಲ್ಲಾಧಿಕಾರಿಗಳ ಮುಖಾಂತರ ಕೆಲವೊಂದು ಬೋರ್‌ವೆಲ್‌ಗಳನ್ನು ಹಾಕಿಸಬೇಕೆಂದರೂ ಸಹ ಇವತ್ತು ಅಲ್ಲಿ ಡ್ರಿಲ್ಲಿಂಗ್ ಏಜೆನ್ಸಿಗಳು ಬೋರ್‌ವೆಲ್ ಏಜೆನ್ಸಿ ಗಳು ಕೂಡ ಸಿಗದೇ ಇರತಕ್ಕಂಥಹ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ನಮ್ಮ ಧಾರವಾಡ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳು ನಾಲ್ಕು ಬೋರ್ ವೆಲ್‌ಗಳನ್ನು ತೆಗೆಸುವುದಕ್ಕೆ ನಾಲ್ಕು ರಿಗ್‌ಗಳಿಗೆ ಅಪ್ರೂವಲ್ ಕೊಟ್ಟಿದ್ದಾರೆ. ಇಡೀ ಧಾರವಾಡ ಜಿಲ್ಲೆಯಲ್ಲಿ 18 ತಾಲ್ಲೂಕುಗಳು ಇರುವುದರಿಂದ ಕೇವಲ ನಾಲ್ಕು ರಿಗ್‌ಗಳಿಂದ ಎಲ್ಲಾ ತಾಲ್ಲೂಕುಗಳಿಗೆ ಬೋರ್ ಪಾಯಿಂಟ್‌ಗಳನ್ನು ತೆಗೆದುಕೊಳ್ಳಬೇಕೆಂದರೆ ಇದು ಸಾಧ್ಯವಾಗದ ಕೆಲಸ. ಆ ಕಾರಣ ನಾನು ತಮ್ಮ ಮುಖೇನ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ ಎಷ್ಟೇ ರಿಗ್ ಏಜೆನ್ಸಿಗಳು ಇರಲಿ, ಪ್ರತಿ ಒಂದು ತಾಲ್ಲೂಕಿಗೆ ಒಂದಾದರೂ ರಿಗ್ ಇವತ್ತು ಕೊಡತಕ್ಕ ವ್ಯವಸ್ಥೆಯನ್ನು ಮಾಡಿದರೆ ಮಾತ್ರ ನಾವು ತಕ್ಷಣ ಅಂತರ್ಜಲದಲ್ಲಿ ನೀರನ್ನು ತೆಗೆದುಕೊಂಡು ಈ ಜನತೆಗೆ ನೀರನ್ನು ಕೊಡುವುದಕ್ಕೆ ಸಾಧ್ಯ ಆಗುತ್ತದೆ ಎನ್ನತಕ್ಕ ಮಾತನ್ನು ಕೂಡ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಕೆಲವೊಂದು ಹಳ್ಳಿಗಳಲ್ಲಿ ಜನ ಗಣತಿಯ ಪ್ರಕಾರ 500ಕ್ಕಿಂತ ಕಡಿಮೆ ಜನಸಂಖ್ಯೆ ಇರುವುದರಿಂದ ಕಿರು ನೀರು ಸರಬರಾಜು ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯ ಆಗುತ್ತಾ ಇಲ್ಲ. ಆ ಕಾರಣ 1981 ನೇ ಇಸವಿಯ ಒಂದು ಜನಗಣತಿ ಆಧಾರದ ಮೇಲೆ ನಾವು ಹಳ್ಳಿಗಳನ್ನು ತೆಗೆದುಕೊಳ್ಳುವುದು ಒಳಿತು. ಅದರ ಜೊತೆಗೆ ಅಕ್ಕ ಪಕ್ಕದಲ್ಲಿ ಕನಿಷ್ಟ ಪಕ್ಷ ಒಂದು ಕಿಲೋಮೀಟರ್ ಎರಡು ಕಿಲೋ ಮೀಟರ್‌ನಲ್ಲಿರತಕ್ಕ ಹಳ್ಳಿಗಳನ್ನು ಒಂದುಗೂಡಿಸಿ 2-2, 3-3 ಹಳ್ಳಿಗಳಿಗೆ ಒಂದು ಸಂಯುಕ್ತ ನೀರು ಸರಬರಾಜು ಯೋಜನೆಗಳ ಮುಖಾಂತರ ನೀರು ಸರಬರಾಜು ಮಾಡಿದರೆ ಬಹಳ ಒಳ್ಳೆಯದಾಗುತ್ತದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ.

ಇನ್ನು ಮಂಡಲ ಪಂಚಾಯತ್‌ಗಳ ವತಿಯಿಂದ ಇರುವ ಬೋರ್‌ವೆಲ್‌ಗಳ ರಿಪೇರಿ ಆಗಬೇಕೆನ್ನುವ ಒಂದು ವ್ಯವಸ್ಥೆ ಇರುವುದರಿಂದ ಆ ಮಂಡಲ ಪಂಚಾಯತಿಗಳಲ್ಲಿ ಹಣದ ಕೊರತೆ ಇರುತ್ತದೆ. ಇದರ ಜೊತೆಗೆ ಅವರಲ್ಲಿ ಬೋರ್‌ವೆಲ್‌ಗಳನ್ನು ರಿಪೇರಿ ಮಾಡತಕ್ಕಂಥ ತಜ್ಞರು ಅವರ ವ್ಯಾಪ್ತಿಯಲ್ಲಿರುವುದಿಲ್ಲ. ರಿಪೇರಿಗಾಗಿ ಅವರು ಪುನ: ಜಿಲ್ಲಾ ಪರಿಷತ್‌ನ ಇಂಜಿನಿಯರಿಂಗ್ ಉಪ ವಿಭಾಗದವರ ಮೊರೆ ಹೋಗಬೇಕಾಗುತ್ತದೆ. ಇವೊತ್ತು ತಾಲ್ಲೂಕು ಮಟ್ಟದಲ್ಲಿ ಪಿ.ಹೆಚ್.ಸಿ.ಗೆ ಸಂಬಂಧಪಟ್ಟಂಥ ಮೊಬೈಲ್ ವ್ಯಾನ್‌ಗಳು ಇರುವುದರಿಂದ ಮಂಡಲ ಪಂಚಾಯತಿಯವರು ಎಲ್ಲಾ ಹಳ್ಳಿಗಳಿಗೆ ಹೋಗಿ ಕೆಲಸ

ಮಾಡುವುದು ಅಸಾಧ್ಯವಾದುದಾಗಿದೆ. ಆ ಕಾರಣದಿಂದ ನೇರವಾಗಿ ಸರಕಾರದವರು ಬೋರ್‌ವೆಲ್ ರಿಪೇರಿ ಮಾಡುವ ದಿಶೆಯಲ್ಲಿ ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗದವರಿಗೆ ವಹಿಸಿಕೊಡಬೇಕು. ಇಲ್ಲವಾದರೆ ಪಿ.ಹೆಚ್.ಸಿ.ಯವರು ಪ್ರತ್ಯೇಕವಾಗಿ ಒಂದು ವ್ಯವಸ್ಥೆಯನ್ನು ಮಾಡಿಕೊಂಡು ಅದರ ಮುಖಾಂತರ ಬೋರ್‌ವೆಲ್‌ಗಳನ್ನು ರಿಪೇರಿ ಮಾಡಿಸಿದರೆ ಅದರಿಂದ ಒಳ್ಳೆಯದಾಗುತ್ತದೆ ಎಂದು ಹೇಳಬಯಸುತ್ತೇನೆ. ಇನ್ನು ಕೆಲವೊಂದು ಕಡೆಗೆ ಇವೊತ್ತು ನಾವು ಈಗಾಗಲೇ ಬೋರ್‌ವೆಲ್‌ಗಳನ್ನು ತೆಗೆದು ಅಲ್ಲಿ ಹೆಚ್ಚಿನ ಒಂದು ನೀರನ್ನು ಪಡೆಯಬೇಕೆಂದು ಅಲ್ಲಿ ಹೈಯರ್ ಸ್ಟೇಜಸ್ ಪಂಪನ್ನು ಹೊಸದಾಗಿ ಹಾಕಿದರೆ ಅದೂ ಕೂಡ ಪ್ರಯೋಜನಕಾರಿಯಾಗುತ್ತದೆಂದು ನಾನು ಹೇಳಬಯಸುತ್ತೇನೆ. ಪೈಪ್‌ಲೈನ್‌ಗಾಗಿ ಇವೊತ್ತು ಬರ ಪರಿಹಾರ ನಿಧಿಯಿಂದ ಸ್ಕೇರ್ಸಿಟಿ ಹಣವನ್ನು ಕೊಟ್ಟರೂ ಕೂಡ ಈ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸುವ ದಿಶೆಯಲ್ಲಿ ಕೇವಲ ಬೋರ್‌ವೆಲ್‌ಗಳನ್ನು ತೆಗೆಸುವುದಕ್ಕೆ ಮಾತ್ರ ಹಣವನ್ನು ಕೊಡುತ್ತಿದ್ದಾರೆ. ಪೈಪ್‌ಲೈನ್‌ಗಾಗಿ ಹಣದ ವ್ಯವಸ್ಥೆಯನ್ನು ಮಾಡುತ್ತಾ ಇಲ್ಲ. ಈಗ ಅಂತರ್ಜಲದ ಮಟ್ಟ ಕಡಿಮೆಯಾಗಿರುವುದರಿಂದ ಬಹಳ ದೂರದಿಂದ ಆ ನೀರನ್ನು ತಡೆದು ಆ ಗ್ರಾಮಗಳಿಗೆ ನೀರು ಸರಬರಾಜು ಮಾಡಬೇಕಾಗಿರುವುದರಿಂದ ಪೈಪ್ ಲೈನ್‌ಗಳಿಗಾಗಿ ಹಣದ ವ್ಯವಸ್ಥೆ ಮಾಡುವುದು ಒಳ್ಳೆಯದು ಎಂದು ನಾನು ಸಲಹೆ ಮಾಡಲಿಚ್ಛಿಸುತ್ತೇನೆ. ಈ ಒಂದು ದಿಕ್ಕಿನಲ್ಲಿ ಹೆಚ್ಚಿನ ಆಸಕ್ತಿಯನ್ನು ಕೊಟ್ಟು ನಾವು ಅನೇಕ ಯೋಜನೆಗಳಲ್ಲಿ ತೊಡಗಿಸಿರತಕ್ಕಂಥ ಹಣವನ್ನು ಕಡಿಮೆ ಮಾಡಿಯಾದರೂ ಕೂಡ ನೀರಿಗಾಗಿ ವಿಶೇಷವಾದ ಪ್ರಾಮುಖ್ಯತೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇವೊತ್ತು ಮಾನವನಿಗೆ ನೀರು, ಗಾಳಿ, ಮತ್ತು ಅನ್ನ ಮುಖ್ಯವಾದುದು. ಇನ್ನು ಬರತಕ್ಕಂಥ ದಿವಸಗಳಲ್ಲಿ ಸತತವಾಗಿ ಬರಗಾಲ ಬಿದ್ದುದರಿಂದ ಕಠಿಣ ದಿವಸಗಳನ್ನು ನಾವು ಎದುರಿಸಬೇಕಾಗುತ್ತದೆ. ಆದುದರಿಂದ ಮಾನ್ಯ ಸಚಿವರು ಈ ಬಗ್ಗೆ ಹೆಚ್ಚಿನ ಗಮನವನ್ನು ನೀಡಿ, ಕುಡಿಯುವ ನೀರಿನ ವ್ಯವಸ್ಥೆಯು ಸುಗಮವಾಗಿ ನಡೆದುಕೊಂಡು ಬರುವಂತಹ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಹೇಳಿ ನನಗೆ ಅವಕಾಶವನ್ನು ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೇ ಈಗ ತಾನೆ ಮಾತನಾಡಿದ ಮಾನ್ಯ ಸದಸ್ಯರು ಒಂದು ಒಳ್ಳೆಯ ಮತ್ತು ಸಂದರ್ಭೋಚಿತವಾದ ಮಾತನ್ನು ಹೇಳಿದ್ದಾರೆ. ಅದೇನೆಂದರೆ ನಾವು ಜನರಿಗೆ ನೀರು ಕೊಡದಿದ್ದರೆ ಅವರೇ ನಮಗೆ ನೀರು ಕುಡಿಸುತ್ತಾರೆ ಎಂದು ಸೂಕ್ಷ್ಮವಾಗಿ ಹೇಳಿದ್ದಾರೆ. ಬೇರೆ ಬೇರೆ ಮಾನ್ಯ ಸದಸ್ಯರು ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಮಾತನಾಡಿದ್ದರೂ ಎಲ್ಲರ ಮಾತಿನ ಅರ್ಥ ಒಂದೇ ಆಗಿದೆ. ನಮಗೆ ಜನ ನೀರು ಕುಡಿಸುವುದಕ್ಕೆ ಅವರ ಹತ್ತಿರ ನೀರು ಇಲ್ಲದಿದ್ದರೂ ಕೂಡ ಎಲ್ಲಿ ಅವರಿಗೆ ನಮಗೆ ಕುಡಿಸುವಷ್ಟು ನೀರು ಎಲ್ಲಿ ಸಿಗುತ್ತದೋ ಅಲ್ಲಿ ಕುಡಿಸುತ್ತಾರೆ, ಅಥವಾ ನಮ್ಮನ್ನು ಅಲ್ಲಿ ಮುಳುಗಿಸುತ್ತಾರೆ. ಅಂಥ ಒಂದು ಭೀಕರ ಪರಿಸ್ಥಿತಿಯು ನಮ್ಮ ಇಡೀ ರಾಜ್ಯದಲ್ಲಿ ಇಂದು ಉದ್ಭವವಾಗಿದೆ. ಇಡೀ ರಾಜ್ಯದಲ್ಲಿ ಇಂದು ಈ ಸಮಸ್ಯೆಯ ಬಗ್ಗೆ ಜನರು ಕಾತರರಾಗಿದ್ದಾರೆ. ಈ ಹಿಂದೆ ನಾವುಗಳು ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸುವ ನಿರ್ಣಯದ ಮೇಲೆ ಮಾತನಾಡಬೇಕಾಗಿತ್ತು. ಅದು ಸಂಪ್ರದಾಯವೂ ಆಗಿತ್ತು. ಆದರೆ ನಾವುಗಳು ಅದನ್ನು ಮತ್ತು ಬೇರೆ ಎಲ್ಲಾ ವಿಚಾರಗಳನ್ನು ಬದಿಗೊತ್ತಿ ಜನರಿಗೆ ನೀರನ್ನು ಒದಗಿಸುವ ಬಗ್ಗೆ ಮತ್ತು ರಾಜ್ಯದಲ್ಲಿದ್ದ ಬರಗಾಲದ ಭೀಕರತೆಯನ್ನು ಅರ್ಥಮಾಡಿಕೊಂಡು ಆ ಕುರಿತು ಎಲ್ಲರೂ ಇಲ್ಲಿ ಚರ್ಚೆ ಮಾಡಿದ್ದೇವೆ.

ಈ ಸದನದಲ್ಲಿ ಈ ಅಧಿವೇಶನದಲ್ಲಿಯೇ ಕುಡಿಯುವ ನೀರಿನ ಬಗ್ಗೆ ಇದು ಎರಡನೇ ಸಾರಿ ಚರ್ಚೆಯಾಗುತ್ತಿದೆ. ನಿಮ್ಮ ನಿಯಮಾವಳಿಯಲ್ಲಿ ಕೂಡಾ ಒಂದು

ವಿಚಾರವನ್ನು ಒಂದು ಸಾರಿ ಚರ್ಚೆ ಮಾಡಿದ ಮೇಲೆ ಮತ್ತೊಂದು ಸಾರಿ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ. ಆದರೂ ಸಹಾ ವಿಶೇಷವಾಗಿ ತಾವು ಔದಾರ್ಯವನ್ನು ತೋರಿಸಿದ್ದೀರಿ. ಇದರ ಬಗ್ಗೆ ಚರ್ಚೆಗೂ ಕೂಡಾ ತಾವು ಅವಕಾಶವನ್ನು ಕೊಟ್ಟಿದ್ದೀರಿ. ಚರ್ಚೆಗೆ ಅವಕಾಶವನ್ನು ತಾವು ಏತಕ್ಕೆ ಕೊಟ್ಟಿದ್ದೀರಿ ಎಂದರೆ ಇದು ತಮಗೂ ಕೂಡಾ ಅರ್ಥವಾಗಿದೆ. ಕುಡಿಯುವ ನೀರಿನ ಬಗ್ಗೆ ಪರಿಸ್ಥಿತಿ ಎಷ್ಟು ಭೀಕರವಾಗಿದೆ ಎನ್ನುವುದು ತಮಗೆ ಅರ್ಥವಾಗಿರುವ ಕಾರಣಕ್ಕೋಸ್ಕರ ತಾವು ಚರ್ಚೆಗೆ ಅವಕಾಶವನ್ನು ಕೊಟ್ಟಿದ್ದೀರಿ ಎನ್ನತಕ್ಕಂಥದ್ದನ್ನು ನಾವು ಕೂಡಾ ಅರ್ಥಮಾಡಿಕೊಳ್ಳಬೇಕಾಗಿರತಕ್ಕಂಥದ್ದು. ಇವತ್ತು ರಾಜ್ಯದಲ್ಲಿ ಅದರಲ್ಲೂ ಪ್ರಮುಖವಾಗಿ ನನ್ನ ಕ್ಷೇತ್ರ ಮತ್ತು ನಮ್ಮ ಜಿಲ್ಲೆಯಲ್ಲಿ ಶೇಕಡ 70ರಿಂದ 80ರಷ್ಟು ಹಳ್ಳಿಗಳಲ್ಲಿ ಕುಡಿಯುವುದಕ್ಕೂ ನೀರು ಇಲ್ಲ. ಮಂತ್ರಿಗಳು ಹೇಳುತ್ತಾರೆ, ಉತ್ತರ ಕೂಡತಕ್ಕಂಥ ಸಂದರ್ಭದಲ್ಲಿ ಅಥವಾ ಈ ಹಿಂದೆಯೂ ಕೂಡಾ ಹೇಳಿದ್ದಾರೆ. ನಾವು ಬರ ಪರಿಹಾರ ಕಾಮಗಾರಿಯಲ್ಲಿ ಕುಡಿಯುವ ನೀರಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದ್ದೇವೆ, ಹಣವನ್ನು ಬಿಡುಗಡೆ ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ಕೂಡ ಹೇಳುತ್ತಾರೆ. ಹಣವನ್ನು ಬಿಡುಗಡೆ ಮಾಡಿಲ್ಲ ಎಂದು ನಾನು ಹೇಳುತ್ತಿಲ್ಲ. ಮಾಡಿದ್ದಾರೆ. ಆದರೆ ಪರಿಸ್ಥಿತಿ ಎಷ್ಟಿದೆ ಎಂದರೆ ಇದು ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎನ್ನುವ ಪರಿಸ್ಥಿತಿ ಆಗಿದೆ. ಅಷ್ಟೊಂದು ಪರಿಸ್ಥಿತಿ ಭೀಕರವಾಗಿದೆ. ಶೇಕಡ 70ರಿಂದ 80ರಷ್ಟು ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ತೊಂದರೆ ಇದ್ದರೂ ಸಹಾ ಒಂದೊಂದು ತಾಲ್ಲೂಕಿಗೆ ಕುಡಿಯುವ ನೀರಿಗಾಗಿ ಎಂದು ಬಿಡುಗಡೆ ಮಾಡಿರತಕ್ಕಂಥದ್ದು ಒಂದೂವರೆ ಲಕ್ಷ-ಎರಡು ಲಕ್ಷ ರೂಪಾಯಿಗಳು ಮಾತ್ರ ಅದರಿಂದ ಎಷ್ಟು ಕೊಳವೆ ಬಾವಿಗಳು ಆಗಿವೆ ಎಂದು ಹೇಳಿದರೆ ಆರರಿಂದ ಎಂಟು ಕೊಳವೆಬಾವಿಗಳನ್ನು ತೆಗೆಯುವುದಕ್ಕೆ ಮಾತ್ರ ಸಾಧ್ಯವಾಗಿದೆ. ಆದರೆ ಪ್ರತಿ ತಾಲ್ಲೂಕಿನಲ್ಲಿ 100ರಿಂದ 150, 200 ಹಳ್ಳಿಗಳಲ್ಲಿ ಕುಡಿಯುವುದಕ್ಕೆ ನೀರು ಇಲ್ಲ. ಆದ್ದರಿಂದ ಕನಿಷ್ಟ ಇವತ್ತಿನ ದಿವಸ ತತ್‌ಕ್ಷಣ 100ಕೊಳವೆಬಾವಿಯಾದರೂ ಆಗಬೇಕಾಗಿರತಕ್ಕಂಥ ಅವಶ್ಯಕತೆ ಪ್ರತಿ ತಾಲ್ಲೂಕಿನಲ್ಲಿಯೂ ಇದೆ. ಆದರೆ ಬಿಡುಗಡೆ ಮಾಡಿರತಕ್ಕಂಥ ಹಣದಲ್ಲಿ ಹಾಕಿರತಕ್ಕಂಥ ಕೊಳವೆಬಾವಿಗಳು ಎಷ್ಟೆಂದರೆ ಆರರಿಂದ ಎಂಟು ಮಾತ್ರ. ಇವತ್ತಿನ ದಿವಸ ಪ್ರತಿ ತಾಲ್ಲೂಕಿನಲ್ಲಿ ಹಾಕಿರತಕ್ಕಂಥದ್ದು ಏನೂ ಸಾಕಾಗುತ್ತಿಲ್ಲ. ಪ್ರತಿ ಹಳ್ಳಿಯಲ್ಲಿಯೂ ಕೂಡಾ ಕುಡಿಯುವ ನೀರಿನ ತೊಂದರೆ ಇದೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಹೆಣ್ಣುಮಕ್ಕಳು ಮೈಲಿಗಟ್ಟಲೆ ನೀರು ತರುವುದಕ್ಕೆ ಹೋಗುತ್ತಿದ್ದಾರೆ. ನೀವು ಕೇಳಬಹುದು ಅಲ್ಲಿ ಎಲ್ಲಿ ನೀರು ಸಿಗುತ್ತದೆ ಎಂದು. ದೂರದಲ್ಲಿ ತೋಟಗಳು ಇರುತ್ತವೆ. ಅಲ್ಲಿ ಕೊಳವೆಬಾವಿಯನ್ನು ಹಾಕಿರುತ್ತಾರೆ. ತೋಟದಲ್ಲಿ ನೀರನ್ನು ಬಿಡುತ್ತಿದ್ದರೆ ಅಲ್ಲಿ ಹೋಗಿ ನೀರನ್ನು ತರತಕ್ಕಂಥ ದೃಶ್ಯವನ್ನು ಪ್ರತಿಯೊಂದು ಹಳ್ಳಿಯಲ್ಲಿಯೂ ಕೂಡಾ ಕಾಣಬಹುದು. ಅಷ್ಟೇ ಅಲ್ಲ, ಅನೇಕ ಹಳ್ಳಿಗಳಲ್ಲಿ ಸೈಕಲ್ ಮೇಲೆ 3-4 ಕೊಡಗಳನ್ನು ಕಟ್ಟಿಕೊಂಡು ಮೈಲಿಗಟ್ಟಲೆ ಹೋಗಿ ನೀರನ್ನು ತರತಕ್ಕಂಥ ಪರಿಸ್ಥಿತಿಯನ್ನು ಇವತ್ತಿನ ದಿವಸ ಪ್ರತಿಯೊಂದು ಹಳ್ಳಿಯಲ್ಲಿಯೂ ಕೂಡಾ ನೋಡಬಹುದು. ಇದನ್ನು ನಾವು ಎಷ್ಟೇ ಒತ್ತಾಯ ಮಾಡಿ ಇದನ್ನೆಲ್ಲಾ ಸರ್ಕಾರಕ್ಕೆ ಸರ್ಕಾರದ ಗಮನಕ್ಕೆ ತಂದರೂ ಕೂಡಾ ಸರ್ಕಾರ ಹಣವನ್ನು ಬಿಡುಗಡೆ ಮಾಡತಕ್ಕಂಥ ಪರಿಸ್ಥಿತಿಯಲ್ಲಿ ಇವತ್ತಿನ ದಿವಸ ಇಲ್ಲ. ಕೊಡುತ್ತೇವೆ, ಕೊಡುತ್ತೇವೆ ಎಂದು ಹೇಳಿ ಕೊಟ್ಟಿರತಕ್ಕಂಥದ್ದು ಐದಾರೂ ದಿವಸ ಇಲ್ಲ. ಕೊಡುತ್ತೇವೆ, ಕೊಡುತ್ತೇವೆ ಎಂದು ಹೇಳಿ ಕೊಟ್ಟಿರತಕ್ಕಂಥದ್ದು ಐದಾರು ಕೊಳವೆಬಾವಿಗಳಿಗೆ ಮಾತ್ರ ಕೊಟ್ಟಿದ್ದಾರೆ. ಈ ಹಿಂದೆ ಇದನ್ನು ಸಭೆಯ ಗಮನಕ್ಕೂ ಕೂಡಾ ತಂದಿದ್ದೆ. ಈಗಲೂ ಕೂಡಾ ನಾನು ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಹಿಂದೆ ಇದ್ದಂಥ ಅರ್ಥ ಮಂತ್ರಿಗಳು ಕಳೆದ ಬಜೆಟ್ ಅಧಿವೇಶನದಲ್ಲಿ ಅವರು ಉತ್ತರವನ್ನು ಕೊಡತಕ್ಕಂಥ ಸಂದರ್ಭದಲ್ಲಿ 25 ಕೋಟಿ ರೂಪಾಯಿಗಳನ್ನು ಗ್ರಾಮಾಂತರ ಪ್ರದೇಶದ ನೀರಾವರಿಗಾಗಿ ನಾವು ಈ ಸಾರಿ

ಹೆಚ್ಚುವರಿಯಾಗಿ ಹಣವನ್ನು ಬಿಡುಗಡೆ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಈ ಸದನದಲ್ಲಿಯೇ ಹೇಳಿದ್ದರು. ಅದು ಅಷ್ಟೇ ಅಲ್ಲ, ಮಾಜಿ ಗ್ರಾಮೀಣಾಭಿವೃದ್ಧಿ ಸಚಿವರು ಕೂಡಾ ಇವತ್ತಿನ ದಿವಸ ಈ ಸದನದಲ್ಲಿಯೇ ಇದ್ದಾರೆ, ಅವರು ಒಂದು ಯೋಜನೆಯನ್ನೇ ಕೊಟ್ಟಿರು. ಯೋಜನೆಯಲ್ಲಿರತಕ್ಕಂಥ ಸುಮಾರು 37-8 ಕೋಟಿ ರೂಪಾಯಿಯ ಜೊತೆಗೆ ಈ 25 ಕೋಟಿ ರೂಪಾಯಿಗಳನ್ನು ಸೇರಿಸಿ ಸುಮಾರು 85 ಕೋಟಿ ರೂಪಾಯಿಗಳ ಯೋಜನೆಯನ್ನು ನಾವು ತಯಾರು ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ಕೂಡ ಹೇಳಿದ್ದರು. ಈ 85 ಕೋಟಿ ರೂಪಾಯಿಗಳಲ್ಲಿ ಎಷ್ಟು ಹಣ ಖರ್ಚಾಯಿತು ಎಂದು ಅವರೇ ಹೇಳಬೇಕು. ಏಕೆಂದರೆ ಆ ಇಲಾಖೆಯ ಜವಾಬ್ದಾರಿಯನ್ನು ಮಾನ್ಯ ಘೋರ್ಪಡೆಯವರೇ ಕೆಲವು ಕಾಲ ವಹಿಸಿದ್ದರು. ಅವರಾದ ಮೇಲೆ ಮಾನ್ಯ ಬಸವಲಿಂಗಪ್ಪನವರು ಈಗ ಆ ಇಲಾಖೆಯ ಜವಾಬ್ದಾರಿಯನ್ನು ವಹಿಸಿದ್ದಾರೆ.

ಉಪಾಧ್ಯಕ್ಷರು: ಮಾನ್ಯ ಭೈರೇಗೌಡರೇ, ಬೇಗ ಮುಗಿಸಿ. ಇನ್ನು ಬಹಳ ಜನ ಮಾತನಾಡುವರು ಇದ್ದಾರೆ, ಎಲ್ಲರಿಗೂ ಅವಕಾಶವನ್ನು ಕೊಡಬೇಕು.

ಶ್ರೀ ಸಿ. ಬೈರೇಗೌಡ: ಮಾನ್ಯ ಉಪಾಧ್ಯಕ್ಷರೇ, ಇದು ಸಾಮಾನ್ಯವಾದಂಥ ವಿಚಾರವಲ್ಲ, ಬಹಳ ತೀವ್ರತರವಾದಂಥ ವಿಚಾರದ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ಸರ್ಕಾರ ನಾವು ಏನೇ ಹೇಳಿದರೂ ಕೂಡಾ ಕಲ್ಲಿಗಿಂತ ಗಟ್ಟಿಯಾಗಿ ಕುಳಿತಿದೆ. ಜನರಿಗೆ ಕುಡಿಯುವುದಕ್ಕೂ ಕೂಡಾ ನೀರನ್ನು ಕೊಡಲಾರದಂಥ ಪರಿಸ್ಥಿತಿಗೆ, ಅಂತ ಒಂದು ಉಚ್ಛ್ರಾಯ ಪರಿಸ್ಥಿತಿಗೆ ಸರ್ಕಾರ ಇವತ್ತು ಬಂದು ಕುಳಿತಿದೆ. ಇವತ್ತು ಈ ಯೋಜನೆ ಏನು ಆಯಿತು. ಆ ಹಣ ಏನಾಯಿತು ಎನ್ನತಕ್ಕಂಥದ್ದರ ಬಗ್ಗೆ ಅವರು ವಿವರವನ್ನು ಕೊಡಬೇಕು. ಮತ್ತೊಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದೇನೆಂದರೆ ಇವತ್ತು ನನ್ನ ಎದುರುಗಡೆ ಒಂದು ಆಜ್ಞೆ ಇದೆ.

ಈ ರಾಜ್ಯದಲ್ಲಿ ನೀರನ್ನು ಒದಗಿಸತಕ್ಕ ಇಲಾಖೆ ಏನಿದೆ, ಅದಕ್ಕೆ ಒಬ್ಬ ಇಂಜಿನಿಯರ್ ಇದ್ದಾರೆ. Office of the Engineer-in-chief, Public Health, Engineering, Bangalore Urban District.

ಜನಾರೋಗ್ಯ ಇಲಾಖೆಯ ಪ್ರಧಾನ ಮುಖ್ಯ ಇಂಜಿನಿಯರ್‌ರವರು ಒಂದು ಆಜ್ಞೆಯನ್ನು ರಾಜ್ಯದಲ್ಲಿರತಕ್ಕ ಎಲ್ಲಾ ಜಿಲ್ಲಾಪರಿಷತ್ತುಗಳಿಗೂ ಮತ್ತು ಬೆಂಗಳೂರು ಅರ್ಬನ್ ಡಿಸ್ಟ್ರಿಕ್ಟ್ ಅವರಿಗೂ ಸಹ ಕಳುಹಿಸಿದ್ದಾರೆ. To the Deputy Commisitioner, Bangalore, Urban District, Bangalore, To the Chief Secretary, Zilla Parishath, Kolar,...

ಇದೇ ರೀತಿ ಪತ್ರವನ್ನು ರಾಜ್ಯದ ಎಲ್ಲಾ ಜಿಲ್ಲಾ ಪರಿಷತ್ತುಗಳಿಗೂ ಕಳುಹಿಸಿದ್ದಾರೆ. ಅದರಲ್ಲಿರುವ ವಿಷಯ ಏನೆಂದರೆ:

Sub: Preparation of programmes for implementation of Rural Water supply Scheme out of the proposed additional grant of Rs. 25 crores for the year 1990-91.

The Government of Karnataka is contemplating to release additional grant of Rs. 25 crores to provide drinking water to the villages which are facing shortage of drinking water. This is in addition to plan allocátion already made by Government for the current financial year. Drinking water supply is considered to be one of the priority sector and Government desides to provide

immediate relief to the population in need of adequate potable drinking water supply...

ನಾನು ಎಲ್ಲವನ್ನೂ ಹೇಳಲಿಕ್ಕೆ ಹೋಗುವುದಿಲ್ಲ. ಅದರಲ್ಲಿ ಯಾವ್ಯಾವುದಕ್ಕೆ ಆದ್ಯತೆ ಕೊಟ್ಟಿದ್ದಾರೆ ಅಂದರೆ-piped water supply schemes, Minis water supply schemes, borewell with hand pumps, reviving the existing piped water supply and mini water supply, augmentation of piped water supply schemes...

ಈ ರೀತಿ 5 ವಿಧದಲ್ಲಿ ಕಾರ್ಯಕ್ರಮವನ್ನು ಅವರೇ ಹಾಕಿದ್ದಾರೆ. ಅದರ ಮೇಲೆ ಯಾವ ರೀತಿಯಾಗಿ ಹಳ್ಳಿಗಳನ್ನು ಸೆಲೆಕ್ಟ್ ಮಾಡಬೇಕು ಎಂಬ ಬಗ್ಗೆ ವಿವರವಾದಂತಹ ಪ್ರೊಸಿಜರ್ ಅನ್ನು ಅವರು ತಿಳಿಸಿದ್ದಾರೆ. ಇದಾದ ಮೇಲೆ ಎಲ್ಲಾ ಜಿಲ್ಲಾಪರಿಷತ್ತಿಗೂ ಈ ರೀತಿಯಾದ ಪತ್ರ ಹೋಗಿದೆ. ಕೋಲಾರ ಜಿಲ್ಲೆಯಲ್ಲಿ ಇದರ ಬಗ್ಗೆ ತೆಗೆದುಕೊಂಡ ಕಾರ್ಯಕ್ರಮದ ಪತ್ರದ ಪ್ರತಿ ಕೂಡ ನನ್ನ ಹತ್ತಿರ ಇದೆ. 10ಪುಟದ ಕಾರ್ಯಕ್ರಮವನ್ನು ಯಾರ ರೀತಿ ಹಾಕಿದ್ದಾರೆ ಅನ್ನತಕ್ಕದ್ದು ಮತ್ತು ಜಿಲ್ಲಾಪರಿಷತ್ತಿನ ಸಭೆಯಲ್ಲಿ ಎಲ್ಲಾ ಪಕ್ಷದ ಸದಸ್ಯರೂ ಹಾಗೂ ಶಾಸನ ಸಭಾ ಸದಸ್ಯರುಗಳು ತಮ್ಮ ತಮ್ಮ ಸಲಹೆಯನ್ನು ನೀಡಿದ್ದಾರೆ. 22-9-1990ರ ಜಿಲ್ಲಾ ಪರಿಷತ್ತಿನ ಸಭೆಯಲ್ಲಿ ಇಂಜಿನಿರ್ ಇನ್-ಚೀಫ್ ಕೊಟ್ಟಿರತಕ್ಕ ಪತ್ರದಲ್ಲಿ ಕೋಲಾರ ಜಿಲ್ಲೆಗೆ 1.23 ಕೋಟಿ ಹಣವನ್ನು ಬಿಡುಗಡೆ ಮಾಡಿದ್ದಾರೆ. 1.23 ಕೋಟಿ ಹಣವನ್ನು ಕೋಲಾರ ಜಿಲ್ಲಾಪರಿಷತ್ತಿನ ಸದಸ್ಯರು ಶಾಸಕರು ಎಲ್ಲರೂ ಸೇರಿ ಸುಮಾರು 10 ಪುಟದ ಅವರ ತೀರ್ಮಾನವನ್ನು ಇವತ್ತಿನ ದಿವಸ ಕೊಟ್ಟಿದ್ದಾರೆ. ಇದರಲ್ಲಿ ಇಲ್ಲಿಯವರೆಗೂ ಕೂಡ ಒಂದು ಸಣ್ಣ ಕೆಲಸವೂ ಆಗಿಲ್ಲ. ನೀರು ಕೊಡುವುದಕ್ಕೆ ಸಹ ಸರ್ಕಾರ ಪ್ರಯತ್ನ ಪಟ್ಟಿಲ್ಲ.

ಉಪಾಧ್ಯಕ್ಷಣಿಯರು: ಇನ್ನೂ 9 ಜನ ಮಾತನಾಡಬೇಕೆಂದಿದ್ದಾರೆ, ಬೇಗ ಮುಗಿಸಿ.

ಶ್ರೀ ಸಿ. ಬೈರೇಗೌಡ: ಈ ವಿಚಾರವನ್ನು ಅನೇಕ ಸಾರಿ ಅವರ ಗಮನಕ್ಕೆ ತಂದಿದ್ದೇವೆ. ಆದರೆ ಅವರಿಗೆ ಈ ಕಡೆ ತಿರುಗಿ ನೋಡುವಂತಹದ್ದೇ ಆಗಲಿ, ಅಥವಾ ಹಳ್ಳಿಯಲ್ಲಿ ಕುಡಿಯುವ ನೀರಿಗೆ ತೊಂದರೆ ಇರುವುದನ್ನು ತಿಳಿದುಕೊಳ್ಳುವಂತಹ ವ್ಯವದಾನ ಅವರಿಗೆ ಇಲ್ಲರೆಂದು ಬಹಳ ವಿಷಾದದಿಂದ ನಾನು ಹೇಳಬೇಕಾಗಿದೆ. ಅವರು ತಿಳಿದುಕೊಂಡಿದ್ದರೆ ಅವರು ಈ ರೀತಿಯಾಗಿ ವ್ಯವಹಾರ ನಡೆಸುತ್ತಿರಲಿಲ್ಲ. ಈ ರೀತಿಯ ನಡವಳಿಕೆ ಅವರಿಂದ ನೀವು ನಿರೀಕ್ಷೆ ಮಾಡಿರಲಿಲ್ಲ, ಇವತ್ತಿಗೂ ಸಹ ಈ ಕುಡಿಯುವ ನೀರನ್ನು ಒದಗಿಸುವುದಕ್ಕೆ ಯಾವ ಒಂದು ಪ್ರಯತ್ನವನ್ನೂ ಸಹ ಮಾಡಿಲ್ಲ, ನಾನು ಸರ್ಕಾರದ ತೀರ್ಮಾನಗಳನ್ನು ಸಹ ಓದಿದ್ದೇನೆ. ಇದು ಬಹಳ ದುರದೃಷ್ಟಕರ ನಾನು ಈ ಸರ್ಕಾರದ ನೀತಿಯನ್ನು ಖಂಡಿಸಿ ನನ್ನ ಶಕ್ತಿ ಎಷ್ಟಿದೆ ಅಷ್ಟನ್ನು ಉಪಯೋಗಿಸಿ ಖಂಡಿಸಿದೆ ಗತ್ಯಂತರ ಇಲ್ಲ. ಈ ಸಭೆ 21ಕ್ಕೆ ಮುಗಿಯುತ್ತದೆ. ನಾವು ಊರಿಗೆ ಹೋಗಬೇಕಾಗಿದೆ. ಊರಿಗೆ ಹೋದಾಗ ಸರಿಯಾಗಿ ನೀರು ಇಲ್ಲ ಎಂದು ಕೇಳುತ್ತಾರೆ. ನಾವು ಏನು ಉತ್ತರ ಹೇಳಬೇಕಾಗಿದೆ. ಆದ್ದರಿಂದ ಗ್ರಾಮೀಣಾಭಿವೃದ್ಧಿ ಸಚಿವರಲ್ಲಿ ನಾನು ಕೇಳುವುದು ಒಂದೇ ಒಂದು ಮಾತು ಏನೆಂದರೆ ನೀವು ನೀರು ಕೊಡುತ್ತೀರೋ ಇಲ್ಲವೋ? ಅದನ್ನು ಹೇಳಿ. ಈಗ ನೀವು ಏನು ಹೇಳುತ್ತೀರೋ ಅದನ್ನೇ ನಾವು ಅವರಿಗೆ ಹೇಳುತ್ತೇವೆ.

ನೀವು ಬಂದಾಗ ಅವರು ನಿಮ್ಮ ಮುಖಕ್ಕೆ ಮಂಗಳಾರತಿ ಎತ್ತತಕ್ಕ ಕಾಲ ದೂರ ಇಲ್ಲ, ಅದು ನಿಮಗೆ ಜ್ಞಾಪಕ ಇದ್ದಿದ್ದರೆ, ನೀವು ಈ ರೀತಿಯಾದಂಥ ವ್ಯವಹಾರವನ್ನು ಈ ರೀತಿಯಾದ ಉದ್ಧಟತನವನ್ನು ತೋರಿಸುತ್ತಿರಲಿಲ್ಲ. ಈ ಉದ್ಧಟತನವನ್ನು ಬಿಟ್ಟು ಪ್ರತಿ ನಿಮಿಷದಲ್ಲೂ ಜನರಿಗೆ ಏನು ತೊಂದರೆ ಇದೆ,

ಅದನ್ನು ಬಗೆಹರಿಸತಕ್ಕ ಕ್ರಮವನ್ನು ತಕ್ಷಣ ತೆಗೆದುಕೊಳ್ಳಬೇಕಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಸನ್ಮಾನ್ಯ ಉಪಾಧ್ಯಕ್ಷರೇ, ಈ ಸದನದಲ್ಲಿ ಕಳೆದ 15-16 ದಿವಸಗಳಿಂದ ಎರಡು ಬಾರಿ ಕೊಳವೆ ಬಾವಿ ರಿಪೇರಿ ಮತ್ತು ಕೊಳವೆ ಬಾವಿಗಳನ್ನು ಹೆಚ್ಚು ಹಾಕತಕ್ಕದ್ದರ ಬಗ್ಗೆ ಚರ್ಚೆಯಾಗಿದೆ. ಕಳೆದ ಶನಿವಾರ, ಭಾನುವಾರ ಈ ಸದನಕ್ಕೆ ರಜೆ ಇದ್ದುದರಿಂದ, ನಾವು ನಮ್ಮ ಹಳ್ಳಿಗಳ ಕಡೆಗೆ ಹೋಗಿದ್ದೆವು. ಅಲ್ಲಿ ನೋಡಿದರೆ ಒಂದು ಪೈಸೆಯ ಅಭಿವೃದ್ಧಿಯ ಕಾರ್ಯ ನಡೆದಿಲ್ಲ. ಬೋರ್‌ವೆಲ್‌ಗಳ ರಿಪೇರಿಯಾಗಿಲ್ಲ. ನಿನ್ನೆಯ ದಿವಸ ಈ ವಿಚಾರವನ್ನು ಚರ್ಚೆ ಮಾಡುತ್ತಿದ್ದಂಥ ಸಂದರ್ಭದಲ್ಲಿ ತಾವು ಈ ವಿಚಾರದ ಗಂಭೀರತೆಯನ್ನು ಅರ್ಥಮಾಡಿಕೊಂಡು ಇವೊತ್ತು ಚರ್ಚೆ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದೀರಿ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಎಲ್ಲ ಕೆರೆಕಟ್ಟೆಗಳಲ್ಲೂ ಮೊದಲು ನೀರು ಇತ್ತು. ಇವೊತ್ತು ಎಲ್ಲೂ ನೀರಿಲ್ಲದಂತಾಗಿದೆ. ಇವೊತ್ತು ಮನುಷ್ಯರು, ಪ್ರಾಣಿಗಳು, ದನಕರುಗಳು, ಕುಡಿಯುವ ನೀರಿಗೆ ಬೋರ್‌ವೆಲ್ ನೀರನ್ನೇ ಅವಲಂಬಿಸಬೇಕಾಗಿದೆ. ಮೊದಲು ಅಂದರೆ ಬರ ಇಲ್ಲದೇ ಇದ್ದಂಥ ಸಂದರ್ಭದಲ್ಲಿ ಒಂದು ಬೋರ್‌ವೆಲ್ ರಿಪೇರಿಗಾಗಿ ಸರಾಸರಿ 250 ರೂಪಾಯಿಗಳನ್ನು ಕೊಡುತ್ತಿದ್ದರು. ಬರ ಇಲ್ಲದೆ ಇದ್ದಾಗ ಬೋರ್‌ವೆಲ್‌ಗಳು ವರ್ಷಕ್ಕೆ ಒಂದು ಸಾರಿ, ಎರಡು ಸಾರಿ ರಿಪೇರಿಗೆ ಬರುತ್ತಿದ್ದುವು. ಈಗ ಎಲ್ಲಾಕಡೆ ಜನರು ಬೋರ್‌ವೆಲ್ ಅವಲಂಬಿಸಿರುವುದರಿಂದ ಒಂದು ಬೋರ್‌ವೆಲ್, ಒಂದು ವರ್ಷಕ್ಕೆ ಹತ್ತು ಸಾರಿ ರಿಪೇರಿಗೆ ಬರುತ್ತದೆ. ಆದ್ದರಂದ ಈಗ ಕೊಡುತ್ತಿರತಕ್ಕಂಥ 250 ರೂಪಾಯಿ ಏನೇನು ಸಾಲದು, ಅದನ್ನು ಕೊನೇಪಕ್ಷ 350 ರೂಪಾಯಿಗಾದರೂ ಹೆಚ್ಚಿಸಿ ಬಿಡುಗಡೆ ಮಾಡಬೇಕು. ಅದರ ಜೊತೆಯಲ್ಲಿ ಬೋರ್‌ವೆಲ್ ರಿಪೇರಿ ಮಾಡತಕ್ಕ ವ್ಯವಸ್ಥೆಯನ್ನು ಮಾಡಬೇಕು. ಏಕೆಂದರೆ ಹಳ್ಳಿಗಳಲ್ಲಿ ಪ್ರತಿನಿಮಿಷಗಳಲ್ಲಿಯೂ ಬೋರ್‌ವೆಲ್‌ಗಳು ರಿಪೇರಿಗೆ ಬರುತ್ತಿವೆ. ಇದರ ವ್ಯವಸ್ಥೆ ಬಗ್ಗೆ ಹೇಳಬೇಕೆಂದರೆ, ತಾಲ್ಲೂಕು ಮಟ್ಟದಲ್ಲಿ ಜಿಲ್ಲಾಪರಿಷತ್ ಇಂಜಿನಿಯರಿಂಗ್ ವಿಭಾಗದಲ್ಲಿ ಬೋರ್‌ವೆಲ್ ರಿಪೇರಿ ಮಾಡತಕ್ಕ ಒಂದು ಯೂನಿಟ್ ಇದೆ. ಅಲ್ಲಿ ಸುಮಾರು ನಾಲ್ಕೈದು ಜನರು ಕೆಲಸ ಮಾಡುತ್ತಿರುತ್ತಾರೆ. ಸುಮಾರು 6 ತಿಂಗಳ ಹಿಂದೆ ಬರ ಇಲ್ಲದೇ ಇದ್ದಾಗ, ಯಾರು ಬೋರ್‌ವೆಲ್‌ಗಳನ್ನು ಅವಲಂಬಿಸಿರಲಿಲ್ಲವೋ, ಆ ಸಂದರ್ಭದಲ್ಲಿ ಒಂದು ತಾಲ್ಲೂಕಿನಲ್ಲಿ ಬೋರ್‌ವೆಲ್ ರಿಪೇರಿ ಮಾಡತಕ್ಕಂಥವರು ಐದಾರೂ ಜನ ಇದ್ದರು. ಇವೊತ್ತು ಪರಿಸ್ಥಿತಿ ಇಷ್ಟು ವಿಕೋಪಕ್ಕೆ ಹೋಗಿರುವುದರಿಂದ, ರಿಪೇರಿ ಮಾಡತಕ್ಕ ಯೂನಿಟ್‌ನಲ್ಲಿ ಈಗ ಎಷ್ಟು ಜನ ಇದ್ದಾರೆ, ಅದು ಸಾಲುವುದಿಲ್ಲ. ಆದ್ದರಿಂದ ಇರತಕ್ಕಂಥ ಯೂನಿಟ್ ಅನ್ನು ಡಬ್ಬಲ್ ಮಾಡಬೇಕಾದಂಥ ಅವಶ್ಯಕತೆ ಇದೆ. ಅದನ್ನು ತಾವು ಮಾಡಬೇಕು. ಜೊತೆಗೆ ಎರಡು ವಾಹನಗಳನ್ನು ಕೊಡಬೇಕು. ಇನ್ನೊಂದು ವಿಷಯ ಅಂದರೆ ಕಳೆದ ಮೂರು ತಿಂಗಳ ಹಿಂದೆ ನಮ್ಮ ಜಿಲ್ಲೆಯಲ್ಲಿ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೆವು. ಮಂಡಲ್ ಪಂಚಾಯಿತ್ತಿಯವರು ಬೋರ್‌ವೆಲ್‌ಗಳನ್ನು ರಿಪೇರಿ ಮಾಡುತ್ತಿದ್ದರು. ಅವರಿಗೆ ವಾಹನದ ಸೌಕರ್ಯ ಇರಲಿಲ್ಲ. ಆ ಸಂದರ್ಭದಲ್ಲಿ ಬೋರ್‌ವೆಲ್‌ಗಳನ್ನು ರಿಪೇರಿ ಮಾಡಿಸಲಿಕ್ಕೆ ಬಹಳ ಕಷ್ಟವಾಗುತ್ತಿತ್ತು. ಬೋರ್‌ವೆಲ್‌ಗಳ ರಿಪೇರಿ ಕೆಲಸ ಬಹಳ ಜಾಸ್ತಿ ಬಂತು. ಒಮ್ಮೆ ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳನ್ನು ಒಂದು ಮೀಟಿಂಗ್‌ಗೆ ಕರೆದಾಗ ಈ ವಿಚಾರದಲ್ಲಿ ಗಲಾಟೆ ಮಾಡಿದೆವು. ಆಗ ಎಲ್ಲಾ ಇಲಾಖೆಗಳಲ್ಲಿರತಕ್ಕ ವಾಹನಗಳನ್ನು ಜಿಲ್ಲಾಪರಿಷತ್‌ಗೆ ಕೊಟ್ಟು 10-20 ಜನರು ಸಿಬ್ಬಂದಿ ವ್ಯವಸ್ಥೆ ಮಾಡಿ, ಜಿಲ್ಲಾಪರಿಷತ್‌ನ ವಿಭಾಗದಲ್ಲಿ ಬರತಕ್ಕ ಎಲ್ಲಾ ಬೋರ್‌ವೆಲ್‌ಗಳನ್ನು ಒಂದು ಸಾರಿ ರಿಪೇರಿ ಮಾಡಿಸಿದರು. ಆ ರೀತಿಯಾಗಿ 15 ದಿವಸದ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೆವು. ಅದೇ ರೀತಿ, ಈಗ

ಇಡೀ ರಾಜ್ಯದಲ್ಲಿರತಕ್ಕ ಎಲ್ಲಾ ಗ್ರಾಮಾಂತರ ಪ್ರದೇಶಗಳಲ್ಲಿ ಬೋರ್‌ವೆಲ್‌ಗಳ ರಿಪೇರಿ ಮಾಡಿಸುವಂಥ ಕೆಲಸವನ್ನು ಮಾಡಬೇಕು. ಅನಂತರ ಈಗ ಇರತಕ್ಕ ಅವರ ಸ್ಟಾಫ್ ಏನಿದೆ ಅದು ಸಾಲುವುದಿಲ್ಲ ಅದನ್ನು ಡಬ್ಬಲ್ ಮಾಡಬೇಕು. ಮತ್ತೆ ರಿಪೇರಿಗಾಗಿ 250 ರೂಪಾಯಿ ಕೊಡುವಂತಾದ್ದು ಏನಿದೆ ಅದನ್ನು 350 ರೂಪಾಯಿಗೆ ಹೆಚ್ಚಿಸಬೇಕು. ಸರ್ಕಾರ ಬೋರ್‌ವೆಲ್‌ಗಳ ರಿಪೇರಿ ಮಾಡಿಸುವುದರ ಜೊತೆಗೆ ಹೊಸ ಬೋರ್‌ವೆಲ್ ಹಾಕಿಸುವುದು ಅಗತ್ಯವಿದೆ. ಈಗ ನೀರಿನ ಮಟ್ಟ ಭೂಮಿಯಲ್ಲಿ ಆಳಕ್ಕೆ ಹೋಗಿರುವುದರಿಂದ, ಬೋರ್‌ವೆಲ್‌ನಲ್ಲಿ ಪೈಪನ್ನು ಜಾಸ್ತಿ ಬಿಡತಕ್ಕ ವ್ಯವಸ್ಥೆಯಾಗಬೇಕು. ಒಂದು ಬೋರ್‌ವೆಲ್‌ಗೆ ಹೊಸದಾಗಿ ಪೈಪುಗಳನ್ನು ಬಿಡಬೇಕಾದರೆ, ಸುಮಾರು ಒಂದು ಸಾವಿರ ರೂಪಾಯಿ ಖರ್ಚು ಬರುತ್ತದೆ. ತಾವು ಒಂದು ಸಾವಿರ ರೂಪಾಯಿ ಖರ್ಚು ಮಾಡಿ ಬೋರ್‌ವೆಲ್ ಆಳಮಾಡಿ ಪೈಪ್ ಬಿಡತಕ್ಕದ್ದು ಮಾಡಿದರೆ . ಒಂದು ಹೊಸ ಬೋರ್‌ವೆಲ್ ಹಾಕಿಸಿದಂತಾಗುತ್ತದೆ. ಇದುವರೆಗೂ ಈ ವ್ಯವಸ್ಥೆ ಜಿಲ್ಲಾಪರಿಷತ್‌ನಲ್ಲಿ ಇಲ್ಲ. ಆದ್ದರಿಂದ, ಈ ಬೋರ್‌ವೆಲ್‌ಗಳಿಗೆ, ಪೈಪ್ ಬಿಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ.

ಮತ್ತೆ ಸ್ಕೇರ್ಸಿಟಿಯಲ್ಲಿ ಹೊಸದಾಗಿ ಬೋರ್‌ವೆಲ್‌ಗಳನ್ನು ಹೊಸದಾಗಿ ಕೊರೆಸುವುದಕ್ಕೆ ಜಿಲ್ಲಾಧಿಕಾರಿಗಳಿಗೆ ತಾವು ಆದೇಶವನ್ನು ಕೊಟ್ಟಿದ್ದೀರಿ. ಕೆಲವರು ಕೊರೆಯುತ್ತಿದ್ದಾರೆ. ಆದರೆ ಜಿಲ್ಲಾಧಿಕಾರಿಗಳು ರೇಟ್‌ನಲ್ಲಿ ಬಹಳ ಜಿಗುಪ್ಸೆ ಮಾಡುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಹತ್ತು ರೂಪಾಯಿ ಹೆಚ್ಚೋ ಕಡಿಮೆಯೋ ಕೊಟ್ಟು ಕೊರೆಸಬೇಕು. ಏಕೆಂದರೆ ರಿಗ್‌ಗಳನ್ನು ಇಟ್ಟುಕೊಂಡಿರುವವರು ಕಡಿಮೆ ರೇಟ್‌ಗೆ ಬಂದು ಕೊರೆಯುವುದಿಲ್ಲ 10-20ರೂ. ಹೆಚ್ಚಿಗೆ ಕೊಟ್ಟು ತಕ್ಷಣ ಬೋರ್‌ವೆಲ್‌ಗಳನ್ನು ಕೊರೆಸತಕ್ಕ ವ್ಯವಸ್ಥೆ ಮಾಡಬೇಕು ಬೋರ್‌ವೆಲ್‌ಗಳನ್ನು ಸ್ಯಾಂಕ್ಷನ್ ಮಾಡಿದ ಒಂದು ವಾರದೊಳಗೆ ಕೊರೆಯತಕ್ಕ ವ್ಯವಸ್ಥೆ ಮಾಡಬೇಕೆಂದು ನನ್ನ ಒಂದು ಸಲಹೆ.

ಯಾರು ಜಿಲ್ಲಾ ಉಸ್ತುವಾರಿ ಮಂತ್ರಿಗಳಿದ್ದಾರೆ ಅವರು ಪ್ರತಿ 15 ದಿವಸಕ್ಕೆ ಒಮ್ಮೆ ಸಭೆ ಕರೆದು ಇಡೀ ಜಿಲ್ಲಾ ಮಟ್ಟದಲ್ಲಿ ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ ತಿಳಿದುಕೊಳ್ಳುವುದಕ್ಕೆ ವ್ಯವಸ್ಥೆಯಾಗಬೇಕು. ಮುಂದೆ ಬರತಕ್ಕ 2 ತಿಂಗಳುಗಳು ಬಹಳ ಭೀಕರವಾಗಿರುತ್ತವೆ. ಮಾನ್ಯ ಶಾಸಕರು ಯಾರೂ ಕೂಡ ಗ್ರಾಮಾಂತರ ಪ್ರದೇಶದಲ್ಲಿ ತಿರುಗಾಡಲು ಜನರು ಬಿಡುವುದಿಲ್ಲ ಆ ಮಟ್ಟಕ್ಕೆ ತಲೆ ಕೆಡಿಸಿಕೊಂಡಿದ್ದಾರೆ. ಎಲ್ಲಿ ನೋಡಿದರಲ್ಲಿ ಹಾಹಾಕಾರ ಹಳ್ಳಿಗಳಲ್ಲಿದೆ. ಅದುದರಿಂದ ಈ ವ್ಯವಸ್ಥೆ ಅತಿ ಶ್ರೀಘ್ರವಾಗಿ ಆಗಬೇಕು. ಬೋರ್‌ವೆಲ್‌ಗಳ ಬಗ್ಗೆ ನನ್ನ ತಾಲೂಕಿನ ಒಂದು ಉದಾಹರಣೆಯನ್ನು ಕೊಡುತ್ತೇನೆ. ಜನರಲ್‌ಸ್ಕೀಮ್‌ನಲ್ಲಿ ಒಂದು ಮಿನಿ ವಾಟರ್ ಸ್ಕೀಂ ಕೊಡಿ ಎಂದರೆ 750 ರಿಂದ 1000 ಜನಸಂಖ್ಯೆ ಇರತಕ್ಕ ಕಡೆಗಳಲ್ಲಿ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. 5 ಬೋರ್‌ವೆಲ್‌ಗಳನ್ನು ಹಾಕಿರತಕ್ಕ ಇವೆ. ಆ ಬೋರ್‌ವೆಲ್‌ಗಳಲ್ಲಿ ನೀರೇ ಬರುತ್ತಿಲ್ಲ, 3-4 ಕಿಲೋಮೀಟರ್ ದೂರದಿಂದ ಹೆಣ್ಣುಮಕ್ಕಳು ನೀರನ್ನು ತರುತ್ತಾರೆ. ಆದುರಿಂದ ನನ್ನ ಸಲಹೆ ಎಂದರೆ ಈಗ ಸ್ಕೇರ್ಸಿಟಿನಲ್ಲಿ ಅಫೆಕ್ಟ್ ಆಗುವುದರಿಂದ ಯಾವತ್ತಾದರೂ ಸರ್ಕಾರದವರು ಹಣವನ್ನು ಖರ್ಚುಮಾಡಲೇಬೇಕು. ಆದ್ದರಿಂದ 50-50ಮಿನಿ ವಾಟರ್ ಸ್ಕೀಂಗಳನ್ನು ಎರಡೆರಡು ಹಳ್ಳಿಗಳನ್ನು ಸೇರಿಸಿ ಮಾಡಿಸಿ ಒಂದು ಒಂದೂವರೆ ಲಕ್ಷ ರೂಪಾಯಿ ಖರ್ಚಾದರೂ ಪರವಾಗಿಲ್ಲ ಮಿನಿ ವಾಟರ್ ಸ್ಕೀಂ ವ್ಯವಸ್ಥೆಯನ್ನು ಶೀಘ್ರವಾಗಿ ಮಾಡತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕು ಇದನ್ನು ಶೀಘ್ರವಾಗಿ ಮಾಡದಿದ್ದರೆ ಬಹಳ ಅನಾಹುತಕ್ಕೆ ನಾವು ಇಡಾಗುತ್ತೇವೆ. ಸದನ ಕೇವಲ 3 ದಿವಸ ಮಾತ್ರ ಇದೆ. ಈ ತಿಂಗಳೆಲ್ಲಾ ನಾವು ಈ ಸದನದಲ್ಲಿದ್ದೇವೆ. ಮರ್ಯಾದೆಯಿಂದ ಇಲ್ಲಿದ್ದೇವೆ. ಊರಿಗೆ ಹೋದರೆ ನಮ್ಮನ್ನು ಜನರು ಓಡಿಸಿ ಆಡುತ್ತಾರೆ. ಇದಕ್ಕೆ ತಾವು ದಯಮಾಡಿ ಅವಕಾಶ ಕೊಡಬೇಡಿ ಗ್ರಾಮೀಣಾಭಿವೃದ್ಧಿ

ಮಂತ್ರಿಗಳಿಗೂ ಕೂಡ ಇದನ್ನು ಮಾಡಬೇಕೆಂದು ಬಹಳ ಕಾಳಜಿ ಇದೆ. ಆದರೆ ಇದಕ್ಕೆ ಪ್ರತ್ಯೇಕವಾದ ಒಂದು ಸಭೆಯನ್ನು ಕರೆದು ಎಲ್ಲರ ಅಭಿಪ್ರಾಯ ಪಡೆಯುವುದಾಗಿ ಹೇಳಿದ್ದೀರಿ. ಇವತ್ತಿನಿಂದಲೇ ಯಾವುದೇ ಶಾಸಕರಿಂದ ಬೋರ್‌ವೆಲ್ ರಿಪೇರಿ ಬಗ್ಗೆ ದೂರುಗಳನ್ನೇನಾದರೂ ಬಂದರೆ ಇಲ್ಲವೇ ಸಾರ್ವಜನಿಕರಿಂದ ಬಂದ ಕೂಡಲೇ ಸಂಭಂದ ಪಟ್ಟ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುತ್ತೇನೆಂದು ಹೇಳತಕ್ಕ ಒಂದು ಕೂಗನ್ನು ಈ ಸಧನದಲ್ಲಿಯೇ ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಹೇಳಬೇಕು ಈ ರೀತಿ ಹೇಳಿದರೆ ಮಾತ್ರ ಅವರು ಹೆದರುತ್ತಾರೆ. ಇಲ್ಲದಿದ್ದರೆ ಜಪ್ಪಯ್ಯ ಎಂದರೂ ಕೂಡ ಅಧಿಕಾರಿಗಳು ಅಲ್ಲಾಡುವುದಿಲ್ಲ ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿರತಕ್ಕ ಅಧಿಕಾರಿಗಳು ಸರಿಯಾಗಿ ಬೋರ್‌ವೆಲ್‌ಗಳ ರಿಪೇರಿ ಕೆಲಸವನ್ನು ಮಾಡಿಸಬೇಕು. ರಿಪೇರಿಗೋಸ್ಕರ ಇಟ್ಟಿರತಕ್ಕ ಹಣದಲ್ಲಿ ಸ್ವಲ್ಪ ಹೆಚ್ಚೂ ಕಡಿಮೆ ಮಾಡತಕ್ಕದ್ದು ನಿಮಗೆ ಸೇರಿದ್ದು. ಆದರೆ ಈ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕು. ಯಾವುದೇ ಜಿಲ್ಲೆಯಲ್ಲಾಗಲಿ ರಿಪೇರಿ ಮಾಡಿಸುವುದಕ್ಕೆ ದುಡ್ಡಿಲ್ಲ ಎಂದು ಹೇಳಿದರೆ ಅವರಮೇಲೆ ತೀವ್ರವಾದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಸರ್ಕಾರದಲ್ಲಿ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್(ಚಾಮರಾಜ ನಗರ): ಮಾನ್ಯ ಉಪಾಧ್ಯಕ್ಷರೆ ಈ ಒಂದು ಗಂಭೀರ ಪರಿಸ್ಥಿತಿಯ ಬಗ್ಗೆ ಇವತ್ತು ತಾವು ಚರ್ಚೆಗೆ ಅವಕಾಶ ಮಾಡಿಕೊಟ್ಟಿರುವುದಕ್ಕೆ ತಮಗೆ ನಾನು ಅಭಿನಂದಿಸುತ್ತೇನೆ. ಈಗ ಕೆಲವೇ ಕೆಲವು ವಿಚಾರಗಳನ್ನು ತಮ್ಮ ಮುಂದಿಟ್ಟು ನನ್ನ ಮಾತನ್ನು ಮುಗಿಸುತ್ತೇನೆ. ಈಗ ಇಡೀ ರಾಜ್ಯದಲ್ಲಿ ಸರಾಸರಿ ಕೆಟ್ಟಿರುವಂಥ ಬೋರ್‌ವೆಲ್‌ಗಳು ಅಂಕೀಅಂಶಗಳನ್ನು ನಾನು ನೋಡಿದ್ದೇನೆ. ಸುಮಾರು 50 ಸಾವಿರ ಕೊಳವೆಬಾವಿಗಳು ಇರಬಹುದು. ನೀವು ಅಷ್ಟು ಇಲ್ಲವೆಂದು ಹೇಳುವುದಾದರೆ ಎಷ್ಟು ಕಡಿಮೆಯಾಗುತ್ತವೆ ಎಂಬುದನ್ನು ನೀವೇ ನೋಡಿ. ನನ್ನ ತಾಲೂಕು ಮತ್ತು ಸಂತೇಮರಹಳ್ಳಿ ಕನಿಷ್ಟ 850 ಕೊಳವೆ ಬಾವಿಗಳು ಕೆಟ್ಟಿವೆ. ಈ ಪ್ರಕಾರ ಲೆಕ್ಕ ಹಾಕಿದರೆ ಇಡೀ ರಾಜ್ಯದಲ್ಲಿ ಎಷ್ಟಾಗಬಹುದೆಂಬುದನ್ನು ನೀವು ಲೆಕ್ಕಹಾಕಬೇಕು. ನಮ್ಮ ರಾಜ್ಯದಲ್ಲಿ 52 ಸಾವಿರ ಹಳ್ಳಿಗಳ ಮೇಲಿವೆ ಆದ್ದರಿಂದ ಈ ವಿಚಾರವನ್ನು ನಾವು ಲಘುವಾಗಿ ತೆಗೆದುಕೊಳ್ಳುವಂಥಾದ್ದಲ್ಲ. ಈ ಹಳ್ಳಿಗಳನ್ನೆಲ್ಲಾ ನಿಮ್ಮ ಅಧಿಕಾರಿಗಳು ಪರಿಶೀಲಿಸಿ ಎಲ್ಲೆಲ್ಲಿ ಕೊಳವೆ ಬಾವಿಗಳೂ ಕೆಟ್ಟಿವೆ ಎಂಬುದನ್ನು ಒಂದು ಸಮಗ್ರ ಪಟ್ಟಿಯನ್ನು ಮಾಡಿಸಿ ತರಿಸಿಕೊಳ್ಳಬೇಕು ಯಾವುದೇ ಅಂಕಿಅಂಶಗಳಿಲ್ಲದೆ ಮಾತನಾಡುವುದು ಬೇಡ ಈಗ ನಾವು ಇರತಕ್ಕದ್ದು ಮಾರ್ಚಿ ತಿಂಗಳು ಇನ್ನೇನು ಮಾರ್ಚಿ ಮುಗಿಯುತ್ತಾ ಬಂತು. ಇನ್ನುಳಿದಿರತಕ್ಕ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ನೀವು ಸಮರೋಪಾದಿಯಲ್ಲಿ ಕೆಲಸವನ್ನು ಮಾಡಿದರೆ ಮಾತ್ರ ಸಾಧ್ಯ ಈ ಕೆಲಸ ಎಂದರೆ ಏನು? ಅಧಿಕಾರಿಗಳನ್ನು ಅಮಾನತ್ತಿನಲ್ಲಿ ಇಡುತ್ತೇವೆಂದರೆ ಆಗುವುದಿಲ್ಲ ಅಧಿಕಾರಿಗಳಿಗೆ ನೀವು ಹಣವನ್ನು ಕೊಡಬೇಕು ಕನಿಷ್ಠ 50 ಕೋಟಿ ರೂ. ಆದರೂ ಬಿಡುಗಡೆ ಮಾಡಬೇಕು. ನೀವು ಹಣವನ್ನು ಕೊಟ್ಟು ಯಾವ ಅಧಿಕಾರಿಗಳು ಕೆಲಸಮಾಡುವುದಿಲ್ಲ ಅಂಥ ಅಧಿಕಾರಿಗಳ ಮೇಲೆ ನೀವು ಕ್ರಮವನ್ನು ತೆಗೆದುಕೊಳ್ಳಿ ಆದರೆ ಹಣವನ್ನೇ ಕೊಡದೆ ನೀವು ಕೆಲಸಮಾಡಿ ನೀವು ಕೆಲಸಮಾಡಿ ಎಂದರೆ ಅವರು ಹೇಗೆ ಕೆಲಸಮಾಡುವುದಕ್ಕೆ ಸಾಧ್ಯ?

ಈ ಸಂದರ್ಭದಲ್ಲಿ ಕನಿಷ್ಠ 50 ಕೋಟಿ ರೂ ಆದರೂ ಈ ಕೂಡಲೇ ವಿಶೇಷವಾದ ಹಣ ಎಂದು ನೀವು ಬಿಡುಗಡೇ ಮಾಡಬೇಕು.

ಇನ್ನು ಕಿರು ನೀರು ಸರಬರಾಜು ಯೋಜನೆ ಏನಿದೆ ಇದಕ್ಕೆ ಬಹಳ ಆದ್ಯತೆಯನ್ನು ಕೊಡಬೇಕು ಅನೇಕ ಕಡೆ ಈ ನದಿಗಳು ಏನು ಹರಿಯುತ್ತವೆ ಆ ನದಿಗಳ ಪಕ್ಕದಲ್ಲೇ ಇರತಕ್ಕ ಹಳ್ಳಿಗಳಿಗೆ ಮತ್ತು ಪಟ್ಟಣಗಳಿಗೆ ಸಾಧ್ಯವಾದಷ್ಟೂ ಆಯಾ ನದಿಗಳ

ನೀರನ್ನು ಕೊಡತಕ್ಕ ಹೊಸ ಯೊಜನೆಗಳನ್ನು ತಾವು ಪ್ರಾರಂಭ ಮಾಡಬೇಕು ಈಗ ನಮ್ಮ ಚಾಮರಾಜ ನಗರಕ್ಕೆ 46 ಕಿಲೋಮೀಟರ್ ದೂರದಿಂದ ಅಂದರೆ ಟೀನರಸೀಪುರದಿಂದ ಚಾಮರಾಜನಗರಕ್ಕೆ ಕಾವೇರಿ ನೀರನ್ನು ತೆಗೆದುಕೊಂಡು ಹೋಗತಕ್ಕ ಯೋಜನೆಗೆ ಶಂಕುಸ್ಥಾಪನೆ ಸುಮಾರು 7 ತಿಂಗಳ ಹಿಂದೆ ಆಯಿತು. ಆದರೆ ಇದುವರೆಗೂ ಅಲ್ಲಿ ಏನೇನೂ ಕೆಲಸವಾಗಿಲ್ಲ. ನೀರನ್ನು ತುಂಬತಕ್ಕ 2 ಟ್ಯಾಂಕ್‌ಗಳನ್ನು ಕಟ್ಟಿದ್ದಾರೆ. ಇನ್ನು ಮುಂದೆ ಏಪ್ರಿಲ್‌ನಿಂದ ಕೆಲಸ ಶುರು ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇದನ್ನು ಬಹಳ ನೀಧಾನ ಮಾಡುತ್ತಿದ್ದೀರಿ. ಇದರಿಂದಾಗಿ ಯೋಜನಾ ವೆಚ್ಚ ಜಾಸ್ತಿಯಾಗುತ್ತದೆ. ಆಧುದರಿಂದ ಕೂಡಲೇ ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ನನ್ನ ಚಾಮರಾಜನಗರ ತಾಲ್ಲೂಕು ವರ್ಷಕ್ಕೆ 11 ತಿಂಗಳು ಬರಗಾಲಕ್ಕೆ ತುತ್ತಾಗುತ್ತದೆ. ಎಲ್ಲ ಕೆರೆಗಳೂ ಒಣಗಿ ಬತ್ತಿಹೋಗಿದೆ. ಕುಡಿಯುವ ನೀರು ಮನುಷ್ಯರಿಗೆ ಒಬ್ಬರಿಗೆ ಅಲ್ಲ ಅಲ್ಲಿಯ ದನಕರುಗಳಿಗೂ ಕೂಡ ನೀರಿಲ್ಲದೆ ಬಹಳ ಭೀಕರವಾದ ಪರಿಸ್ಥಿತಿ ಇರುತ್ತದೆ. ಸರ್ಕಾರದವರು ಈ ಬಗ್ಗೆ ತೀಪ್ರವಾಗಿ ಯೋಚನೆ ಮಾಡಬೇಕು. ತಮಗೆ ನಾನು ಹೇಳುತ್ತೇನೆ ಮಹಿಳೆಯರ ಶಾಫ ತಟ್ಟಬಾರದು ಮಹಿಳೆಯರ ಶಾಪ ತಟ್ಟಿದರೆ ಬಹುಶಃ ಅದು ಬಹಳ ಜ್ವಾಲೆಯಾಗಿ ಸರ್ಕಾರಕ್ಕೆ ತಿರುಗಿಬೀಳುತ್ತದೆ. ತಾವು ಮಹಿಳೆಯರಿದ್ದೀರಿ. ತಮ್ಮ ಆಶೀರ್ವಾದ ನಮಗೆ ಇರಬೇಕು ಈ ಮಾತನ್ನು ಹೇಳುವಾಗ ಒಂದು ವಿಚಾರ ನೆನಪಿಗೆ ಬರುತ್ತದೆ. ಮಹಿಳೆಯರು ತಲೆಯಮೇಲೆ ಕೈಮೇಲೆ ಬಿಂದಿಗೆಯನ್ನು ಹೊತ್ತುಕೊಂಡು ಎಲ್ಲಿಂದಲೋ ನೀರನ್ನು ತರುತ್ತಿರುವಾಗ ನಾವು ಅವರ ಎದುರಿಗೆ ನೋಡಿದರೆ ನಮಗೆ ಭಯವಾಗುತ್ತದೆ. ಕಾರಣವೇನೆಂದರೆ ಬಹಳ ದೂರದಿಂದ ಆ ನೀರನ್ನು ಹೊತ್ತುಕೊಂಡು ಬರುತ್ತೀರುತ್ತಾರೆ. ಎದುರಿಗೆ ಸಿಕ್ಕಿದರೆ ಎಲ್ಲಿ ಸ್ವಾಮಿ ನಮಗೆ ನೀರನ್ನು ಕೊಡಲಿಲ್ಲ ನಿಮಗೆ ಓಟನ್ನು ಕೊಟ್ಟಿದ್ದೇವೆಂದು ಕೇಳಿದರೆ ನಮ್ಮ ಪರಿಸ್ಥತಿ ಏನು ಎಂಬ ಭಯ ಭೀತಿ ಬರತಕ್ಕಂಥ ಪರಿಸ್ಥಿತಿ ಉಂಟಾಗಿದೆ. ಈ ಪರಿಸ್ಥಿತಿ ಇಡಿ ರಾಜ್ಯದಲ್ಲಿ ನಿರ್ಮಾಣವಾಗಿದೆ.

ಶ್ರೀ ಎಲ್.ಆರ್. ಶಿವರಾಮೇಗೌಡ: ಮಾನ್ಯ ಸಭಾಧ್ಯಕ್ಷರೇ ಮೊನ್ನೆ ನಾನು ಮತ್ತು ಮುನಿಯಪ್ಪನವರು ನನ್ನ ಕ್ಷೇತ್ರದಲ್ಲಿ ಹೋಗುತ್ತಿರಬೇಕಾದರೆ ನಮ್ಮ ಕಾರು ಬಾಯಲ್‌ಆಗಿದ್ದರಿಂದ ನಿಂತುಬಿಟ್ಟಿತು. ಒಬ್ಬ ಹೆಂಗಸರನ್ನು ಸ್ವಲ್ಪ ನೀರನ್ನು ಕೊಡಿ ಒಂದು ಬಕೆಟನೀರನ್ನು ಕಾರಿಗೆ ಹಾಕಬೇಕೆಂದು ಕೇಳಿದೆವು. ಅವರು ಹೇಳಿದರು ಬಹಳ ಚೆನ್ನಾಗಿ ಕೇಳುತ್ತೀರಿ ಕಟ್ಟಿರುವ ಬೋರ್‌ವೆಲ್‌ನ್ನು ರಿಪೇರಿ ಮಾಡಿಸಿಕೊಡುತ್ತೇವೆಂದು ಹೇಳಿದಿರಿ ರಿಪೇರಿ ಮಾಡಿಸಿಕೊಡಲಿಲ್ಲ ನಿಮ್ಮ ಮುಖಕ್ಕೆ ನೀರನ್ನು ಕೊಡಬೇಕೆ ಎಂದು ಹೇಳಿದರು.

ಶ್ರೀ ವಾಟಾಳ್ ನಾಗರಾಜ್ : ಅನೇಕ ಕಡೆ ಇಂಥ ಒಂದು ಪರಿಸ್ಥಿತಿ ಉದ್ಭವವಾಗಿದೆ. ಈ ನೀರಿನ ಸಮಸ್ಯೆಯನ್ನು ಬಗೆಹರಿಸದಿದ್ದರೆ ಸರ್ಕಾರ ಇನ್ನೇನನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆಂದು ಕೇಳಬೇಕಾಗುತ್ತದೆ. ಕುಡಿಯುವ ನೀರಿನ ಬಗ್ಗೆ ಬಹಳವಾಗಿ ಹೇಳುತ್ತಿದ್ದೀರಿ ಯೋಜನೆಗಳ ಮೇಲೆ ಯೋಜನೆಗಳನ್ನು ಹೇಳುತ್ತಿದ್ದೀರಿ. ಮಾತಿನಮೇಲೆ ಮಾತುಗಳನ್ನು ಆಡುತ್ತಿದ್ದೀರಿ. ಕುಡಿಯುವ ನೀರಿನ ವ್ಯವಸ್ಥೆಯನ್ನು ನಿಮ್ಮಲ್ಲಿ ಪರಿಣಾಮಕಾರಿಯಾಗಿ ಜಾರಿ ಮಾಡಲಿಕ್ಕಾಗಲಿಲ್ಲವೆಂದರೆ ನಿಮ್ಮ ಸರ್ಕಾರಕ್ಕೆ ಏನನ್ನು ಹೇಳಬೇಕೋ ಗೊತ್ತಾಗುತ್ತಿಲ್ಲ ನಿಮ್ಮ ಸರ್ಕಾರ ಉಳಿಯಬೇಕಾದರೆ ಕುಡಿಯುವ ನೀರಿನಿಂದ ನಿಮ್ಮ ಸರ್ಕಾರದ ಅಳಿವೂ ಕೂಡ ಈ ಕುಡಿಯುವ ನೀರಿನಿಂದಲೇ ಎಂದು ತಿಳಿದುಕೊಳ್ಳಬೇಕು ಆದ್ದರಿಂದ ಒಂದು ಸಮಗ್ರವಾಗಿ ರಾಜ್ಯಕ್ಕೆ ಬೇಕಾದ ಕುಡಿಯುವ ನೀರಿನ ವ್ಯವಸ್ಥೆಯನ್ನು ಅತಿಮುಖ್ಯವಾಗಿ ಮಾಡಬೇಕು ನನ್ನ ಕ್ಷೇತ್ರದ ಬಗ್ಗೆ ತೀವ್ರವಾದ ಗಮನವನ್ನು ಹರಿಸಬೇಕು ಅಲ್ಲಿ ಅತ್ಯಂತ ಭೀಕರವಾದ ಪರಿಸ್ಥಿತಿಯುಂಟಾಗಿದೆ. ನಾನಂತು ಪ್ರತಿ ವಾರ ಹಳ್ಳಿಗೆ ಹೋದಾಗ ಏನಪ್ಪ ಈ ಮಹಿಳೆಯರು ಏನು ಅನ್ನುತ್ತಾರೋ ಏನು ಪರಿಸ್ಥಿತಿ ಉದ್ಭವವಾಗುತ್ತದೋ ಎನ್ನುವ ಚಿಂತನೆಯುಂಟಾಗುತ್ತದೆ. ಈ

ಚಿಂತನೆಯನ್ನು ಹೊಗಲಾಡಿಸತಕ್ಕಂಥ ಪರಿಸ್ಥಿತಿ ಸರ್ಕಾರದಿಂದ ಕಾಣುತ್ತಿಲ್ಲ ಬಹಳವಾಗಿ ಕುಡಿಯುವ ನೀರಿನ ಅವ್ಯವಸ್ಥೆ ಎಲ್ಲೆಲ್ಲಿ ಇದೆ ಅಲ್ಲಿ ಸೂಕ್ತ ವ್ಯವಸ್ಥೆ ಮಾಡತಕ್ಕದ್ದು ತಮ್ಮ ಕರ್ತವ್ಯವಾಗಿದೆ. ಕೆಲವು ಕಡೆ ಲಾರಿಗಳಲ್ಲಿ ನೀರಿನ ಟ್ಯಾಂಕಗಳನ್ನು ಕಟ್ಟಿ ಅದರ ಮೂಲಕ ನೀರನ್ನು ಕೊಡುವ ವ್ಯವಸ್ಥೆಯನ್ನು ತಾವು ಮಾಡಬೇಕು. ಇನ್ನು ಎರಡುತಿಂಗಳಕಾಲ ಇದೇರೀತಿ ಭೀಕರವಾದ ಬರಗಾಲದ ಪರಿಸ್ಥಿತಿ ಜೊತೆಗೆ ಅಷ್ಟೇ ಕುಡಿಯುವನೀರಿನ ಬೇಡಿಕೆಯೂ ಇರುತ್ತದೆ. ಆದ್ದರಿಂದ ತಾವು ದಯವಿಟ್ಟು ಈ ಕೆಲಸವನ್ನು ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಶಫಿ ಅಹಮದ್ (ತುಮಕೂರು) : ಮಾನ್ಯ ಉಪಾಧ್ಯಕ್ಷಣೆಯವರೇ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಜಿ.ಆರ್.ವಿ.ಸ್ಕೀಮ್‌ನಲ್ಲಿ ಹಣವನ್ನು ಉಪಯೋಗಿಸಿಕೊಳ್ಳಲು ಎಲ್ಲ ಮಂಡಲದವರಿಗೂ ಸರ್ಕಾರದವರು ಆದೇಶವನ್ನು ಕೊಟ್ಟಿದ್ದಾರೆ. ಆದರೆ ಜಿ.ಆರ್. ನಲ್ಲಿ ಸಾಕಷ್ಟು ಹಣವಿಲ್ಲ ಸರ್ಕಾರದವರು ತೀವ್ರಗಮನದಲ್ಲಿಟ್ಟುಕೊಂಡು ಕುಡಿಯುವನೀರಿನ ಸಮಸ್ಯೆಯನ್ನು ಬಗೆಹರಿಸಲು ಸಾಕಷ್ಟು ಹಣವನ್ನು ಒದಗಿಸಕೊಡಬೇಕು. ಮತ್ತು ಇವತ್ತು ಮೂಮೆಂಟ್ ಆಫ್ ರಿಗ್ಸ್‌ಬಗ್ಗೆ ಹೇಳಬೇಕೆಂದರೆ ನಮ್ಮ ಜಿಲ್ಲೆಗೆ ರಿಗ್ಸನ್ನು ಪಡೆಯಲು ಬಹಳ ಕಷ್ಟವಾಗಿದೆ. ಇವತ್ತು ಜಿಲ್ಲೆಗಳಲ್ಲಿ ಏನಾಗಿದೆ ಎಂದರೇ ಎಲ್ಲಿ ಹೆಚ್ಚಿನ ಹಣವನ್ನು ಕೊಡುತ್ತಾರೋ ಪ್ರೈವೈಟ್ ಕಂಪೆನಿಗಳ ರಿಗ್ಸ್ ಮೂಮೆಂಟ್ ಇರುತ್ತದೆ. ರಿಗ್ಸ್‌ಗಳನ್ನು ಆಯಾ ಜಿಲ್ಲೆಗಳಲ್ಲಿ ಬೋರ್‌ವೆಲ್‌ಗಳನ್ನು ತೆಗೆಸಲಿಕ್ಕೆ ತೆಗೆದು ಕೊಂಡರೆ ಬಹಳ ಸೂಕ್ತವಾಗುತ್ತದೆ. ಏತಕ್ಕೆಂದರೆ ಕೆಲವು ಜಿಲ್ಲೆಗಳಲ್ಲಿ ಮೂರುತಿಂಗಳಿಂದ ನಾಲ್ಕು ತಿಂಗಳವರೆಗೆ ವರ್ಗಾಯಿಸಿ ಕೊಟ್ಟಿದ್ದರೂ ಇವತ್ತು ಸ್ಕೇರ್‌ಸಿಟಿ ವರ್ಕ್ಸ್ ಅನ್ನು ಒಂದು ಪರ್ಸೆಂಟ್ ಸಹ ಮಾಡಲಿಕ್ಕೆ ಸಾಧ್ಯವಾಗಿಲ್ಲ ಅದ್ದರಿಂದ ಮೂವ್‌ಮೆಂಟ್ಸ್ ಆಫ್‌ರಿಗ್ಸ್ ಬಗ್ಗೆಯೂ ಸಹ ತಾವು ತೀರ್ವವಾಗಿ ಆಲೋಚನೆ ಮಾಡಿ ಸ್ಟೇರ್ ಮಾಡಬೇಕಾಗುತ್ತದೆ. ಮತ್ತು ರಿಪೇರಿಯ ಬಗ್ಗೆ ಗ್ರಾಮಾಂತರ ಪ್ರದೇಶಗಳಲ್ಲಿ ಯುವಕರಿಗೆ ಟ್ರೈನಿಂಗ್ ಕೊಡತಕ್ಕಂಥ ವ್ಯವಸ್ಥೆಯಾಗಬೇಕು. ಇವಾಗ 250 ರೂಪಾಯಿಗಳನ್ನು ಕೊಡುತ್ತಿರುವುದು ಏನಿದೆ ಅದನ್ನು 500 ರೂಪಾಯಿಗಳಿಗೆ ಏರಿಸಿದರೆ ಮಾತ್ರ ಅದು ಸಾಧ್ಯವಾಗುತ್ತದೆ. ರಿಪ್ಲೇಸ್ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಏತಕ್ಕೆಂದರೆ ರಿಪೇರಿಗೆಂದು ತೆಗೆದುಕೊಂಡಾಗ ನೀರು ಕೆಳಮಟ್ಟಕ್ಕೆ ಹೋಗಿರುತ್ತದೆ. ಆದ್ದರಿಂದ ಡೀಪ್ ಮಾಡುವುದಕ್ಕೂ ಸಹ ಅತಿಶೀಘ್ರವಾಗಿ ಕ್ರಮ ಕೈಗೊಳ್ಳಬೇಕಾಗಿದೆ. ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟರಮಟ್ಟಿಗೆ ನೀರಿನ ಸಮಸ್ಯೆ ಇರುತ್ತದೋ ಅಷ್ಟೇ ಇವತ್ತು ಪಟ್ಟಣಗಳಲ್ಲಿಯೂ ಕುಡಿಯುವ ನೀರಿನ ಸಮಸ್ಯೆ ಜಾಸ್ತಿಯಾಗಿದೆ. ಕಳೆದ 15 ದಿನಗಳಿಂದ ಪಟ್ಟಣಗಳಲ್ಲಿ ನೀರನ್ನು ಕುಡಿಯುವುದಕ್ಕೆ ಸಾಧ್ಯವಾಗಿಲ್ಲ. ಕುಡಿಯುವ ನೀರಿನ ಟ್ಯಾಂಕುಗಳು ಒಣಗಿ ಹೋಗಿ ಸಮಸ್ಯೆಯಾಗಿದೆ. ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರನ್ನು ಒದಗಿಸಲು ಎಷ್ಟರಮಟ್ಟಿಗೆ ಹಣ ಬಿಡುಗಡೆ ಮಾಡುತ್ತೀರಿ ಎಂಬುದನ್ನು ಕಾದು ನೋಡಬೇಕಾಗಿದೆ. ಅದೇ ರೀತಿ ಬೆಂಗಳೂರು, ತುಮಕೂರು ಪಟ್ಟಣಗಳಲ್ಲಿ ಕೂಡ ಕುಡಿಯುವ ನೀರಿನ ಸಮಸ್ಯೆ ಇರುವುದರಿಂದ ಅಲ್ಲಿಗೂ ಸಾಕಷ್ಟು ಹಣ ಕೊಟ್ಟು ಈ ಸಮಸ್ಯೆಯನ್ನು ಬಗೆಹರಿಸಬೇಕಾಗಿದೆ. ನಮ್ಮ ತುಮಕೂರು ಜಿಲ್ಲೆಗೆ ತಾವು ಏನು ಆದೇಶ ಕೊಟ್ಟಿದ್ದೀರಿ, ಆ ಆದೇಶದಂತೆ ಸ್ಕೇರ್ಸಿಟಿಯ ಒಂದು ಪಾಯಿಂಟನ್ನು ಸಹ ಬಗೆಹರಿಸುವುದಕ್ಕಾಗಿಲ್ಲ. ಜಿಲ್ಲಾ ಪರಿಷತ್ತಿನವರನ್ನು ಕೇಳಿದರೆ ಜಿಲ್ಲಾಧಿಕಾರಿಗಳನ್ನು ಕೇಳಿ ಅನ್ನುತ್ತಾರೆ, ಜಿಲ್ಲಾಧಿಕಾರಿಗಳನ್ನು ಕೇಳಿದರೆ ಜಿಲ್ಲಾಪರಿಷತ್ತನ್ನು ತೋರಿಸುತ್ತಾರೆ. ಇನ್ನು ಸಬ್‌ಕಮಿಟಿ ಮಾಡಿ ಅಸಿಸ್ಟೆಂಟ್ ಕಮಿಷನರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ, ಅದರಲ್ಲಿಯೂ ಎಫೆಕ್ಟೀವ್ ಆಗಿ ಕೆಲಸ ಆಗುತ್ತಿಲ್ಲ. ಸಂಬಂಧಪಟ್ಟ ಶಾಸಕರ ಅಭಿಪ್ರಾಯ ತೆಗೆದುಕೊಂಡು ಅತಿ ಶ್ರೀಘ್ರವಾಗಿ ಈ ಕಾರ್ಯವನ್ನು ಮಾಡಬೇಕು. ಒಂದೊಂದು ತಾಲ್ಲೂಕಿಗೆ ಇಂತಿಷ್ಟು ಹಣವೆಂದು ಏನು ಗೊತ್ತು ಮಾಡ್ತೀರಿ, ಅಷ್ಟನ್ನಾದರೂ ಕೊಡದಿದ್ದರೆ ನಾವು ನಮ್ಮ ಕ್ಷೇತ್ರಕ್ಕೆ ಹೋಗುವುದಕ್ಕೆ

ಸಾಧ್ಯವಾಗುವುದಿಲ್ಲ. ಮಾನ್ಯ ಸಚಿವರನ್ನು ಕೇಳುತ್ತೇನೆ, ಶೀಘ್ರವಾಗಿ ಹಣ ಬಿಡುಗಡೆ ಮಾಡಿ ಈ ನೀರಿನ ಪರಿಸ್ಥಿತಿಯನ್ನು ಉತ್ತಮಗೊಳಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್): ಮಾನ್ಯ ಉಪಾಧ್ಯಕ್ಷರೇ, ಕೆಲವು ಸ್ನೇಹಿತರು ಹೇಳಿದರು. ನೀರು ಕೊಡಲಿಲ್ಲವೆಂದರೆ ಜನರು ನಮಗೆ ನೀರು ಕುಡಿಸುತ್ತಾರೆ ಎಂದು. ನಾನು ಒಮ್ಮೆ ಹಳ್ಳಿಗೆ ಹೋಗಿದ್ದೆ. ಅಲ್ಲಿ ಏನು ತೊಂದರೆ ಆಯಿತು ಎಂದರೆ, ಅಲ್ಲಿ ಜನರು ಪಂಪ್ ಹೊಡೆಯುತ್ತಿದ್ದರು, 4-6 ಜನರು ಇದ್ದರು. ಸ್ವಲ್ಪ ಬನ್ನಿ, ಹೊಟ್ಟೆಯ ಕರುಳು ಬಾಯಿಗೆ ಬರುತ್ತಿದೆ ಅಂದರು. ನಮ್ಮನ್ನು ಪಂಪ್‌ಹೊಡೆಯುವಂತೆ ಹೇಳಿದರು. ಆಗ ನಮ್ಮ ಹೊಟ್ಟೆಯ ಕರಳು ಮೇಲೆ ಬಂತು. ನಮ್ಮ ಪರಿಸ್ಥಿತಿಯು ಆ ರೀತಿ ಆಯಿತು. ಇದರ ಗಂಭೀರತೆ ಸರ್ಕಾರದಲ್ಲಿ ಕಾಣುತ್ತಿಲ್ಲ. ನೀವೇನಾದರೂ ಹೋದರೆ ಕೆರ ತೆಗೆದುಕೊಂಡು ಹಾಕುತ್ತಾರೆ. ನಾವು ಹೋದರೂ ಹಾಕುತ್ತಾರೆ. ಘೇರಾವು ಮಾಡುತ್ತಾರೆ. ನಾವು ಹೋದರೂ ಅಷ್ಟೆ. ಇವತ್ತು ನೀವು ಪ್ಲಾನ್‌ನಲ್ಲಿ 35 ಕೋಟಿ ರೂಪಾಯಿ ಇಟ್ಟಿದ್ದೇವೆಂದು ನಾನ್‌ಪ್ಲಾನ್‌ನಲ್ಲಿ 25 ಕೋಟಿ ರೂಪಾಯಿ ಇಟ್ಟಿದ್ದೇವೆಂದು ಮಾನ್ಯ ಘೋರ್ಪಡೆಯವರು ಹೇಳಿದ್ದರು. ಬಸವಲಿಂಗಪ್ಪನವರನ್ನು ಕೇಳಿದರೆ ಮುಖ್ಯಮಂತ್ರಿಯವರನ್ನು ಕೇಳಿ ಎಂದು ಹೇಳುತ್ತಾರೆ. ಈ ಪ್ರಕಾರವಾದರೆ ಜನರಿಂದ ಘೇರಾವು ಮಾಡಿಸಿಕೊಂಡು ಬರಬೇಕಾಗುತ್ತದೆ. ಆದುದರಿಂದ ನಾನು ಇಷ್ಟೇ ಹೇಳುವುದು; ಬೋರ್‌ವೆಲ್‌ಗಳ ಗತಿ ಏನಾಗಿದೆ ಅಂದರೆ, ಪಂಪುಗಳು ಕೆಡುವುದಕ್ಕೆ ಕಾರಣವೇನು? ಗಂಟೆಗಟ್ಟಲೆ ಹೊಡೆದರೂ ಅರ್ಧ ಕೊಡ ನೀರು ಬರುವುದಿಲ್ಲ. ಕಟಕಟ ಹೊಡೆದರೆ ಪಂಪ್ ಕೆಡುತ್ತದೆ. ನಮ್ಮ ಜಿಲ್ಲೆಯಲ್ಲಿ ಲಕ್ಷಾಂತರ ಪಂಪುಗಳು ಕೆಟ್ಟಿವೆ. ಮಿನಿ ವಾಟರ್ ಸಪ್ಲೈ ಗತಿ ಏನಾಗಿದೆ ಎಂದರೆ ನೀರೇ ಇಲ್ಲ. ಇದರಿಂದಾಗಿ ಮೋಟರ್‌ಗಳು ಸುಟ್ಟುಹೋಗಿವೆ. ಕರೆಂಟ್ ಇದ್ದರೆ ನೀರು ಇಲ್ಲ, ನೀರು ಇದ್ದರೆ ಕರೆಂಟ್ ಇಲ್ಲ. ಹೀಗಾಗಿ ಮಾನ್ಯ ಸದಸ್ಯರು ಬಯ್ಯಿಸಿಕೊಳ್ಳತಕ್ಕ ಪರಿಸ್ಥಿತಿ ಇದೆ. ಎಲ್ಲೆಲ್ಲಿ ಮಿನಿ ವಾಟರ್ ಸಪ್ಲೈ ಇದೆ, ಆ ಬೋರ್‌ವೆಲ್‌ಗಳನ್ನು ಇನ್ನು ಸ್ವಲ್ಪ ಆಳ ಮಾಡಬೇಕು, ಪೈಪ್ ಹಾಕಬೇಕು. ಬಾವಿಗಳನ್ನು ಆಳವಡಿಸಿ ವ್ಯವಸ್ಥೆ ಮಾಡಬೇಕು. ನನ್ನ ತಾಲ್ಲೂಕಿನಲ್ಲಿ ಇವತ್ತಿನ ದಿವಸ ಬರಗಾಲ ಇದೆ. ಬರಗಾಲ ಇಲ್ಲದಿದ್ದರೂ ಅಲ್ಲಿ ನೀರಿನ ಅಭಾವ ಇರುತ್ತದೆ. ಹೀಗಿರುವಾಗ ಅಲ್ಲಿ ನೀರಿನ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಬೋರ್‌ವೆಲ್ ರಿಪೇರಿ ಕೆಲಸವನ್ನು ತಕ್ಷಣ ಸರ್ಕಾರ ವಹಿಸಿಕೊಳ್ಳಬೇಕು. ಜಿಲ್ಲಾ ಪರಿಷತ್ತಿಗೆ ಬಿಡಬಾರದು. ಸರ್ಕಾರ ವಹಿಸಿಕೊಂಡು ವಿಶೇಷವಾಗಿ ಹಣ ಒದಗಿಸಿ ರಿಪೇರಿ ಮಾಡಿಸಬೇಕಾಗುತ್ತದೆ. ನಾನು ಮೊನ್ನೆ ಜಯದೇವ ಆಸ್ಪತ್ರೆಗೆ ಹೋಗಿದ್ದೆ. ಅಲ್ಲಿ ಆಪರೇಷನ್ ಮಾಡಿದರೆ ಕೈತೊಳೆಯಲು ವೈದ್ಯರಿಗೆ ನೀರಿಲ್ಲ. ನಿಂತ ನೀರಲ್ಲೇ ಕೈ ತೊಳೆದರೆ ರೋಗಿಗಳ ಗತಿ ಏನಾಗಬೇಕು? ಆಸ್ಪತ್ರೆಗಳಲ್ಲೂ ನೀರು ಸರಿಯಾಗಿ ಬರುವುದಿಲ್ಲವೆಂದು ವೈದ್ಯರು ಹೇಳುತ್ತಾರೆ. ಬೆಂಗಳೂರಿನ ಪರಿಸ್ಥಿತಿ ಹೀಗಾಗಿದೆ. ಕೆಲವೊಮ್ಮೆ 3 ದಿನವಾದರೂ ನೀರು ಬರುವುದಿಲ್ಲ, ಎರಡು ದಿನಕ್ಕೊಮ್ಮೆ ಸ್ನಾನ ಮಾಡಬೇಕಾಗಿದೆ. ವಿಧಾನ ಸೌಧಕ್ಕೆ ಬಂದು ಸ್ನಾನ ಮಾಡಬೇಕಾಗಿದೆ. ಇಂಥ ಪರಿಸ್ಥಿತಿ ಯಾರಿಗೂ ಆಗಿಲ್ಲವೆಂದು ಕಾಣುತ್ತದೆ. ಈ ಬಗ್ಗೆ ಸರ್ಕಾರ ಗಂಭೀರವಾಗಿ ಯೋಚಿಸಬೇಕು. ಈ ಬಗ್ಗೆ ಖಚಿತವಾಗಿ ಉತ್ತರ ಕೊಡಬೇಕು. ಇಲ್ಲದಿದ್ದರೆ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗುವುದಿಲ್ಲ. 35 ಕೋಟಿ ಮತ್ತು 25 ಕೋಟಿ ರೂಪಾಯಿಗಳನ್ನು ವಿಶೇಷವಾಗಿ ಬಿಡುಗಡೆ ಮಾಡುತ್ತೀರಾ ಎಂದು ತಾವು ಹೇಳಬೇಕು. ಜನರಿಂದ ಘೇರಾವು ಮಾಡಿಸಿಕೊಂಡು ಮನೆಗೆ ಹೋಗುವುದು ಬೇಡ. ಘೇರಾವು ಮಾಡಿ ಫಜೀತಿ ಮಾಡುತ್ತಾರೆ. ನೀರಿನ ಸಮಸ್ಯೆ ಬಹಳ ಗಂಭೀರವಾದುದು. ಈ ಬಗ್ಗೆ ಆ ಕಡೆ ಸದಸ್ಯರು ಮತ್ತು ಈ ಕಡೆ ಸದಸ್ಯರು ಯೋಚನೆ ಮಾಡಿ ವಿಶೇಷವಾಗಿ ಈ ಒಂದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಹಣ ಬಿಡುಗಡೆ ಮಾಡತಕ್ಕ ವ್ಯವಸ್ಥೆ

ಮಾಡಬೇಕು. ಇವತ್ತು ಮುಖ್ಯ ಮಂತ್ರಿಗಳೇ ಇರಬೇಕಾಗಿತ್ತು. ಆದರೆ ಮುಖ್ಯಮಂತ್ರಿಗಳಿಲ್ಲ. ಅದಕ್ಕಾಗಿ ಬಸವಲಿಂಗಪ್ಪನವರು ಏನಾದರೂ ಹೇಳುತ್ತಾರೋ ಇಲ್ಲವೋ ಎಂಬ ಭಯ ಇದೆ. ಆದ್ದರಿಂದ ಇದರ ಬಗ್ಗೆ ಒತ್ತಾಯಿಸುತ್ತೇನೆ, ವಿಶೇಷವಾಗಿ ಹಣ ಕೊಡಬೇಕು ಮತ್ತು ರಿಪೇರಿ ಕಾರ್ಯ ಸರ್ಕಾರದವರೇ ವಹಿಸಿಕೊಳ್ಳಬೇಕು ಎಂದು ಹೇಳಿ ನನಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ನಾರಾಯಣ್ (ಬೆಳ್ಳಾವೆ) : ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ನೀರಿನ ಅಭಾವದ ಬಗ್ಗೆ ಇದು ಎರಡನೇ ಸಾರಿ ಚರ್ಚೆ ನಡೆಯುತ್ತಾ ಇರತಕ್ಕದ್ದು ಮೇಲ್ನೋಟಕ್ಕೆ ತೋರಿಸುತ್ತದೆ, ಸದನದ ಸದಸ್ಯರ ಅಭಿಪ್ರಾಯಕ್ಕೆ ಮತ್ತು ನಿರೀಕ್ಷೆಗೆ ತಕ್ಕಂತೆ ಸರ್ಕಾರ ಕೆಲಸ ಮಾಡುತ್ತಿಲ್ಲ ಎಂದು. ಬಹಳ ನಿರಾಶರಾಗಿ, ಅತೃಪ್ತರಾಗಿ, ಬಹಳ ಅಸಮಾಧಾನದಿಂದ, ಸದಸ್ಯರ ಒತ್ತಾಯದ ಮೇರೆಗೆ ಎರಡನೇ ಬಾರಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಅದಕ್ಕಾಗಿ ತಮಗೆ ಧನ್ಯವಾದಗಳು. ಹಿಂದಿನ ಒಂದು ಸಂದರ್ಭದಲ್ಲಿ ನಮ್ಮ ಸದನದ ಹಿರಿಯ ಸದಸ್ಯರಾದ ಮಾನ್ಯ ಹುಚ್ಚಮಾಸ್ತಿಗೌಡರು ಒಂದು ಮಾತನ್ನು ಹೇಳಿದರು. ನೀರನ್ನೂ ಕೊಡದಿದ್ದರೆ ಈ ಸರ್ಕಾರ ಏತಕ್ಕಿರಬೇಕು, ಇದರ ಅವಶ್ಯಕತೆ ಏನು ಎಂಬ ಮೂಲಭೂತ ಪ್ರಶ್ನೆಯನ್ನು ತಮ್ಮ ಮುಂದೆ ಇಟ್ಟರು. ನಾನಾದರೂ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. 5 ಅಂಶಗಳ ಬಗ್ಗೆ ಸರ್ಕಾರ ತೀವ್ರವಾಗಿ ಪರಿಗಣಿಸಬೇಕು ಎಂದು ಹೇಳುತ್ತಿದ್ದೇನೆ. ಈಗ ಏನಾಗಿದೆ ಎಂದರೆ ಸರ್ಕಾರ ಹಣ ಬಿಡುಗಡೆ ಮಾಡಿಲ್ಲ ಎಂದು ನಾವೇನೂ ಆಪಾದನೆ ಮಾಡುತ್ತಿಲ್ಲ. ಬಿಡುಗಡೆ ಮಾಡತಕ್ಕ ಹಣ ಯಾವ ರೀತಿ ಖರ್ಚಾಗುತ್ತಿದೆ ಎಂಬ ಬಗ್ಗೆ ತಮ್ಮ ಗಮನ ಸೆಳೆಯುವುದಕ್ಕೆ ಇಷ್ಟಪಡುತ್ತಿದ್ದೇನೆ. ಮೂರು ತಿಂಗಳ ಕೆಳಗೆ ಈ ಕಾಮಗಾರಿ ಕೆಲಸದಲ್ಲಿ ಬೋರ್‌ವೆಲ್ ತೆಗೆಯುವುದಕ್ಕೆ ಪ್ರಾರಂಭವಾಯಿತು. ಇವತ್ತು ಪ್ರೈವೇಟ್ ರಿಗ್ಸ್ ಓನರ್ಸ್ ಮೇಲೆ ಒಂದು ಹಿಡಿತವನ್ನು ತರದೇ ಹೋದರೆ ಕಷ್ಟವಾಗುತ್ತದೆ. ಇವತ್ತು ಏನು ವರ್ಕ್ ಆರ್ಡರ್ ಕೊಟ್ಟಿದ್ದಾರೆ, ನೂರಾರು ಪಾಯಿಂಟ್‌ಗಳನ್ನು ಗುರುತು ಮಾಡಿದ್ದಾರೆ, ಅದರಲ್ಲಿ ಒಂದು ಬೋರ್ ಅನ್ನು ಕೂಡ ಡ್ರಿಲ್ ಮಾಡುವುದಕ್ಕಾಗಿಲ್ಲ. ನನ್ನ ಕ್ಷೇತ್ರದಲ್ಲಿ ಮಸಣಿಪಾಳ್ಯ ಎಂದು ಇದೆ. ತುಮಕೂರು ತಾಲ್ಲೂಕಿನಲ್ಲಿ ಮೂರು ತಿಂಗಳಾಗಿದೆ ವರ್ಕ್ ಆರ್ಡರ್ ಕೊಟ್ಟು; ಆವತ್ತು 140-150 ರೂಪಾಯಿ ಕೊಟ್ಟರು ಎಂದು ಹೇಳಿದರು; ಈಗ 170-180 ಏನೋ ಮಾಡಿದ್ದಾರೆ. 140 ರೂಪಾಯಿಗೆ ಕೊಟ್ಟ ವರ್ಕ್ ಆರ್ಡರ್ ಮೂರು ತಿಂಗಳಾದರೂ ಆ ಗ್ರಾಮಕ್ಕೆ ಬೋರ್‌ವೆಲ್ ಕಂಪೆನಿ ಹೋಗಿಲ್ಲ. ಆ ಊರಿನ ಎಲ್ಲಾ ಮಹಿಳೆಯರು ಹೋಗಿ ಬೋರ್‌ವೆಲ್ ಕಂಪೆನಿ ಮುಂದೆ ಶನಿವಾರ ಸದನಕ್ಕೆ ರಜಾ ಇದ್ದ ಕಾಲದಲ್ಲಿ ಮಲಗಿದ್ದಾರೆ. ಚುನಾವಣೆ ಸಂದರ್ಭದಲ್ಲಿ ಯಾವ ರೀತಿ ಚುನಾವಣೆಗೋಸ್ಕರ ಪ್ರೈವೇಟ್ ವೆಹಿಕಲ್ಸ್ ಅಕ್ವೈರ್ ಮಾಡಿಕೊಂಡು ವಾರ್ ಫುಟಿಂಗ್‌ನಲ್ಲಿ ಕೆಲಸ ಮಾಡುತ್ತೀವೋ ಆ ರೀತಿ ತಕ್ಷಣದಿಂದ ಪ್ರೈವೇಟ್‌ರಿಗ್ ಓನರ್ಸ್‌ನ್ನು ಕಂಟ್ರೋಲ್‌ಗೆ ತರದೇ ಹೋದರೆ, ನೀವು ಎಷ್ಟೇ ದುಡ್ಡು ಕೊಟ್ಟರೂ, ಎಷ್ಟೇ ಪಾಯಿಂಟ್ ಇಟ್ಟರೂ ಕೆಲಸ ಆಗುವುದಿಲ್ಲ. ನನ್ನ ಅಂದಾಜಿನಲ್ಲಿ ಹೆಚ್ಚು ಕಡಿಮೆ ತುಮಕೂರು ಜಿಲ್ಲೆಯಲ್ಲಿ, ನಾನು ಉತ್ಪ್ರೇಕ್ಷೆ ಮಾಡಿ ಹೇಳುತ್ತಿಲ್ಲ. 50 ರಿಂದ 80 ಅಥವಾ 100 ಪಾಯಿಂಟ್‌ಗಳ ಬಗ್ಗೆ ವರ್ಕ್ ಆರ್ಡರ್ ಕೊಟ್ಟರೂ ಕೆಲಸ ಇಲ್ಲಿಯವರೆಗೆ ಕೆಲಸ ಆಗಿಲ್ಲ. ಪುನಃ ಅದರ ಬಗ್ಗೆ ಹಣ ಬಿಡುಗಡೆ ಮಾಡುವುದರಲ್ಲಿ ಅರ್ಥ ಇಲ್ಲ ಎಂದು ಹೇಳುತ್ತೇನೆ. ಆದರೆ ತಕ್ಷಣ ಈ ಪ್ರೈವೇಟ್ ರಿಗ್ ಓನರ್ಸ್ ಮೇಲೆ ಹಿಡಿತ ತೆಗೆದುಕೊಂಡು ಆದ್ಯತೆ ಮೇಲೆ ಕೊರೆದು ಬೋರ್‌ವೆಲ್ ತೆಗೆಯಬೇಕು. ಇಲ್ಲದಿದ್ದರೆ ಆಗುವುದಿಲ್ಲ. ಇನ್ನು ಮೂರು ತಿಂಗಳ ಕಾಲ ಸರ್ಕಾರದವರೇ ಕ್ರಮ ತೆಗೆದುಕೊಳ್ಳಬೇಕು. ವೆಲ್ ಬೋರಿಂಗ್ ಡಿವಿಜನ್ ಇದೆ. ನಮ್ಮ ಜಿಲ್ಲೆಯಲ್ಲಿ ಬರೀ ಎರಡು ಮಾತ್ರ ಇದೆ. ಅದು

ಸಾಲುವುದಿಲ್ಲ. ಇದು ಅತ್ಯಗತ್ಯವಾಗಿ ಸರ್ಕಾರ ಗಮನಿಸಬೇಕಾದ ಒಂದು ಅಂಶವಾಗಿದೆ. ಎರಡನೇ ಮಾತನ್ನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅನೇಕ ಕಡೆ ಮಿನಿ ವಾಟರ್ ಸಪ್ಲೈ ಮತ್ತು ಎನ್.ಆರ್.ಡಬ್ಲ್ಯು.ಎಸ್. ಇದೆ. ಅಲ್ಲಿ ಬೋರ್‌ವೆಲ್‌ಗಳ ಅವಶ್ಯಕತೆ ಇಲ್ಲ. ಅಲ್ಲಿ ಏನಾಗಿದೆ ಅಂದರೆ, ಬೇಸಿಗೆ ಕಾಲ ಪ್ರಾರಂಭ ಆಗಿರುವುದರಿಂದ ನೀರಿನ ಪ್ರಮಾಣ ಕಡಿಮೆಯಾಗುತ್ತಿದೆ. ಅಲ್ಲಿ ಹಾಲಿ ಇರತಕ್ಕ ವಾಟರ್ ಟ್ಯಾಂಕ್‌ಗೆ ಮಿನಿ ವಾಟರ್ ಸಪ್ಲೈನಲ್ಲಿ ನೀರು ಕೊಡುವುದಕ್ಕೆ ಕಷ್ಟವಾಗಿದೆ. ಮತ್ತು ಎಲೆಕ್ಟ್ರಿಸಿಟಿ ತೊಂದರೆಯಿಂದಾಗಿ ಸಕಾಲದಲ್ಲಿ ನೀರನ್ನು ತುಂಬತಕ್ಕ ಪರಿಸ್ಥಿತಿ ಇಲ್ಲ. ಎಲೆಕ್ಟ್ರಿಸಿಟಿ ಹೋದರೆ ನೀರನ್ನು ಪಂಪ್ ಮಾಡಿ ಟ್ಯಾಂಕ್‌ಗೆ ತುಂಬತಕ್ಕ ಪರಿಸ್ಥಿತಿ ಇಲ್ಲ. ಇದರಿಂದಾಗಿ ಎರಡು ಮೂರು ದಿವಸ ಬಹಳ ತೊಂದರೆ ಆಗತಕ್ಕ ಪರಿಸ್ಥಿತಿ ಇದೆ. ಹಾಲಿ ಇರತಕ್ಕ ಜಾಗದಲ್ಲಿ ಬಹಳ ಕಡಿಮೆ ಪ್ರಮಾಣದಲ್ಲಿ ನೀರು ದೊರಕತಕ್ಕ ಪರಿಸ್ಥಿತಿ ಇದೆ. ಅಂಥ ಕಡೆ ಒಂದು ಅಡಿಷನಲ್ ಬೋರ್‌ವೆಲ್ ಹಾಕುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಬೇಕಾಗಿದೆ. ಬೇಸಿಗೆ ಕಾಲದಲ್ಲಿ ಹಬ್ಬ ಹರಿದಿನಗಳು ಜಾತ್ರೆಗಳು ಆಗತಕ್ಕ ಸಂದರ್ಭ ಜಾಸ್ತಿ. ಆದ್ದರಿಂದ ಎರಡು ವಾಟರ್ ಟ್ಯಾಂಕನ್ನು ಪ್ರತಿ ತಾಲ್ಲೂಕ್‌ಗೂ ಇಟ್ಟುಕೊಳ್ಳಬೇಕು. ಯಾವ ರೀತಿ ನಗರ ಮುನಿಸಿಪಾಲಿಟಿಯಲ್ಲಿ ನೀರಿಗೆ ತೊಂದರೆ ಆದರೆ ವ್ಯವಸ್ಥೆ ಮಾಡುತ್ತಾರೋ ಆ ರೀತಿ ಪ್ರತಿ ತಾಲ್ಲೂಕಿನಲ್ಲಿ ಕನಿಷ್ಠ ಪಕ್ಷ ಎರಡು ವಾಟರ್ ಟ್ಯಾಂಕ್‌ಗಳನ್ನು ಎಮರ್ಜೆನ್ಸಿಯಲ್ಲಿ ನೀರು ಕೊಡುವುದಕ್ಕೆ ರೆಡಿ ಮಾಡಿಕೊಂಡು ಇಟ್ಟಿರಬೇಕು. ಇನ್ನೊಂದು ಮಾನ್ಯ ಅಧ್ಯಕ್ಷಿಣಿಯವರೆ, ನಾನು ಉತ್ಪ್ರೇಕ್ಷೆ ಮಾಡಿ ಹೇಳುತ್ತಿಲ್ಲ. ಇವತ್ತು ಕನಿಷ್ಠ ಪಕ್ಷ ಒಂದು ವಿಧಾನಸಭಾ ಕ್ಷೇತ್ರಕ್ಕೆ 100 ಬೋರ್‌ವೆಲ್‌ಗೆ ಬೇಕಾದ ಹಣವನ್ನು ತಕ್ಷಣ ರಿಲೀಸ್ ಮಾಡಬೇಕಾಗುತ್ತದೆ. ಅದೇ ರೀತಿ ಕನಿಷ್ಟಪಕ್ಷ 5 ಲಕ್ಷ ರೂಪಾಯಿಗಳನ್ನು ಬೋರ್‌ವೆಲ್ ರಿಪೇರಿಗೆ ಇಡಬೇಕಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ಆಗಿರತಕ್ಕ ತೊಂದರೆ ಎಂದರೆ ಮಾನಿಟರ್ ಮಾಡುವಾಗ ಇಂಪ್ಲಿಮೆಂಟೇಷನ್‌ನಲ್ಲಿ ಬಹಳ ನ್ಯೂನತೆಗಳನ್ನು ನೋಡುತ್ತಿದ್ದೇವೆ. ಅದಕ್ಕೋಸ್ಕರ ತಾಲ್ಲೂಕು ಮಟ್ಟದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪರಿಷತ್ತಿನ ಅಸಿಸ್ಟೆಂಟ್ ಎಗ್ಸಿಕ್ಯುಟೀವ್ ಇಂಜಿನಿಯರ್, ತಹಶೀಲ್ದಾರ್ ಮತ್ತು ಅವಶ್ಯಕತೆ ಇರತಕ್ಕ ಅಧಿಕಾರಿಗಳನ್ನು ಸೇರಿಸಿ ಒಂದು ಸಮಿತಿ ಮಾಡಿ ಅದಕ್ಕೆ ಜವಾಬ್ದಾರಿಯನ್ನು ಕೊಟ್ಟು ಅವರು ಮಾನಿಟರ್ ಮಾಡಬೇಕಾಗುತ್ತದೆ. ಪ್ರತಿ ಹತ್ತು ದಿವಸಕ್ಕೊಮ್ಮೆ ಅವರು ಮಾನಿಟರ್ ಮಾಡಬೇಕಾಗುತ್ತದೆ. ಮತ್ತು ಇಂಪ್ಲಿಮೆಂಟೇಷನ್ ಮಾಡುವ ಜವಾಬ್ದಾರಿ ಫಿಕ್ಸ್ ಮಾಡಿಲ್ಲ. ಅಕೌಂಟಬಲಿಟಿ ಇರುವುದಿಲ್ಲ. ಜಿಲ್ಲಾಧಿಕಾರಿಗಳಿಗೆ ದುಡ್ಡು ರಿಲೀಸ್ ಮಾಡುತ್ತೀರಿ. ಆದರೆ ಜಿಲ್ಲಾ ಪರಿಷತ್ತಿನಲ್ಲಿ ರಾಜಕೀಯದಿಂದ ಸಹಕಾರ ಕೊಡತಕ್ಕ ಸಂದರ್ಭ ಬಹಳ ಕಡಿಮೆ ಇದೆ. ಈಗ ಸರ್ಕಾರ ಸಾಕಷ್ಟು ಹಣವನ್ನು ಬಿಡುಗಡೆ ಮಾಡಿದೆ. ಮಾಡಿಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ ಅವಶ್ಯಕತೆಗೆ ಅನುಗುಣವಾಗಿ ಆದ್ಯತೆ ಮೇಲೆ ಬೋರ್‌ವೆಲ್‌ಗಳನ್ನು ಕೊರೆಸಬೇಕು. ಮತ್ತು ಕೊರೆಸುವುದರಲ್ಲಿ ಆಗಿರುವ ನ್ಯೂನತೆಗಳನ್ನು ನಿವಾರಣೆ ಮಾಡದೆ ಹೋದರೆ, ನ್ಯೂನತೆ ಸರಿಮಾಡದೇ ಇದ್ದರೆ, ಹಣ ಎಷ್ಟು ಕೊಟ್ಟರೂ ಏನೂ ಆಗುವುದಿಲ್ಲ. ಕನಿಷ್ಟ ಪಕ್ಷ ಒಂದು ವಿಧಾನಸಭೆ ಕ್ಷೇತ್ರಕ್ಕೆ 100 ಬೋರ್‌ವೆಲ್‌ಗೆ ಆಗುವಷ್ಟು ಹಣವನ್ನು ತಕ್ಷಣ ರಿಲೀಸ್ ಮಾಡಬೇಕು. ಕನಿಷ್ಟ ಪಕ್ಷ 5 ಲಕ್ಷ ರೂಪಾಯಿಗಳನ್ನು ಬೋರ್‌ವೆಲ್ ರಿಪೇರಿಗಾಗಿ ಪ್ರತಿ ತಾಲ್ಲೂಕಿಗೆ ಕೊಡಬೇಕು. ಮಾನಿಟರ್ ಮಾಡುವ ಬಗ್ಗೆ ಒಂದು ಸಮಿತಿಯನ್ನು ತಕ್ಷಣ ರಚನೆ ಮಾಡಿ ಜನ ಮೆಚ್ಚುವ ರೀತಿಯಲ್ಲಿ ಇವತ್ತು ಸರ್ಕಾರ ನಡೆದುಕೊಳ್ಳಬೇಕು. ಇವತ್ತು ಇದನ್ನು ಮಾನವೀಯತೆಯ ದೃಷ್ಟಿಯಿಂದ ಪರಿಶೀಲಿಸಿ ಎಲ್ಲಾ ಬೇರೆ ಬೇರೆ ಕಾರ್ಯಕ್ರಮಗಳನ್ನು ಬದಿಗೊತ್ತಿ ಈ ಬಗ್ಗೆ ಒಂದು ಪೂಲ್ ಮಾಡಿ ಯುದ್ಧದೋಪಾದಿಯಲ್ಲಿ ಕೆಲಸ ಮಾಡಿ ಜನರ ಕಷ್ಟ ಕಾರ್ಪಣ್ಯಕ್ಕೆ ನೆರವಾಗಬೇಕೆಂದು ಹೇಳುತ್ತೇನೆ. ಇವತ್ತು ಪ್ರತಿದಿನ ಪರಿಸ್ಥಿತಿ ಹದಗೆಡುತ್ತಿದೆ. ಮಾನ್ಯ

ಬೈರೇಗೌಡರು ಹೇಳಿದ ಹಾಗೆ 25 ಕೋಟಿ ರೂಪಾಯಿಯ ಯೋಜನೆ ಬಹಳ ಒಳ್ಳೆಯದು ಇದೆ. ಅದು ಜಾರಿಗೆ ಬಂದಿದ್ದರೆ ಈ ಬವಣೆ ಕಡಿಮೆ ಆಗುತ್ತಿತ್ತು ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮ್ಮನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಅಧ್ಯಕ್ಷಿಣಿಯವರೇ, ಇಡೀ ರಾಜ್ಯದಲ್ಲಿನ ಭೀಕರ ಪರಿಸ್ಥಿತಿ ಬಗ್ಗೆ ಮಾನ್ಯ ಸ್ನೇಹಿತರು ಹೇಳಿದ್ದಾರೆ. ನನ್ನ ಜಿಲ್ಲೆ ಮತ್ತು ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಧಾರವಾಡ ಜಿಲ್ಲಾಪರಿಷತ್ತಿಗೆ ಕುಡಿಯುವ ನೀರಿನ ಸರಬರಾಜಿನ ಬಗ್ಗೆ ಕೊಟ್ಟ ಹಣದಲ್ಲಿ ಸರ್ಕಾರ ಕೆಲವೊಂದು ಭಾಗದ ಹಣವನ್ನು ವಾಪಸ್ಸು ತೆಗೆದುಕೊಂಡಿದೆ. ಇದರಿಂದಾಗಿ ಕೆಲಸಗಳು ಅರ್ಧದಲ್ಲೇ ನಿಂತಿದೆ. ಅಲ್ಲಿ ಪಂಪುಗಳನ್ನು ಖರೀದಿ ಮಾಡದೇ ಇರುವುದರಿಂದ ಅನೇಕ ಯೋಜನೆಗಳು ಸ್ಥಗಿತವಾಗಿ ಜನರಿಗೆ ತೊಂದರೆ ಆಗಿದೆ. ಆ ಬಗ್ಗೆ ಕೂಡಲೇ ಹಣವನ್ನು ಬಿಡುಗಡೆ ಮಾಡಬೇಕು. ಅದರ ಜೊತೆಗೆ ಧಾರವಾಡ ಜಿಲ್ಲೆಯಲ್ಲಿ 4 ಬೋರ್ ಕೊರೆಯುವ ಯಂತ್ರಗಳನ್ನು ಮಾತ್ರ ಇಟ್ಟುಕೊಂಡು 17-18 ತಾಲ್ಲೂಕುಗಳಲ್ಲಿ ಇವನ್ನು ಉಪಯೋಗಿಸುತ್ತೇವೆ ಎಂದರೆ ಕೆಲಸ ಏನೇನೂ ಆಗುವುದಿಲ್ಲ. ಇವತ್ತು ಒಂದೊಂದು ತಾಲ್ಲೂಕಿನಲ್ಲಿ ಸುಮಾರು 100 ಕೊಳವೆ ಬಾವಿಗಳ ಅವಶ್ಯಕತೆ ಇದೆ. ನನ್ನ ಕ್ಷೇತ್ರದಲ್ಲಿ ಕಳೆದ ಆ ತಿಂಗಳಿಂದ ಒಂದು ಕೊಳವೆ ಬಾವಿಯನ್ನು ತೋಡಿಲ್ಲ. ದನಕರುಗಳಿಗೆ ಕುಡಿಯಲು ನೀರಿಲ್ಲ. ನನ್ನ ಕ್ಷೇತ್ರದಲ್ಲಿ ಕೆರೆಗಳಲ್ಲಿ, ತೊರೆಗಳಲ್ಲಿ, ಹೊಳೆಗಳಲ್ಲಿ ನೀರು ಇಲ್ಲದೇ ದನಕರುಗಳು ಬಾಯಾರಿಕೆಯಿಂದ ಸಾಯುತ್ತಿವೆ. ನನ್ನ ಹಿರೇಕೆರೂರು ಕ್ಷೇತ್ರದಲ್ಲಿ ದನಗಳು ಸಾಯುತ್ತಿವೆ. ಎಳವದಳ್ಳಿ ಎನ್ನುವ ಕಡೆ ಕುಡಿಯುವ ನೀರಿನ ಅಭಾವದಿಂದ 6 ದನಗಳು ಸತ್ತಿವೆ. ಈ ಬಗ್ಗೆ ಮುಖ್ಯಮಂತ್ರಿಗಳ, ಬಸವಲಿಂಗಪ್ಪನವರ ಹಾಗೂ ಕಂದಾಯ ಮಂತ್ರಿಗಳ ಗಮನಕ್ಕೆ ತಂದರೂ ಏನೂ ಪ್ರಯೋಜನವಾಗಲಿಲ್ಲ. ಶುಕ್ರವಾರದ ದಿವಸ ಒಂದು ಯಂತ್ರ ಬೋರ್ ಕೊರೆಯಲು ಹೋದದ್ದು ಇನ್ನೂವರೆಗೆ ಒಂದೂ ಬೋರ್ವೆಲ್ ಕೊರೆದಿಲ್ಲ. ಶುಕ್ರವಾರ ಹಿರೇಕೆರೂರಿಗೆ ಹೋದ ಯಂತ್ರ; ಒಂದು ಬೋರ್‌ನ ಅರ್ಧ ಭಾಗ ಕೊರೆದು ಡೀಸೆಲ್ ತರಲು 100 ಕಿ.ಮೀ.ದೂರದ ಧಾರವಾಡಕ್ಕೆ ಹೋಗಿ ಇನ್ನೂವರೆಗೆ ವಾಪಸ್ ಬಂದಿಲ್ಲ. ಇಂತಹದ್ದು ನಡೆಯುತ್ತಿದೆ. ಇದು ಸಚಿವರ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಇವತ್ತು ಏನು ಕೇಂದ್ರೀಕೃತ ವ್ಯವಸ್ಥೆ ಇದೆ ಅದು ಹೋಗಬೇಕು. ಜಿಲ್ಲಾಧಿಕಾರಿಗಳಿಗೆ ಎ.ಸಿ.ಗಳಿಗೆ ಕುಡಿಯುವ ನೀರಿನ ಕಾರ್ಯಕ್ರಮಗಳನ್ನು ವಹಿಸಿದರೆ ನಮಗೆ ನೀರು ಸಿಗುವುದಿಲ್ಲ. ಇವತ್ತು ಬಡವರ ಕಣ್ಣಲ್ಲಿ ನೀರು ಬರುತ್ತಿದೆ. ಕುಡಿಯುವ ನೀರನ್ನು ಪೂರೈಸದಿದ್ದರೆ ನಾಳೆ ಸರ್ಕಾರದ ಕಣ್ಣಲ್ಲಿ ನೀರು ಬರದೇ ಇರಲಾರದು. ಹಾಗೆ ಇಲ್ಲಿರತಕ್ಕ ಪ್ರತಿಯೊಬ್ಬ ಸದಸ್ಯರ ಕಣ್ಣಲ್ಲಿ ನೀರು ಬರುವಂತೆ ಜನರು ಮಾಡದೇ ಬಿಡಲಾರರು. ಅದಕ್ಕಾಗಿ ನಾನು ಒಂದು ಸಲಹೆ ಕೊಡುತ್ತಿದ್ದೇನೆ. ಇವತ್ತು ಪ್ರತಿ ತಾಲ್ಲೂಕಿನಲ್ಲಿ ಒಂದು ಸಮಿತಿ ಮಾಡಬೇಕು. ಪ್ರತಿ ತಾಲ್ಲೂಕಿಗೆ 25 ಲಕ್ಷ ರೂಪಾಯಿಗಳನ್ನು ಕೊಳವೆ ಬಾವಿಗಳ ದುರಸ್ತಿಗೆ ಹಾಗೂ ಹೊಸದಾಗಿ ಕೊಳವೆ ಬಾವಿ ಹಾಕುವುದಕ್ಕೆ ಮತ್ತು ಮಿನಿವಾಟರ್ ಸಪ್ಲೈ ಸ್ಕೀಮ್‌ಗಳಿಗೆ ತಾವು ಕೊಡಬೇಕು. ಜಿಲ್ಲಾ ಪರಿಷತ್ತಿನ ಎಂಜಿನಿಯರುಗಳ ಮುಖಾಂತರ ಈ ಕೆಲಸ ಮಾಡಿಸಬೇಕು. ಬಿಡಿಓ ಕಛೇರಿ ಮುಖಾಂತರ, ಕೆಲಸ ಕಾರ್ಯಗಳು ನಡೆಯಬೇಕು. ತಾಲ್ಲೂಕು ಮಟ್ಟದಲ್ಲಿ ಒಂದು ಸಮಿತಿ ಮಾಡಿ ಪ್ರತಿಯೊಂದಕ್ಕೆ 25 ಲಕ್ಷ ರೂಪಾಯಿ ಕೊಟ್ಟರೆ ಮಾತ್ರ ಈ ಕಾರ್ಯಕ್ರಮ ತೀವ್ರತೆಯಿಂದ ನಡೆದು, ಕನಿಷ್ಟ ಪಕ್ಷ ರಾಜ್ಯದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಕ್ಕೆ ಸಹಾಯಕವಾಗುತ್ತದೆಂದು ತಿಳಿದು, ಈ ಬಗ್ಗೆ ಸರ್ಕಾರ ಕಾರ್ಯಕ್ರಮ ಹಾಕಿಕೊಳ್ಳುತ್ತದೆಂದು ನಾನು ತಿಳಿದುಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎಂ. ಇದ್ದಿನಬ್ಬ (ಉಲ್ಲಾಳ) : ಮಾನ್ಯ ಉಪಾಧ್ಯಕ್ಷರೇ, ನೀರಿನ ಬರ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲೂ ಇದೆ. ಕೆಲವು ಕಡೆ ಹೆಚ್ಚು ಇದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಮಗಿರತಕ್ಕಂತಹ ಕುಡಿಯುವ ನೀರಿನ ಕೊರತೆ ಬಹಳ ದೊಡ್ಡದು. ಬರಗಾಲ ಬಂದಂತಹ ಕಾಲದಲ್ಲಿ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಬರಗಾಲ ಇಲ್ಲವೆಂದು ನಮಗೆ ಯಾವ ಹಣವನ್ನೂ ನೀಡಲಿಲ್ಲ, ಎಲ್ಲಾ ಹಣ ಬರಗಾಲವಿದ್ದಂತಹ ಕಡೆಗೇ ಹೋಗಿದೆ. ನಾವು ಆಗಿನಿಂದಲೂ ಕೇಳುತ್ತಿದ್ದೇವೆ; ನಮ್ಮಲ್ಲಿ ಕುಡಿಯುವ ನೀರಿನ ತೊಂದರೆ ಇದೆ. ಆದ್ದರಿಂದ ಸ್ವಲ್ಪ ಹೆಚ್ಚಿಗೆ ಹಣವನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಕೊಡಿ ಎಂದು. ಹಾಳಾದಂತಹ ನೂರಾರು ಕೊಳವೆ ಬಾವಿಗಳು ಇವೆ. ನನ್ನ ಕ್ಷೇತ್ರದಲ್ಲೂ ಕೂಡ ನೂರಾರು ಕೊಳವೆ ಬಾವಿಗಳು ಹಾಳಾಗಿವೆ. ಅವುಗಳೆಲ್ಲಾ ರಿಪೇರಿಯಾಗಬೇಕಾಗಿದೆ. ಮಂಗಳೂರಿನ ಕೆಲವು ಬದಿಯಲ್ಲಿ ಜಕ್ಕು ಜಕ್ಕಿನ ಮೊಗುರು, ಮಾಂಕಾಳಿ ಪದಕು ಇಂತಹ ಕಡೆಗಳಲ್ಲಿ ನೀರು ಇಲ್ಲ. ನೀರಿಗಾಗಿ ಬಹಳ ಹಾಹಾಕಾರ ಇದೆ. ಒಂದೂವರೆ ತಿಂಗಳಿನಿಂದ ಅಲ್ಲಿ ತುಂಬಾ ತೊಂದರೆಯಾಗಿದೆ. ಲಾರಿಗಳಲ್ಲಿ ನೀರನ್ನು ತಂದು ಬಟವಾಡೆ ಮಾಡುತ್ತಿದ್ದಾರೆ. ಆದ್ದರಿಂದ ದಕ್ಷಿಣ ಕನ್ನಡ ಜಿಲ್ಲೆಯನ್ನು ಕುಡಿಯುವ ನೀರಿನ ಬಗ್ಗೆ ಆಧ್ಯತೆಯ ಪಟ್ಟಿಯಲ್ಲಿ ಸೇರಿಸಿ ನಮಗೆ ಸಾಕಷ್ಟು ಹಣ ಬಿಡುಗಡೆ ಮಾಡಬೇಕು. ನಾರಾಯಣರಾವ್‌ರವರು ಹೇಳಿದಂತೆ ಪ್ರತಿಯೊಬ್ಬ ಶಾಸಕರ ಕ್ಷೇತ್ರಕ್ಕೂ ನೂರು ಕೊಳವೆ ಬಾವಿಗಳನ್ನು ನೀಡತಕ್ಕಂತಹ ಮತ್ತು ಯಾವ ಕೊಳವೆ ಬಾವಿಗಳು ಕೆಟ್ಟಿವೆ ಅದನ್ನು ರಿಪೇರಿ ಮಾಡುವುದಕ್ಕೆಂದು 5 ಲಕ್ಷ ರೂಪಾಯಿ ಕೊಡತಕ್ಕಂತಹ ಒಂದು ವ್ಯವಸ್ಥೆ ಮಾಡಿದರೆ ಸ್ವಲ್ಪವಾದರೂ ಕುಡಿಯುವ ನೀರಿನ ತೊಂದರೆಯನ್ನು ತಪ್ಪಿಸುವುದಕ್ಕೆ ಸಾಧ್ಯವಿರುತ್ತದೆ. ಇಷ್ಟನ್ನು ಹೇಳುತ್ತಾ ಅಧ್ಯಕ್ಷರು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ) : ಮಾನ್ಯ ಅಧ್ಯಕ್ಷರೇ, ಕುಡಿಯುವ ನೀರಿನ ವಿಚಾರದಲ್ಲಿ ನಮ್ಮ ಶಾಸಕರೆಲ್ಲರೂ ಬಹಳ ಆಸಕ್ತಿ ವಹಿಸಿ ಸ್ಪಷ್ಟವಾದ ಅಭಿಪ್ರಾಯವನ್ನು ತಿಳಿಸಿದ್ದಾರೆ. ನಮ್ಮ ಸರಕಾರ ಮಾಡಬೇಕಾದಂತಹ ಅತ್ಯಗತ್ಯವಾದಂತಹ ಕೆಲಸ ಯಾವುದು ಎಂದರೆ, ಹೆಚ್ಚು ರಿಗ್ಸ್ ಅನ್ನು ಒದಗಿಸಬೇಕು ಮತ್ತು ಪ್ರತಿ ತಾಲ್ಲೂಕಿನಲ್ಲಿ ಎಷ್ಟು ರಿಗ್ಸ್‌ಗಳ ಅವಶ್ಯಕತೆ ಇದೆ ಎನ್ನುವುದು ತಿಳಿದು ಅದರ ಸಂಖ್ಯೆಗನುಗುಣವಾಗಿ ವಿಚಾರ ಮಾಡಿ ರಿಗ್ಸ್‌ಗಳನ್ನು ಒದಗಿಸಬೇಕು. ಇಷ್ಟು ಮಾತ್ರವಲ್ಲ, ಆಯಾ ಸ್ಥಳದಲ್ಲಿರತಕ್ಕಂತಹ ಇಂಜಿನಿಯರ್ಸ್‌ಗಳು, ಅಸಿಸ್ಟೆಂಟ್ ಇಂಜಿನಿಯರ್ಸ್‌ಗಳು ಮತ್ತು ಇನ್ನೂ ಸಾಕಾದಷ್ಟು ಜನ ನೌಕರರು ಏನಿದ್ದಾರೆ, ಅವರೆಲ್ಲರಿಗೂ ಒಂದು ತಾಲ್ಲೂಕನ್ನು ಇಷ್ಟಿಷ್ಟು ಭಾಗವೆಂದು ಮಾಡಿ ಅವರು ಇಂತಹ ಕಡೆಗಳಲ್ಲಿ ಮೇಲ್ವಿಚಾರಣೆ ಮಾಡಬೇಕೆಂದು ನೇಮಕ ಮಾಡಬೇಕಾಗುತ್ತದೆ. ಸಂಬಂಧಪಟ್ಟ ಮಂತ್ರಿಗಳು ತಾಲ್ಲೂಕಿನಲ್ಲಿರತಕ್ಕಂತಹ ಶಾಸಕರು ಅಲ್ಲಿನ ಸಮಿತಿಯ ಅಧ್ಯಕ್ಷರಾಗಿರತಕ್ಕಂತಹವರು ತಹಶೀಲ್ದಾರ್, ಬಿಡಿಒ ಅವರು ಮಾಡತಕ್ಕಂತಹ ಕೆಲಸವನ್ನು ಸ್ಪಷ್ಟಗೊಳಿಸಬೇಕು. ಬೋರ್‌ವೆಲ್‌ಗಳನ್ನು ತೆಗೆಸತಕ್ಕ ಜವಾಬ್ದಾರಿ ಯಾರಿಗೆ ಅವುಗಳನ್ನು ರಿಪೇರಿ ಮಾಡತಕ್ಕಂತಹ ಜವಾಬ್ದಾರಿಯನ್ನು ಯಾರಿಗೆ ಅದರ ರಿಪೇರಿಗೆ ಬೇಕಾದ ಸಾಮಾನುಗಳನ್ನು ತರಲಿಕ್ಕೆ ಒಂದು ದಿವಸವೂ ತಡಮಾಡದೆ ಅದನ್ನು ತಂದು ಕೊಡತಕ್ಕಂಥಹ ವ್ಯವಸ್ಥೆ ಹೀಗೆ 3-4 ವಿಭಾಗ ಮಾಡಿ ಒಂದೊಂದು ಭಾಗದ ಜವಾಬ್ದಾರಿಯನ್ನು ಒಬ್ಬೊಬ್ಬ ಅಧಿಕಾರಿಗಳಿಗೆ ವಹಿಸಿ; ಈ ಕೆಲಸ ಸಮರ್ಪಕವಾಗಿ ನಡೆಯುತ್ತಿದೆಯೋ ಇಲ್ಲವೇ ಎನ್ನುವುದಕ್ಕೆ ರೆವಿನ್ಯೂ ಸಬ್‌ಡಿವಿಜನ್ ಅಧಿಕಾರಿಗಳಾಗಬಹುದು ಇಲ್ಲವೇ ಸಬ್‌ಡಿವಿಜನ್ ಮಟ್ಟದ ಅಧಿಕಾರಿಗಳನ್ನಾದರೂ ನೇಮಕ ಮಾಡಿ ಈ ಕೆಲಸ ಸಮರ್ಪಕವಾಗಿ ನಡೆಯುವ ಹಾಗೆ ಮಾಡಬೇಕು. ವಾರಕ್ಕೊಂದು ದಿನವಾದರೂ ಮಂತ್ರಿಗಳಿಗೆ ಯಾವ್ಯಾವ ತಾಲ್ಲೂಕಿನಲ್ಲಿ ಎಷ್ಟು ಹೊಸದಾಗಿ ಬೋರ್‌ವೆಲ್‌ಗಳನ್ನು ತೆಗೆದಿದ್ದಾರೆ, ಎಷ್ಟು ಕೆಲಸ ಮಾಡುತ್ತಿವೆ ಎಷ್ಟು ಬೋರ್‌ವೆಲ್‌ಗಳು ಕೆಟ್ಟಿವೆ .ಎಷ್ಟು ರಿಪೇರಿ ಮಾಡಿದ್ದಾರೆ. ಇನ್ನು ಎಷ್ಟು

ಬೋರ್‌ವೆಲ್‌ಗಳು ಬೇಕಾಗುತ್ತದೆ ಎಂಬ ಬಗ್ಗೆ ವರದಿಯನ್ನು ತರಿಸಿಕೊಳ್ಳಬೇಕು. ಇಲ್ಲಿ ನಾವು ಚರ್ಚೆ ಮಾಡಿ ಗಂಟಲು ನೋಯಿಸಿಕೊಂಡರೆ ಪ್ರಯೋಜನವಿಲ್ಲ. ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಯಾವ್ಯಾವ ತಾಲ್ಲೂಕಿನಲ್ಲಿ ಎಷ್ಟು ಬೋರ್‌ವೆಲ್‌ಗಳ ಅಗತ್ಯ ಇದೆ, ಒಂದು ವಾರದಲ್ಲಿ ಎಷ್ಟು ರಿಪೇರಿಯಾಗಬೇಕು ಅದಕ್ಕೆ ಬೇಕಾದಂತಹ ಸಲಕರಣೆಗಳನ್ನು ಒದಗಿಸಿಕೊಡಬೇಕು. ಹೀಗೆ ಎಲ್ಲರಿಗೂ ಜವಾಬ್ದಾರಿಯನ್ನು ಹಂಚಬೇಕು. ಈ ಶಾಸನ ಸಭೆ ಯಾವಾಗಲೂ ನಡೆಯದೇ ಇರಬಹುದು; ಆದರೆ ಮಂತ್ರಿಗಳು ಇದರ ಬಗ್ಗೆ ಸರಿಯಾಗಿ ಕೆಲಸ ಮಾಡಬೇಕು. ಮಾನ್ಯ ಮಂತ್ರಿಗಳಾಗಲೀ, ಮುಖ್ಯಮಂತ್ರಿಗಳಾಗಲೀ ಈ ಬಗ್ಗೆ ವರದಿಯನ್ನು ಎಲ್ಲಾ ತಾಲ್ಲೂಕುಗಳಿಂದ ತರಿಸಿಕೊಂಡು ಪತ್ರಿಕೆಗಳಲ್ಲಿ ಸ್ಪಷ್ಟವಾಗಿ ಇಷ್ಟು ಬೋರ್‌ವೆಲ್‌ಗಳನ್ನು ಹಾಕಿದ್ದೇವೆ. ಈ ವಾರಕ್ಕೆ ಇಷ್ಟು ರಿಪೇರಿ ಮಾಡಿದ್ದೇವೆ ಇನ್ನು ರಿಪೇರಿಯಾಗಬೇಕಾದಂತಾದ್ದು ಇಷ್ಟು ಇದೆ, ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆಂದು ಅನೌನ್ಸ್ ಮಾಡಬೇಕು. ಇಲ್ಲವೇ ಶಾಸಕರ ಗಮನಕ್ಕೂ ಇದನ್ನು ತರತಕ್ಕಂತಹ ವ್ಯವಸ್ಥೆಯಾಗಬೇಕೆಂದು ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಾಬಗೌಡ ರುದ್ರಗೌಡ ಪಾಟೀಲ್(ಕಿತ್ತೂರು): ಮಾನ್ಯ ಉಪಾಧ್ಯಕ್ಷಿಣೀಯವರೆ, ಒಂದು ವಾರದಲ್ಲಿ ಸರ್ಕಾರ ನೀರು ಬಾರದ ಪಂಪುಗಳನ್ನು ತೆಗೆಯಬೇಕು. ಏಕೆಂದರೆ ಆರು ವರ್ಷಗಳ ಹಿಂದೆ ಕೊರೆದ ಬೋರ್‌ಗಳು. ಅವುಗಳಲ್ಲಿ ಶಿಲ್ಟ್ ತುಂಬಿವೆ, ಪೈಪುಗಳು ತೂತಾಗಿ ಸೋರುತ್ತಿವೆ ಅಂತಹ ಕೊಳವೆ ಬಾವಿಗಳಲ್ಲಿ ನೀರು ಬರುವುದಿಲ್ಲ. ಮಧ್ಯೆ ಮಧ್ಯೆ ಒಂದು ವೇಳೆ ಬೋರ್‌ಗಳನ್ನು ಕೊರೆದರೂ ನೀರೇ ಬರುವುದಿಲ್ಲ. ಹೊಸದಾಗಿ ಬೋರ್‌ಗಳನ್ನು ಹಾಕುವುದಕ್ಕೆ ಮೊದಲು ಹಳೆಯ ಬೋರ್‌ಗಳನ್ನು ಅವು ಏನಾಗಿವೆ ಎಂಬುದನ್ನು ನೋಡಬೇಕು. ಆ ಬೋರ್‌ಗಳಲ್ಲಿ ತೂತು ಬಿದ್ದಿದ್ದರೆ, ಶಿಲ್ಟ್ ತುಂಬಿದ್ದರೆ ನೀರು ಬರುವುದಿಲ್ಲ. ಅಂತಹ ಕಡೆಗಳಲ್ಲಿ ಪಂಪ್‌ಗಳನ್ನು ತೆಗೆದು ಹೊದ ಪಂಪ್‌ಗಳನ್ನು ಅಳವಡಿಸಬೇಕು. ಆರು ವರ್ಷಗಳ ಹಿಂದೆ 80 ಅಡಿ 90 ಅಡಿ ಬೋರ್‌ಕೊರೆದಿದ್ದಾರೆ. ಈಗ ಅಂತರಜಲ ಕೆಳಗೆ ಹೋಗಿದೆ. ಅಂತಹ ಬೋರ್‌ಗಳನ್ನು ಇನ್ನು 20 ಅಡಿ 30 ಅಡಿ ಡೀಪ್ ಮಾಡಿದರೆ, ಹೊಸ ಕೇಸಿಂಗ್ ಪೈಪುಗಳನ್ನು ಹಾಕಿದರೆ ಸಾಕಾಗುತ್ತದೆ. ಮೊದಲು ಅವುಗಳನ್ನು ರಿಪೇರಿ ಮಾಡುವಂತಹ ಕೆಲಸವನ್ನು ಮಾಡಬೇಕು. ತಾವು ಸ್ವಲ್ಪ ಮಹಾರಾಷ್ಟ್ರಕ್ಕೆ ಹೋಗಿ ನೋಡಿಬರಬೇಕು. ಸರ್‌ಪ್ಲಸ್ ವಾಟರ್ ಮ್ಯಾನೇಂಜ್‌ಮೆಂಟ್ ಮಾಡಿ ರೀಚಾರ್ಜಿಂಗ್ ಮಾಡಲಿಲ್ಲವೆಂದರೆ ಏನೂ ಆಗುವುದಿಲ್ಲ. ಸುಮ್ಮನೆ ನೀವು ಬೋರ್‌ಗಳನ್ನು ಕೊರೆದರೆ ನೀರು ಬರುವುದಿಲ್ಲ. ಇದ್ದ ಬೋರ್‌ಗಳಲ್ಲಿ ನೀರು ಬರಬೇಕಾ ದರೆ ಮಳೆಯ ನೀರನ್ನು ಭೂಮಿಯಲ್ಲಿ ಹಿಂಗಿಸಬೇಕು. ಮಹಾರಾಷ್ಟ್ರದಲ್ಲಿ ಹೋಗಿ ನೋಡಿದರೆ ಅದು ತಮಗೆ ಅರ್ಥವಾಗುತ್ತದೆ. ಇದೇ ವರ್ಷದಲ್ಲಿ ಅಂತಹ ಕಾರ್ಯಕ್ರಮವನ್ನು ತಾವು ತೆಗೆದುಕೊಳ್ಳಬೇಕೆಂದು ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ಸದನದ ಎಲ್ಲಾ ಸದಸ್ಯರು ಈ ಅಧಿವೇಶನದಲ್ಲಿ ಮತ್ತು ಹಿಂದಿನ ಅಧಿವೇಶನದಲ್ಲಿ ಇದರ ಬಗ್ಗೆ ಮಾತನಾಡಿದ್ದೇವೆ. ಈಗ ಎಲ್ಲರೂ ಸಹ ತಮ್ಮ ಕಳಕಳಿಯನ್ನು ಈ ವಿಚಾರದಲ್ಲಿ ವ್ಯಕ್ತಪಡಿಸಿದ್ದೇವೆ. ಆದರೆ ಇದರಿಂದ ಸರ್ಕಾರದ ಮೇಲೆ ಯಾವುದೇ ಪರಿಣಾಮವಾಗಲಿಲ್ಲವೆನ್ನುವುದು ನನ್ನ ವಾದ. ಏನೂ ಸಹಿತ ಇದರಿಂದ ಪರಿಣಾಮವಾಗಿಲ್ಲ. ಇದುವರೆಗೆ ಮಾತನಾಡಿರತಕ್ಕ ಸದಸ್ಯರುಗಳು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಸಮಸ್ಯೆಗಳನ್ನು ಹೇಳಿದರು. ಮನುಷ್ಯರು, ಪ್ರಾಣಿಗಳು, ಪಕ್ಷಿಗಳಿಗೂ ಸಹ ಕುಡಿಯಲಿಕ್ಕೆ ನೀರು ಸಿಗುತ್ತಿಲ್ಲವೆನ್ನುವ ವಿಚಾರವನ್ನು ಹೇಳಿದರು. ಪಟ್ಟಣ ಪ್ರದೇಶಗಳಲ್ಲಿಯೂ ಹಾಗೆಯೇ ಇದೆ. ನನಗೆ ಅರ್ಥವಾಗುತ್ತಿಲ್ಲ; ಮಾನ್ಯ ಬಸವಲಿಂಗಪ್ಪನವರು ಬಹಳ

ಹಿರಿಯ ರಾಜಕಾರಣಿಗಳು. ಅವರು ಬೇರೆ ವಿಷಯಗಳಲ್ಲಿ ಕಳೆಯುತ್ತಿರುವ ಸಮಯವನ್ನು ಅವರು ಇದಕ್ಕಾಗಿ ಸಮಯವನ್ನು ಕಳೆದಿದ್ದರೆ ಇಷ್ಟು ಹೊತ್ತಿಗೆ ಸಮಸ್ಯೆಯನ್ನು ಬಗೆಹರಿಸಬಹುದಾಗಿತ್ತು ಎಂದು ನಾನು ಅಂದುಕೊಂಡಿದ್ದೇನೆ. ಇವರು ಜಿಲ್ಲಾ ಪರಿಷತ್‌ನ ಅಧಿಕಾರವನ್ನು ವಾಪಸ್ಸು ತೆಗೆದುಕೊಳ್ಳುವ ಬಗ್ಗೆ ಅಥವಾ ಅಲ್ಲಿ ಬೇರೆ ಬೇರೆ ವಿಷಯಗಳಲ್ಲಿ ಕಾಂಟ್ರವರ್ಸಿ ಮಾಡತಕ್ಕ ಸಮಯವನ್ನು ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಉಪಯೋಗಿಸಿದ್ದರೆ ಸಾಧ್ಯವಾಗುತ್ತಿತ್ತು. ನಾನು ಇವತ್ತು ಅವರ ರಾಜಿನಾಮೆಯನ್ನು ಕೇಳುವುದಿಲ್ಲ. ಆದರೆ ಸಂಪೂರ್ಣವಾಗಿ ಇದರ ಜವಾಬ್ದಾರಿಯನ್ನು ನೀವೇ ಹೊತ್ತುಕೊಳ್ಳಬೇಕಾಗುತ್ತದೆಂದು ಹೇಳುತ್ತಿದ್ದೇನೆ. ನೀವು ಮಾಡಬೇಕಾಗಿರುವುದು ಇಷ್ಟೆ...

ಶ್ರೀ ಬಿ.ಬಸವಲಿಂಗಪ್ಪ : ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಸಿಂಧ್ಯಾರವರು ವಿಷಯಗಳನ್ನು ಹೇಳಲಿ. ಸರ್ಕಾರ ಲೋಪ ಮಾಡಿರುವ ಬಗ್ಗೆ ಅವರು ಅದನ್ನು ಹೇಳಲಿ. ಅವರು ಸಲಹೆ ಕೊಡಲಿ. ಜನಗಳ ಸೇವೆಯನ್ನು ಯಾವ ರೀತಿ ಮಾಡಬೇಕು ಅದನ್ನು ಹೇಳಿ. ಅದನ್ನು ಬಿಟ್ಟು ರಾಜಿನಾಮೆಯನ್ನು ಕೇಳುತ್ತಾರೆ. ಅಷ್ಟೊಂದು ಸುಲಭವಾಗಿ ಹಗುರವಾಗಿ ಮಾತನಾಡಬೇಡಿ.

ಶ್ರೀ ಪಿ.ಜಿ.ಆರ್.ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ನಾನು ಹಗುರವಾಗಿ ಮಾತನಾಡುತ್ತೇನೆಂದು ಹೇಳಿದರು. ನಾನು ಗೌರವದಿಂದ ಮಾತನಾಡಿದ್ದೇನೆ. ಇನ್ನು ಬಹಳ ಕಠಿಣವಾಗಿ ನಾನು ಮಾತನಾಡಬೇಕಾಗುತ್ತದೆ. ಅಷ್ಟೆ, ಆದರೆ ನಾನು ಮಾತನಾಡುವುದಕ್ಕೆ ತಯಾರಾಗಿಲ್ಲ, ಏಕೆಂದರೆ ನಾನು ನಿನ್ನೆ ಸಹ ಹೇಳಿದ್ದೇನೆ. ಈ ಸರ್ಕಾರ ರುಬ್ಬುಗುಂಡು ಇದ್ದಹಾಗೆ, ಇದಕ್ಕೆ ಪಂಚೇಂದ್ರೀಯಗಳು ಇಲ್ಲ ಅವು ಯಾವುವು ಕೆಲಸ ಮಾಡುವುದಿಲ್ಲವೆಂದು ಸಹ ಹೇಳಿದ್ದೇನೆ. ಅದನ್ನು ನಾನು ಮತ್ತೆ ರಿಪೀಟ್ ಮಾಡುವುದಿಲ್ಲ. ನಾವು ತೂಕವಾಗಿಯೇ ಮಾತನಾಡಿದ್ದೇವೆ. ದಯವಿಟ್ಟು ತಾವು ಅಂಕಿ ಅಂಶಗಳನ್ನು ಕಳೆದ ಎರಡು ತಿಂಗಳಿಂದ ಏನೇನು ಮಾಡಿದ್ದೀರೆಂದು ಕೊಡಿ. ಮಾನ್ಯ ವಾಟಾಳ್ ನಾಗರಾಜ್‌ರವರು 50 ಸಾವಿರ ಬೋರ್‌ವೆಲ್‌ಗಳನ್ನು ಕೊರೆದಿದ್ದಾರೆಂದು ಹೇಳಿದ್ದಾರೆ. ನನಗೆ ಗೊತ್ತಿರುವ ಹಾಗೆ ನಿಮ್ಮ ಕಾರ್ಯದರ್ಶಿಮಟ್ಟದವರು ನಮಗೆ ಅಂಕಿಅಂಶಗಳನ್ನು ಕೊಡದಿರಬಹುದು, ನಮಗೂ ಅಂಕಿಅಂಶಗಳನ್ನು ಕೊಡತಕ್ಕ ಅಧಿಕಾರಿಗಳು ಇದ್ದಾರೆ. 70 ಸಾವಿರಕ್ಕಿಂತ ಹೆಚ್ಚಿನ ಬೋರ್‌ವೆಲ್‌ಗಳು ಇಂದು ಕೆಲಸ ಮಾಡುತ್ತಿಲ್ಲ. ಕಳೆದ ನಾಲ್ಕು ತಿಂಗಳುಗಳಿಂದ ರಿಪೇರಿ ಕೆಲಸ ಏನೂ ಆಗುತ್ತಿಲ್ಲ. ೨ ಸಾವಿರ ಮಿನಿವಾಟರ್ ಸಪ್ಲೈ ಸ್ಕೀಮ್‌ಗಳು ಇಡೀ ರಾಜ್ಯದಲ್ಲಿ ಡಿಫೆಕ್ಟ್ ಆಗಿವೆ. ಮತ್ತೆ ಕಳೆದ ನಾಲ್ಕೈದು ತಿಂಗಳುಗಳಿಂದ ಅಂದರೆ ನವೆಂಬರ್ ತಿಂಗಳಿನ ಏನೂ ಕೆಲಸವಾಗುತ್ತಿಲ್ಲ. ಸ್ಟೀಲ್ ಇರಲಿಲ್ಲ, ಸಿಮೆಂಟ್ ಇರಲಿಲ್ಲ ಆದ್ದರಿಂದ ರಿಪೇರಿ ಕೆಲಸ ಆಗಿಲ್ಲ. ಪ್ರತಿನಿತ್ಯ ಸೂಚನೆಗಳು ಸರ್ಕಾರದಿಂದ ಪತ್ರಗಳ ಮೂಲಕ ಹೋಗುತ್ತವೆ, ಒರಲ್ ಆಗಿ ಹೋಗುತ್ತವೆ, ಅಧಿಕೃತವಾಗಿ ಸಹ ಹೋಗುತ್ತವೆ. ಇದರಿಂದಾಗಿ ಏನೂ ಕೆಲಸ ಮಾಡಲಿಕ್ಕೆ ಆಗುತ್ತಿಲ್ಲ. ಜನಗಳಲ್ಲಿ ದೊಡ್ಡ ಹಾಹಾಕಾರವೆದ್ದರೆ. ನಿಮ್ಮ ಸರ್ಕಾರದ ಬಗ್ಗೆ ಇಡೀ ರಾಜ್ಯದ ಹೆಣ್ಣುಮಕ್ಕಳು ಕಣ್ಣೀರು ಹಾಕುತ್ತಿದ್ದಾರೆ. ನಿಮಗೆ ಶಾಪ ಹಾಕುತ್ತಿದ್ದಾರೆ; ಇದು ನಿಮಗೆ ಅರ್ಥವಾಗುತ್ತಿಲ್ಲ. ನೀವು 5 ಲಕ್ಷ 3 ಲಕ್ಷ 2 ಲಕ್ಷ ಬಿಡುಗಡೆ ಮಾಡಿದರೆ ಅದು ಯಾವ ಕಡೆಗೆ ಸಾಕಾಗುತ್ತದೆ? ಹೆಗಡೆಯವರ ಸರ್ಕಾರ ಇದ್ದಾಗ ಹಣವಿರಲಿಲ್ಲ ಈಗ 500 ಕೋಟಿ ರೂಪಾಯಿ ಸಂಗ್ರಹ ಮಾಡಿದ್ದೇವೆಂದು ಹೇಳುತ್ತಿರುವ ನೀವು ಆ 500 ಕೋಟಿ ರೂಪಾಯಿಗಳಲ್ಲಿ 50 ಕೋಟಿಯನ್ನು ಕುಡಿಯುವ ನೀರಿಗಾಗಿ ಖರ್ಚು ಮಾಡಿ. ಕೊನೆಯ ಪಕ್ಷ ಒಂದು ತಾಲ್ಲೂಕಿಗೆ 30 ಲಕ್ಷ ರೂಪಾಯಿಗಳನ್ನು ಏತಕ್ಕೆ ಕೊಡಬಾರದು? ಅದನ್ನು ಮಾಡುವುದಕ್ಕೆ ಏನು ತೊಂದರೆಯಿದೆ? ಈ ಅಧಿವೇಶನ ಪ್ರಾರಂಭವಾದ ಮೇಲೆ ಮಾರ್ಚಿ 31ನೇ ತಾರೀಕಿನೊಳಗಡೆ ಒಬ್ಬೊಬ್ಬ

ಶಾಸಕರಿಗೆ 10 ಬೋರ್‌ವೆಲ್‌ಗಳನ್ನು ಕೊರೆಸುವುದಕ್ಕೆ ಅವಕಾಶ ಮಾಡಿದ್ದೀರಿ. ಆ ಕೆಲಸ ಮಾಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ದುಡ್ಡು ಕೊಟ್ಟಿದ್ದೀರಿ. ಅವರು ಒಂದೆರಡು ಬೋರ್‌ವೆಲ್‌ಗಳನ್ನು ಒಂದೊಂದು ತಾಲ್ಲೂಕಿನಲ್ಲಿ ಹಾಕಿದ್ದಾರೆ. ಇನ್ನು ಪಟ್ಟಣ ಪ್ರದೇಶಗಳಲ್ಲಿ ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಅಂಡ್ ಸಿವರೇಜ್ ಬೋರ್ಡ್ ಮೂಲಕ, ಅದು ಚಾಮರಾಜನಗರ ಇರಬಹುದು, ಕನಕಪುರ ಅಥವಾ ಉಡುಪಿ ಇರಬಹುದು, ಅಂತಹ ಕಡೆಗಳಲ್ಲಿ ಮೂರ್ನಾಲ್ಕು ಬೋರ್‌ವೆಲ್‌ಗಳನ್ನು ಹಾಕಿಸುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಆದೇಶವನ್ನು ಕೊಟ್ಟಿದ್ದಾರೆ. ಅವರ ಹತ್ತಿರ ರಿಗ್ ಇಲ್ಲ. ಅಂದರೆ ಈ ಬಗ್ಗೆ ಏನು ಮಾಡಬೇಕೆನ್ನುವ ವಿವೇಚನೆ ಈ ಸರ್ಕಾರಕ್ಕೆ ಇದೆಯೇ? ಯಾವ ದಿಕ್ಕಿನಲ್ಲಿ ವಿಚಾರ ಮಾಡುತ್ತಿದ್ದೀರಿ? ರಾಜಿನಾಮೆಯಲ್ಲದೆ ನಾವು ಇನ್ನೇನು ಕೇಳಬೇಕು? ನೀವು ಕೆಲಸ ಮಾಡುತ್ತಿದ್ದೀರಿ ಎನ್ನುವುದಕ್ಕೆ ಏನಾದರೂ ಸಾಕ್ಷಿ ಇದೆಯೇನು? ನಿಮಗೆ ಇವತ್ತು ಪ್ರಚಾರ ಬೇಕು, ಕಾಂಟ್ರಾವರ್ಸಿ ಬೇಕು. ಏನಾದರೂ ಕೇಳಿದರೆ ಅದು ಹಾಗೇನೇ, ಕುಳಿತುಕೊಳ್ಳಿ ಎಂದು ಹೇಳುತ್ತೀರಿ. ಇದನ್ನು ಮಾಡಿರಿ ಎಂದು ಹೇಳಿದರೆ ನಿಮಗೆ ಅರ್ಥವೇ ಆಗುವುದಿಲ್ಲ, ಅದಕ್ಕಾಗಿ ಇದಕ್ಕೆ ನೇರವಾಗಿ ನೀವೇ ಜವಾಬ್ದಾರರು ಎಂದು ನಾನು ಹೇಳುತ್ತಿದ್ದೇನೆ. ಈಗ ಶ್ರೀ ಎಂ.ವೈ. ಘೋರ್ಪಡೆಯವರಿಗೆ ಮಾತನಾಡಬೇಕೆಂದು ಮನಸ್ಸು ಇದ್ದರೂ ಸಹಿತ, ಅವರಿಗೆ ಮಾತನಾಡಲಿಕ್ಕೆ ಆಗುತ್ತಿಲ್ಲ. ಏಕೆಂದರೆ, ನಿನ್ನೆ ಶ್ರೀ ಹನುಮೇಗೌಡರು ಹೇಳುತ್ತಿದ್ದರು, ಪಕ್ಷದ ಶಿಸ್ತಿಗೆ ನಾನು ಇಲ್ಲಿ ಒಳಪಡುತ್ತೇನೆ, ಹೊರಗಡೆ ಹೋದರೂ ಸಹಿತ ನಾನು ಧರಣಿ ಮಾಡುವುದಕ್ಕೆ ಆಗುವುದಿಲ್ಲ; ಆದ್ದರಿಂದ ಚಳುವಳಿ ಮಾಡುತ್ತೇನೆ ಎನ್ನತಕ್ಕಂಥ ಎಚ್ಚರಿಕೆಯನ್ನು ಈ ಸರ್ಕಾರಕ್ಕೆ ಅವರು ಕೊಟ್ಟಿದ್ದಾರೆ. ಬರಗಾಲ ಪರಿಹಾರ ಕೆಲಸ ಸರಿಯಾಗಿ ಆಗುತ್ತಿಲ್ಲ ಅಂತ ಆ ಮಟ್ಟಕ್ಕೆ ಒಬ್ಬರು ಶಾಸಕರು ಹೇಳಬೇಕಾದರೆ, ಶ್ರೀ ಘೋರ್ಪಡೆಯವರು ಆವತ್ತು ಏನು ಕೇಳಿದ್ದರು? ನಾವು ಬಜೆಟ್‌ನಲ್ಲಿ ಕೊಟ್ಟಂಥ ಹಣವನ್ನು, ಇದಕ್ಕೋಸ್ಕರ ಏಕೆ ನೀವು ಖರ್ಚು ಮಾಡುತ್ತಿಲ್ಲ ಎಂದು ಹೇಳಿದ್ದು ಪತ್ರಿಕೆಗಳಲ್ಲೆಲ್ಲ ಬಂದಿದೆ. ಇದು ಕರ್ನಾಟಕದ ಜನತೆಗೆ ಆದಂಥ ಅಪಮಾನ. ಶ್ರೀ ಕೆ.ಎಚ್.ರಂಗನಾಥ್ ಅವರಿಗೆ ಶ್ರೀ ಎಂ.ವೈ. ಘೋರ್ಪಡೆಯವರಿಗೆ ನೋಟೀಸ್ ಕೊಟ್ಟಿಲ್ಲವೆಂದು ನನಗೆ ಗೊತ್ತು. ಕೊಟ್ಟಿದ್ದೇವೆ ಎಂದೂ ಅವರೂ ಸಹ ಹೇಳುವುದಿಲ್ಲ. ಆದರೆ ಸುದ್ದಿಯೇ ನಿಮ್ಮ ಸರ್ಕಾರಕ್ಕೆ ಅವಮಾನಕರವಾಗಿದೆಯೆಂದು ನಾನು ಹೇಳುತ್ತಿದ್ದೇನೆ. ಇದರಿಂದ ನೀವು ಲೋಕಸಭಾ ಚುನಾವಣೆಯನ್ನು ಎದುರಿಸಬೇಕಾಗಿದೆ. ಯಾವ ರೀತಿ ಓಟನ್ನು ಕೇಳುವುದಕ್ಕೆ ಹೋಗುತ್ತೀರಿ? ಇದನ್ನು ಆದರೂ ಸ್ವಲ್ಪ ಯೋಚನೆ ಮಾಡಿ. ಆದ್ದರಿಂದ ನಾನು ಏನು ಒತ್ತಾಯ ಮಾಡುತ್ತಿದ್ದೇನೆ ಎಂದರೆ, ತಾವು ದಯವಿಟ್ಟು ತಕ್ಷಣ ಕೊನೆಯಪಕ್ಷ 50 ಕೋಟಿ ರೂಪಾಯಿಗಳನ್ನಾದರೂ ಇದಕ್ಕೋಸ್ಕರ ನೀವು ಖರ್ಚು ಮಾಡಿ. ಪರಿಸ್ಥಿತಿ ಏಪ್ರಿಲ್, ಮೇನಲ್ಲಿ ಇನ್ನೂ ಕಷ್ಟವಾಗುತ್ತದೆ. ಇನ್ನೂ 50 ಸಾವಿರ ಬೋರ್‌ವೆಲ್‌ಗಳು ಕೆಡತಕ್ಕಂಥ ಸಂಭವ ಇದೆ. ಆದ್ದರಿಂದ ಒಂದು 50 ಕೋಟಿ ರೂಪಾಯಿಗಳನ್ನು ಇದಕ್ಕೋಸ್ಕರ ತತ್‌ಕ್ಷಣ ಎತ್ತಿಡಿ. ಅದಕ್ಕೋಸ್ಕರ ನಾವು ಹೇಳಿದ್ದು, ಇಂದು ಬರೇ ಬಸವಲಿಂಗಪ್ಪನವರು ಇದ್ದರೆ ಆಗುವುದಿಲ್ಲ. ಪಟ್ಟಣ ಪ್ರದೇಶಗಳಿಗೆ ಸಂಬಂಧಪಟ್ಟ ಮಂತ್ರಿಗಳೂ ಇರಬೇಕು, ಮುಖ್ಯಮಂತ್ರಿಗಳೂ ಇರಬೇಕು ಎಂದು ಏತಕ್ಕೋಸ್ಕರ ನಿನ್ನೆ ಅಧ್ಯಕ್ಷರು ಈ ವಿಷಯದಲ್ಲಿ ಅರ್ಧಗಂಟೆ ಚರ್ಚೆಯಾಗಬೇಕೆಂದು ಹೇಳಿದ್ದರು? ವಿಷಯದ ಗಹನತೆಯನ್ನು ಅರ್ಥ ಮಾಡಿಕೊಂಡು ಹೇಳಿದರು. ಏಕೆಂದರೆ ಇವತ್ತು ಮದ್ದೂರಿನಲ್ಲಿ ಏನಾಗಿದೆಯೆಂದು ಅವರು ಭಾನುವಾರ. ಶನಿವಾರ ಹೋದಾಗ ಗೊತ್ತಾಗುತ್ತದೆ. ದಾವಣಗೆರೆಯಲ್ಲಿ ಕುಡಿಯುವ ನೀರಿಗೆ ಎಷ್ಟು ತೊಂದರೆ ಇದೆಯೆಂಬುದು ತಮಗೆ ಗೊತ್ತಿದೆ. ಬೆಂಗಳೂರು ನಗರದಲ್ಲೇ ಎಷ್ಟೊಂದು ತೊಂದರೆ ಇದೆ. ನಾವು ಇಲ್ಲಿ ವಿಧಾನಸಭೆಯಲ್ಲಿ ಭಾಷಣ ಮಾಡುತ್ತಿದ್ದೇವೆ, ಟಿ.ವಿ.ಯಲ್ಲಿ ಬರುತ್ತದೆ, ಪತ್ರಿಕೆಗಳಲ್ಲಿ ಬರುತ್ತಿದೆ. ರಾತ್ರಿ ಹನ್ನೊಂದು ಗಂಟೆಗೆ ಕೆಲವು ಜನ ಫೋನ್ ಮಾಡಿ ನನ್ನ

ಮನೆಗೆ ನೀರು ಬಂದಿಲ್ಲ. ದಯವಿಟ್ಟು ಏನಾದರೂ ಮಾಡಿ ಎಂದು ನಮ್ಮನ್ನು ಕೇಳುತ್ತಾರೆ. ಅವರು ನಮ್ಮನ್ನೇ ಕೇಳುತ್ತಾರೆ- 'ನೀವು ವಿರೋಧ ಪಕ್ಷದವರು ಏನು ಮಾಡುತ್ತಿದ್ದೀರಿ? ಈ ಸರ್ಕಾರ ವಿಧಾನಸೌಧದಲ್ಲಿ ಆಡಳಿತ ನಡೆಸುವುದಕ್ಕೆ ಏಕೆ ಬಿಡುತ್ತೀರಿ' ಎಂದು ಕೇಳುತ್ತಾರೆ ಇಂತಹ ಪರಿಸ್ಥಿತಿಯನ್ನು ನೀವು ತಂದಿಟ್ಟಿದ್ದೀರಿ. ಆದ್ದರಿಂದ ನಾನು ತಮ್ಮಲ್ಲಿ ಕೊನೆಯದಾಗಿ ಮನವಿ ಮಾಡಿಕೊಳ್ಳುತ್ತೇನೆ. ಕೊನೆಯಪಕ್ಷ ಒಂದು 50 ಕೋಟಿ ರೂಪಾಯಿಗಳನ್ನು ಇದಕ್ಕೋಸ್ಕರ ವಿಶೇಷವಾಗಿ ಇಟ್ಟು, ಹೆಚ್ಚು ಬೋರ್‌ವೆಲ್‌ಗಳನ್ನು ಹಾಕಿಸಲಿಕ್ಕೆ, ಇರತಕ್ಕಂಥ ಮಿನಿವಾಟರ್ ಸಪ್ಲೈಗಳನ್ನು ರಿಪೇರಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಪಟ್ಟಣ ಪ್ರದೇಶಗಳಲ್ಲಿ, ಈ ತಾಲ್ಲೂಕು ಕೇಂದ್ರಗಳಲ್ಲಿ ತತ್‌ಕ್ಷಣ ಕುಡಿಯುವ ನೀರಿನ ವ್ಯವಸ್ಥೆಗೆ ತಾವು ಸೂಕ್ತ ಮಾಡಬೇಕೆಂದು ಹೇಳಿ ನಾನು ಒತ್ತಾಯ ಮಾಡುತ್ತೇನೆ.

ಡಾ|| ಎನ್.ಬಿ.ನಂಜಪ್ಪ (ಶ್ರವಣಬೆಳಗೊಳ) : ಮಾನ್ಯ ಉಪಾಧ್ಯಕ್ಷಿಣಿಯವರೇ, ಇವತ್ತು ಬರಗಾಲ ಬಂದಿದೆ. ಕುಡಿಯುವುದಕ್ಕೆ ನೀರಿಲ್ಲ. ಇವತ್ತು ನಮಗೆ ಬೇಕಾಗಿರತಕ್ಕಂಥದ್ದು ಡಿಸ್ಟ್ರಿಕ್ಟ್‌ವೈಸ್ ಹಣ ಮಾತ್ರ- ಇನ್ನು ಉಳಿದ ವ್ಯವಸ್ಥೆ ಮಾಡುವುದಕ್ಕೆ ಅಧಿಕಾರಿಗಳು ಇದ್ದಾರೆ, ನಾವು ಇದ್ದೇವೆ. ನಮಗೆ ಬೇಕಾಗಿರತಕ್ಕಂಥಾದ್ದು, ಯಾವ ಊರಿನಲ್ಲಿ ಸ್ವಲ್ಪವೂ ಕುಡಿಯುವುದಕ್ಕೆ ನೀರಿಲ್ಲ, ಅಲ್ಲಿ ಮೊದಲು ಬೋರ್‌ವೆಲ್‌ಗಳನ್ನು ಹಾಕಿಸಿ ಅದಕ್ಕೆ ಹ್ಯಾಂಡ್‌ಪೈಪ್‌ಗಳನ್ನು ಫಿಕ್ಸ್ ಮಾಡಬೇಕು. ಇದನ್ನು ಮೊದಲು ಮಾಡಬೇಕಾಗಿದೆ. ಇದು ಒಂದೇ ದಿವಸದಲ್ಲಿ ಮಾಡತಕ್ಕಂಥ ವ್ಯವಸ್ಥೆ. ಈಗಿನ ಪರಿಸ್ಥಿತಿಯಲ್ಲಿ ಮಿನಿವಾಟರ್ ಸಪ್ಲೈ, ಮೇಜರ್ ವಾಟರ್‌ಸಪ್ಲೈ, ರಿವರ್ ವಾಟರ್ ಸಪ್ಲೈಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗಿಲ್ಲ. ಮೊದಲು ಮಾಡಬೇಕಾಗಿರುವುದು ಬೋರ್‌ವೆಲ್‌ಗಳನ್ನು ತೋಡುವುದು ಮತ್ತು ಎಲ್ಲಿ ದನಕರುಗಳಿಗೆ ನೀರು ಇಲ್ಲ, ಅವುಗಳಿಗೆ ನೀರು ಕೊಡುವುದಕ್ಕೆ ತೊಟ್ಟಿಗಳನ್ನು ಕಟ್ಟಬೇಕು. ದೊಡ್ಡ ಊರಾದರೆ ಎರಡು ಬೋರ್‌ವೆಲ್‌ಗಳನ್ನು ಚಿಕ್ಕ ಊರಾದರೆ ಒಂದು ಬೋರ್‌ವೆಲ್ ಹಾಕಿಸಬೇಕು. ಇಷ್ಟು ಕೆಲಸ ಮಾಡಲು ಸರ್ಕಾರದವರು ಹಣ ಒದಗಿಸಿದರೆ ಇನ್ನುಳಿದ ವ್ಯವಸ್ಥೆಗಳನ್ನು ನಾವು ಮಾಡಿಕೊಳ್ಳಲು ಸಿದ್ಧರಾಗಿದ್ದೇವೆಂಬ ಮಾತನ್ನು ಹೇಳುತ್ತೇನೆ.

ಈಗಾಗಲೇ ಸಾಕಾದಷ್ಟು ರಿಲೀಫ್ ವರ್ಕ್ಸ್ ನಡೆದಿದೆ. ಇಲ್ಲಿ ರಾಜಕೀಯಕ್ಕೋಸ್ಕರ ಮಾತನಾಡುವುದು ಬೇಡ. ನಿಜ ಹೇಳಬೇಕೆಂದರೆ ಪ್ರತಿ ಜಿಲ್ಲೆಗೂ ಸರ್ಕಾರದವರು ಹಣ ಒದಗಿಸಿದ್ದಾರೆ. ಅನೇಕ ಕೆಲಸ ಕಾರ್ಯಗಳು ನನ್ನ ಕ್ಷೇತ್ರದಲ್ಲಿ ಆಗಿವೆ...

(ಗೊಂದಲ)

ಉಪಾಧ್ಯಕ್ಷರು : ಅವರಿಗೆ ಹಣ ಕೊಟ್ಟಿದ್ದಾರೆಂದು ಹೇಳುವುದರಲ್ಲಿ ತಪ್ಪೇನಿದೆ?

ಡಾ. ಎನ್.ಬಿ. ನಂಜಪ್ಪ : ನಮ್ಮ ತಾಲ್ಲೂಕಿನಲ್ಲಿ ಅಥವಾ ನಮ್ಮ ಜಿಲ್ಲೆಯಲ್ಲಿ ಸಾಕಾದಷ್ಟು ರಿಲೀಫ್ ವರ್ಕ್ಸ್ ನಡೆದಿದೆ ಎಂದು ನಾನು ಹೇಳುತ್ತೇನೆ. ಕೆಲಸ ಆಗಿರುವುದನ್ನು ಆಗಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ಉಪಾಧ್ಯಕ್ಷರೇ, ಸನ್ಮಾನ್ಯ ಡಾ. ನಂಜಪ್ಪನವರು ಏನು ಹೇಳಿಕೆ ಕೊಟ್ಟಿದ್ದಾರೆ, ಇದರ ಬಗ್ಗೆ ನಮ್ಮದೇನೂ ತಕರಾರು ಇಲ್ಲ. ಅವರ ಊರಿನಲ್ಲಿ ಕುಡಿಯುವ ನೀರಿಗೆ ತೊಂದರೆ ಇಲ್ಲವೆಂದು ಕಾಣುತ್ತದೆ. ಆದ್ದರಿಂದ ಅವರು ಹೇಳುತ್ತಿರುವುದು ಸರಿ, ನಾನೂ ಸಹ ಸಮರ್ಥನೆ ಮಾಡುತ್ತೇನೆ.

ಡಾ. ಎನ್.ಬಿ.ನಂಜಪ್ಪ : ನಮ್ಮ ಜಿಲ್ಲೆಯಲ್ಲಿ ಫಾಡರ್ ಸಪ್ಲೈ ವ್ಯವಸ್ಥೆ ಮಾಡುವುದಕ್ಕೆ ಲಾರಿಗಳಿವೆ. ಇವತ್ತು ಫಾಡರ್‌ಗೆ ಲಾರಿಗಳನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ರಿಲೀಫ್ ವರ್ಕ್ಸ್ ನಡೆಯುತ್ತಿದೆ. ಇವತ್ತು ಬಂದಿರತಕ್ಕಂತಾದ್ದು ಕುಡಿಯುವ ನೀರಿನ ವ್ಯವಸ್ಥೆ ಮಾತ್ರ. ಈಗ ಮಾತನಾಡುತ್ತಿರತಕ್ಕದ್ದು ಕೂಡ ಕುಡಿಯುವ

ನೀರಿನ ಬಗ್ಗೆ; ಇದರ ಬಗ್ಗೆ ಆದ್ಯತೆ ಕೊಡುವುದಾದರೆ, ಮಿನಿ ವಾಟರ್ ಸಪ್ಲೈ, ಮೇಜರ್ ವಾಟರ್ ಸಪ್ಲೈ ಎಲ್ಲವನ್ನೂ ಮರೆತು, ನಾವು ಮಾಡಬೇಕಾದ್ದು ರಿಗ್‌ವೆಲ್ ಹಾಕಿಸಿ ಪ್ರತಿ ಊರಿನಲ್ಲೂ ನೀರು ಕೊಡತಕ್ಕ ವ್ಯವಸ್ಥೆ ಆಗಬೇಕು. ಇದಕ್ಕೆ ಹಣ ಬೇಕಾಗಿದೆ. ಬೇರೆ ದೊಡ್ಡ ಭಾಷಣ ಬೇಕಾಗಿಲ್ಲ. ಸಾಕಾದಷ್ಟು ಹಣವನ್ನು ಪ್ರತಿ ತಾಲ್ಲೂಕಿಗೆ 100-150ಕೊಳವೆ ಬಾವಿಗಳನ್ನು ಕೊರೆಯುವುದಕ್ಕೆ ಹಣವನ್ನು ಒದಗಿಸುತ್ತೇವೆಂದು ಸರ್ಕಾರದವರು ಹೇಳಿದ್ದಾರೆ. ಒಂದೇ ತಿಂಗಳಲ್ಲಿ, ಒಂದೇ ದಿವಸದಲ್ಲಿ ಅಥವಾ 15 ದಿವಸದಲ್ಲಿ ಈ ಕೆಲಸ ಆಗಬೇಕೆಂದರೆ ಹಣ ಬೇಕಾಗಿದೆ. ಅಷ್ಟೆ; ಹಣ ಬೇಕಾಗಿದೆಯೇ ಹೊರತು ಬೇರೆ ಬೇಕಾಗಿಲ್ಲ, ಈ ಭಾಷಣಗಳೆಲ್ಲಾ ಬೇಕಾಗಿಲ್ಲವೆಂದು ನನ್ನ ಅನಿಸಿಕೆ. ಈ ಭಾಷಣದಿಂದ ನೀರು ಬರುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್.ಹೆಚ್. ಕೌಜಲಗಿ (ಬೈಲಹೊಂಗಲ) : ಸನ್ಮಾನ್ಯ ಅಧ್ಯಕ್ಷಿಣಿಯವರೇ, ಇವತ್ತಿನ ದಿವಸ ಮಲಪ್ರಭಾ ಯೋಜನೆಯಲ್ಲಿ ಪುನರ್‌ವಸತಿ ಗ್ರಾಮಗಳಲ್ಲಿ ಇದುವರೆಗೆ ಕೈ ಪಂಪ್‌ಹಾಕಿಲ್ಲ. 1980ನೇ ಇಸವಿಯಲ್ಲಿ ಬೋರ್‌ವೆಲ್ ಹಾಕಿದರೂ ಸಹಿತ, ಯಾವುದೇ ಬೋರ್‌ವೆಲ್‌ಗೆ ಕೈಪಂಪ್ ಹಾಕಿಲ್ಲ. ಉದಾಹರಣೆಗೆ ಹೇಳಬೇಕಾದರೆ, ಬೈಲಹೊಂಗಲ ತಾಲ್ಲೂಕಿನಲ್ಲಿ ವಕ್ಕುಂಡಿ ಗ್ರಾಮದಲ್ಲಿ ಬೋರ್‌ವೆಲ್ ತೆಗೆದಿದ್ದಾರೆ, ಅದಕ್ಕೆ ಕೈ ಪಂಪ್ ಹಾಕಿ ಎಂದು ಹೇಳಿದರೆ, ಅದು ಪುನರ್ ವಸತಿ, ಮಲಪ್ರಭಾ ಯೋಜನೆಯಲ್ಲಿ ಬರುತ್ತದೆಂದು ಹೇಳುತ್ತಾರೆ. ಇವರು ಜಿಲ್ಲಾ ಪರಿಷತ್ತಿಗೆ ಕೇಳಿದರೆ, ಅವರೂ ಸಹ ಇದನ್ನು ಮಾಡುತ್ತಾ ಇಲ್ಲ. ಇನ್ನೂ ಕೆಲವು ಕಡೆ ಬೋರ್‌ವೆಲ್ ತೆಗೆದರೂ ಸಹಿತ ಕೈಪಂಪ್ ಕೂಡಿಸಿಲ್ಲ. ಪ್ರತಿಯೊಂದು ಮಂಡಲಕ್ಕೂ ಕನಿಷ್ಠ 5 ಬೋರ್‌ವೆಲ್ ಹಾಕಿ, ಕೈಪಂಪ್ ಜೋಡಿಸತಕ್ಕ ಕಾರ್ಯಕ್ರಮ ಹಾಕಬೇಕು. ಬೈಲಹೊಂಗಲ ಟೌನ್‌ಗೆ ಕನಿಷ್ಠ 25 ಬೋರ್‌ವೆಲ್‌ಗಳನ್ನು ಕೂಡಲೇ ಹಾಕಿಸಬೇಕು.

ಒಬ್ಬರು ಮಾನ್ಯ ಸದಸ್ಯರು : ಒಂದೊಂದು ಮಂಡಲದಲ್ಲಿ 30-40 ಹಳ್ಳಿಗಳು ಇವೆ, 5 ಬೋರ್‌ವೆಲ್ ಸಾಕಾಗುವುದಿಲ್ಲ...

ಶ್ರೀ ಎಸ್.ಹೆಚ್. ಕೌಜಲಗಿ : ನಾನು ಕನಿಷ್ಠ 5 ಎಂದು ಹೇಳಿದ್ದೇನೆ. ಆಮೇಲೆ ಬೈಲಹೊಂಗಲ ಟೌನ್‌ಗೆ 25 ಬೋರ್‌ವೆಲ್‌ಗಳನ್ನಾದರೂ ಹಾಕಬೇಕು....

ಶ್ರೀ ಜಿ. ಪುಟ್ಟಸ್ವಾಮಿಗೌಡ : ನಾವು ಈ ಸಭೆಯ ಕಲಾಪವನ್ನು ನೋಡುತ್ತಿದ್ದೇವೆ. ಪ್ರತಿಯೊಬ್ಬ ಸದಸ್ಯರೂ ತಮ್ಮ ಅಭಿಪ್ರಾಯವನ್ನು, ಅವರವರ ಅನಿಸಿಕೆಯನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುವುದಕ್ಕೆ ಸ್ವಾತಂತ್ರ್ಯ ಇದೆ. ಈ ರೀತಿ ಹೇಳುವಾಗ, ಬೇರೆ ಸದಸ್ಯರು ಹೀಗೆ ಹೇಳಬೇಕು, ಹಾಗೆ ಹೇಳಬೇಕು ಎಂದು ಹೇಳಿಕೊಡುವುದಕ್ಕೆ ಮುಕ್ತಾಯ ಹಾಕಬೇಕು. ದಯಮಾಡಿ ಇದನ್ನು ರೆಗ್ಯುಲೇಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಹೆಚ್. ಕೌಜಲಗಿ : ಆದುದರಿಂದ ಕೂಡಲೇ ಬೈಲಹೊಂಗಲ ನಗರದಲ್ಲಿ ತೀವ್ರವಾಗಿರತಕ್ಕ ಕುಡಿಯುವ ನೀರಿನ ತೊಂದರೆ ಪರಿಹರಿಸಲು ಬೋರ್‌ವೆಲ್‌ಗಳನ್ನು ತೋಡಿಸಬೇಕು. ಮತ್ತೆ ಇಟ್ಟಣಗಿ, ಸುತ್ತಗಟ್ಟಿ ಗ್ರಾಮಗಳಲ್ಲಿ ಕೊಳವೆ ಬಾವಿಗಳನ್ನು ಕೊರೆಯತಕ್ಕ ಒಂದು ಕಾರ್ಯಕ್ರಮ ನಡೆದು 6 ವರ್ಷವಾಯಿತು. ಇಲ್ಲಿಯವರೆಗೂ ಮುಗಿದಿಲ್ಲ, ಆದಕಾರಣ, ಅರ್ಧ ಆಗಿರುವಂಥ ಕೆಲಸವನ್ನು ಪೂರ್ಣ ಮಾಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕುಡಿಯುವ ನೀರಿನ ಅಭಾವದ ಬಗ್ಗೆ ತಮ್ಮ ಸಂಕಟವನ್ನು ವ್ಯಕ್ತಪಡಿಸಿದ್ದಾರೆ. ಈ ಒಂದು ಅಭಾವ ಪರಿಸ್ಥಿತಿಯಲ್ಲಿ ಜನಗಳು ಅನುಭವಿಸತಕ್ಕಂಥ ಏನು ಕಷ್ಟಪರಿಸ್ಥಿತಿ ಇದೆ, ಅದನ್ನೂ

ಕೂಡಾ ಅವರದ್ದೇ ಆದ ಭಾಷೆಯಲ್ಲಿ ವಿವರಿಸಿದ್ದಾರೆ. ಅವರ ಅಭಿಪ್ರಾಯದ ವಿರುದ್ಧ ನನ್ನದೇನೂ ಇಲ್ಲ, ಅವರ ಅಭಿಪ್ರಾಯಕ್ಕೆ ನನ್ನ ಅಭಿಪ್ರಾಯಗಳನ್ನೂ ಒಂದುಗೂಡಿಸಿ, ಈ ಒಂದು ಕಠಿಣ ಪರಿಸ್ಥಿತಿಯನ್ನು ಯಾವ ರೀತಿ ನಿವಾರಿಸಬೇಕು, ಯಾವರೀತಿ ಹಣವನ್ನು ಒದಗಿಸಬೇಕೆನ್ನುವುದರ ಬಗ್ಗೆ ನಾವು ಆಲೋಚನೆ ಮಾಡತಕ್ಕಂಥಾದ್ದು ಅತೀ ಅವಶ್ಯಕ. ನಾನು ಈ ಬಗ್ಗೆ ಈ ಸದನ ಪ್ರಾರಂಭವಾಗುವಾಗ ತಾರೀಕು 13.3.91ರಲ್ಲಿ ಸುದೀರ್ಘವಾಗಿ ಈ ನೀರಿನ ಸಮಸ್ಯೆ ಬಗ್ಗೆ ಒಂದು ಹೇಳಿಕೆಯನ್ನು ಇಲ್ಲಿ ಇಟ್ಟಿದ್ದೆ. ಅದರ ಬಗ್ಗೆ ಮಾನ್ಯ ಸದಸ್ಯರು ಆಳವಾಗಿ ಯೋಚನೆ ಮಾಡಬೇಕು. ಆದರೆ ಇವತ್ತಿನ ದಿವಸ ಅರ್ಧಗಂಟೆ ಕಾಲದ ಚರ್ಚೆಗೆ ಇಟ್ಟಿರತಕ್ಕಂಥಾದ್ದು ಬಹಳ ಅನುಕೂಲವಾಗಿದೆ. ಈಗ ಇದನ್ನು ನಿರ್ವಹಣೆ ಮಾಡತಕ್ಕಂಥ ಜವಾಬ್ದಾರಿಯನ್ನು ಮಂಡಲ ಪಂಚಾಯತಿಗಳಿಗೆ ಕೊಟ್ಟಿದ್ದೇವೆ. ಅವರ ಕೈಯಲ್ಲಿ ಆಗುವುದಿಲ್ಲ ಎನ್ನತಕ್ಕಂಥ ವಾದವನ್ನು ನಾವು ಕೇಳುತ್ತಿದ್ದೇವೆ. ನಮ್ಮ ಅನುಭವದಲ್ಲಿ ಕೂಡಾ ಇದು ಅವರ ಕೈಯಲ್ಲಿ ಆಗುವುದಿಲ್ಲ ಎಂಬುದನ್ನು ನಾವು ಕೇಳುತ್ತಿದ್ದೇವೆ. ಜಿಲ್ಲಾ ಪರಿಷತ್‌ನವರು ಇದನ್ನು ನಿರ್ವಹಣೆ ಮಾಡಬೇಕೆನ್ನತಕ್ಕಂಥ ಒತ್ತಾಯವನ್ನು ನಾವು ತಂದಿದ್ದೆವು. ಮಾನ್ಯ ಸದಸ್ಯರು ಮಾತನಾಡುವಾಗ ಹೇಳಿದರು, ಜಿಲ್ಲಾ ಪರಿಷತ್‌ನವರೂ ಕೂಡಾ ಮಾಡುತ್ತಿಲ್ಲ, ಮಂಡಲ್ ಪಂಚಾಯತಿಯವರು ಏನು ಜವಾಬ್ದಾರಿ ನಿರ್ವಹಣೆ ಮಾಡಬೇಕಾಗಿತ್ತು ಅದನ್ನೂ ಕೂಡಾ ಅವರು ಮಾಡುತ್ತಿಲ್ಲ. ಆದುದರಿಂದ ಸರಕಾರದವರು ಈ ಜವಾಬ್ದಾರಿಯನ್ನು ವಹಿಸಿಕೊಂಡು ಈ ಕೆಲಸ ಮಾಡಬೇಕೆಂದು ಮಾನ್ಯ ಸದಸ್ಯರು ಒತ್ತಾಯ ಮಾಡುತ್ತಿದ್ದಾರೆ. ಇದು ಒಂದು ದೊಡ್ಡ ಸಲಹೆ. ಜಿಲ್ಲಾಪರಿಷತ್‌ಗಳು ಮತ್ತು ಮಂಡಲ್ ಪಂಚಾಯತ್‌ಗಳು ನಿರ್ವಹಿಸತಕ್ಕಂಥ ಜವಾಬ್ದಾರಿಯ ಬಗ್ಗೆ ನಾನು ಜಾಸ್ತಿಯಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಇಲ್ಲಿ ನಾನು ಕೇಳಿರತಕ್ಕಂಥ ಮಾತುಗಳು ಏನಿದ್ದಾವೆ, ಅದರಿಂದ ನಾನು ಕೂಡಾ ಬಹಳ ತೀವ್ರತೆಗೆ ಒಳಗಾಗಿದ್ದೇನೆ. ಒಂದು ಸರಿಯಾಗಿ ನೀರು ಒದಗಿಸತಕ್ಕಂಥಾದ್ದು, ಇನ್ನೊಂದು ಅಭಾವ ಇರತಕ್ಕಂಥಾದ್ದು; ಮತ್ತೆ ಇರತಕ್ಕಂಥ ಕೊಳವೆ ಬಾವಿಗಳನ್ನು ರಿಪೇರಿ ಆಗುತ್ತಿಲ್ಲ ಎನ್ನತಕ್ಕಂತಾದ್ದು, ಇನ್ನೊಂದು ಈಗ ಸರಕಾರದ ಒಂದು ಏಜೆನ್ಸಿ ಏನು ಇದೆ, ಸರಕಾರದ ಮುಖಾಂತರ ಇದನ್ನು ಏನು ನಿರ್ವಹಣೆ ಮಾಡುತ್ತಿದೆ, ಅದನ್ನು ಸರಿಯಾಗಿ ಮಾಡುತ್ತಿಲ್ಲ ಎನ್ನತಕ್ಕಂಥಾದ್ದು ಒಂದು ವಾದ. ಎರಡನೆಯದು ಪ್ರೈವೇಟ್ ಏಜೆನ್ಸಿ ಏನಿವೆ, ಅಂತಹವರ ಬಗ್ಗೆ ಗಮನ ಕೊಟ್ಟು ಅವರಿಂದಲೂ ಈ ಒಂದು ಕಠಿಣ ಪರಿಸ್ಥಿತಿಯನ್ನು ನಿಭಾಯಿಸಬೇಕೆಂಬ ವಾದವನ್ನು ನಾನು ಕೇಳಿದ್ದೇನೆ. ಇವೆಲ್ಲಾ ಸಲಹೆಗಳು ಅವರು ಮಾಡಿರತಕ್ಕಂಥಾದ್ದು.

ನಾನು ಒಂದು ವಿಚಾರ ಹೇಳುತ್ತೇನೆ. ನಾನು ಇದರ ಬಗ್ಗೆ ತೀವ್ರವಾಗಿ ಗಮನ ಕೊಟ್ಟಿಲ್ಲ ಎಂದು ಅಲ್ಲ, ಆದರೆ ಇಲ್ಲಿ ಕೆಲಸ ಮಾಡಕತಕ್ಕಂಥ ಜನರೇ ಏನಿದ್ದಾರೆ, ಡಿಸ್ಟ್ರಿಕ್ಟ್ ಹಂತದಲ್ಲಿ ಮತ್ತೆ ಸ್ಟೇಟ್ ಹಂತದಲ್ಲಿ, ಅವರು ನಮ್ಮ ಕೂಗನ್ನು ಕೇಳಿ, ಈ ಒಂದು ಕಠಿಣ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕೆ ಪ್ರಯತ್ನ ಮಾಡತಕ್ಕದ್ದು ಅವರ ಕರ್ತವ್ಯ. ಸರ್ಕಾರದವರು ಸಾವಿರ ಹೇಳಬಹುದು. ಆದರೆ ಮಾಡತಕ್ಕದ್ದು ಅವರ ಕರ್ತವ್ಯ. ಅವರು ಮಾಡದೇ ಹೋದರೆ ಏನು ಮಾಡಬೇಕೆಂದು ಪ್ರಶ್ನೆ. ಈ ಸದನಕ್ಕೆ ನಾನು ಆಶ್ವಾಸನೆ ಕೊಡುತ್ತಿದ್ದೇನೆ. ಈಗ ನಮ್ಮಲ್ಲಿ ಸುಮಾರು 281 ರಿಪೇರಿ ಮಾಡತಕ್ಕಂಥ ವ್ಯಾನ್‌ಗಳು ಇವೆ. ಅಂದರೆ ಒಂದು ಜಿಲ್ಲೆಗೆ ಸುಮಾರು 24 ವ್ಯಾನ್‌ಗಳು ಆದವು. ಒಂದೊಂದು ತಾಲ್ಲೂಕಿಗೆ 2-3 ನಾವು ಇಟ್ಟಿದ್ದೇವೆ. ಈಗ ಇಷ್ಟು ರಿಪೇರಿ ಮಾಡತಕ್ಕಂಥ ವ್ಯಾನ್‌ಗಳನ್ನು ಇಟ್ಟು, ನಾವು ಪುನಃ ಕೂಗನ್ನು ಕೇಳುತ್ತಿದ್ದರೆ, ಅಧಿಕಾರಿಗಳು ಸರಿಯಾಗಿ ಸಮಂಜಸವಾಗಿ ಕೆಲಸ ಮಾಡುತ್ತಿದ್ದಾರೆಯೇ ಇಲ್ಲವೇ ಎಂಬ ಅನುಮಾನ ನಮಗೆ ಬರುತ್ತದೆ. ಆದುದರಿಂದ ಯಾರು ಜವಾಬ್ದಾರರಿದ್ದಾರೆ, ಎಕ್ಸಿಕ್ಯುಟೀವ್ ಎಂಜಿನಿಯರ್ಸ್ ಇದ್ದಾರೆ ಹಲವಾರೂ ಅಸಿಸ್ಟೆಂಟ್ ಎಕ್ಸಿಕ್ಯುಟೀವ್

ಎಂಜಿನಿಯರ್ಸ್ ಇದ್ದಾರೆ, ಈ ಜನ ಸರಿಯಾಗಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸುತ್ತಿಲ್ಲ ಎಂಬ ಭಾವನೆ ಬರುತ್ತದೆ.

ಈ ಸದನದಲ್ಲಿ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ; ಈ ರಿಪೇರಿ ಕೆಲಸ ಮಾಡತಕ್ಕಂಥ ಒಂದು ಕಾರ್ಯದಲ್ಲಿ ನ್ಯೂನತೆ ಎಲ್ಲಿಂದ ನಾವು ಕಾಣುತ್ತಿದ್ದೇವೆ; ಅಂತಹ ಒಂದು ಜಾಗದಲ್ಲಿ ನಾವು ತೀವ್ರತೆಯಿಂದ ನೋಡಿ ಅಂತಹವರ ಬಗ್ಗೆ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಆಶ್ವಾಸನೆ ಕೊಡುತ್ತೇನೆ. ನಾವು ಅಧಿಕಾರಿಗಳಿಂದಲೇ ಈ ಕೆಲಸ ಮಾಡಿಸಬೇಕಾಗುತ್ತದೆ.

(ಗೊಂದಲ)

ಉಪಾಧ್ಯಕ್ಷರು : ಮೊದಲು ಅವರು ಉತ್ತರ ಮುಗಿಸಲಿ.

ಶ್ರೀ ಬಿ. ಬಸವಲಿಂಗಪ್ಪ : ಒಂದು ನಿಮಿಷ; ನಾನು ಮೊದಲು ಮಾತನಾಡುತ್ತೇನೆ. ಮಾನ್ಯ ಸದಸ್ಯರು ಸ್ವಲ್ಪ ಕೇಳಬೇಕು. ನಾನು ಹೇಳುವುದನ್ನು ತಾವು ಕೇಳಿದರೆ ನಾನು ತಮಗೆ ಋಣಿಯಾಗಿರುತ್ತೇನೆ. ನನಗೆ ತಾವು ಮಾರ್ಗದರ್ಶನ ಮಾಡಬೇಕು. ನಿಮಗೆ ಇರುವ ಅನುಭವ ನನಗೆ ಹೇಳಬೇಕು. ನಾವು ಯಾವ ರೀತಿಯಲ್ಲಿ ಕಾರ್ಯನಿರ್ವಹಣೆ ಮಾಡಬೇಕೆನ್ನುವ ಬಗ್ಗೆ ಸಲಹೆಗಳನ್ನು ಕೊಟ್ಟರೆ ನಾನು ಆ ರೀತಿ ಮಾಡುತ್ತೇನೆ ಎನ್ನುವ ಆಶ್ವಾಸನೆ ಕೊಡುತ್ತೇನೆ. ನಮ್ಮಲ್ಲಿ ಇರತಕ್ಕಂಥಾದ್ದು ರಿಪೇರಿಗಾಗಿ 302 ರಿಗ್ಸ್ ಇವೆ. ಈಗ ನಾವು 269.86 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ನಮ್ಮ ಹತ್ತಿರ ಇನ್ನೂ ಇರುವ ಹಣ 33.1 ಲಕ್ಷ ರೂಪಾಯಿಗಳಿದೆ. ಈ ಹಣ ನಾವು ಇನ್ನೂ ಖರ್ಚು ಮಾಡಬೇಕಾಗಿದೆ. ಅದನ್ನು ಈ ತಿಂಗಳ ಒಳಗಡೆ ಖರ್ಚು ಮಾಡಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ನಾನು ಒಂದು ಮಾತನ್ನು ಹೇಳುತ್ತೇನೆ; ಇವತ್ತಿನ ದಿವಸ ಯಾರಾದರು ಅಧಿಕಾರಿಗಳು ಈ ಪಿ.ಎಚ್.ಡಿ. ಡಿಪಾರ್ಟ್ ಮೆಂಟಿನಲ್ಲಿ ಇರತಕ್ಕಂಥ ಇಂಜಿನೀಯರ್ಸ್ ಮತ್ತು ಇತರರು ತಮ್ಮ ಕೆಲಸವನ್ನು ನಿರ್ವಹಣೆ ಮಾಡುವಲ್ಲಿ ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಾರೋ ನ್ಯೂನತೆ ತರುತ್ತಾರೋ ಅವರ ಹೆಸರು ಕೊಟ್ಟರೆ ಅಂತಹ ಅಧಿಕಾರಿಗಳನ್ನು ಸರ್ಕಾರ ಸಹಿಸುವುದಿಲ್ಲವೆನ್ನುವ ಆಶ್ವಾಸನೆಯನ್ನು ನಾನು ಕೊಡುತ್ತೇನೆ. ಇದುವರೆವಿಗೂ ನಿಮಗೆ ಇದು ಗೊತ್ತಿಲ್ಲವೇ ಎನ್ನುವ ಪ್ರಶ್ನೆ ಕೇಳಬಹುದು. ನನಗೆ ಎಷ್ಟೇ ಗೊತ್ತಿದ್ದರೂ ಅಷ್ಟೇ. ನಾನು ಎಷ್ಟು ಸಲ ಸ್ಥಳ ಪರಿಶೀಲನೆ ಮಾಡಿದ್ದೇನೆ, ಯಾವ ಒಂದು ಕ್ಷೇತ್ರಕ್ಕೆ ಹೋಗಿದ್ದೇನೆ ಮತ್ತೆ ಅಧಿಕಾರಿಗಳು ನಮಗೇನು ಹೇಳಿದ್ದಾರೆ ಅದರ ಒಂದು ಆಧಾರದ ಮೇಲೆ ನಾವು ಕೆಲಸ ಮಾಡಿರಬಹುದು. ಆದರೆ ನಾನು ತಮ್ಮಲ್ಲಿ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ, ತಾವ್ಯಾರು ಹಿಂದೆ ಬೀಳಬಾರದು. ತಾವು ನೇರವಾಗಿ ತಮ್ಮ ತಮ್ಮ ತಾಲ್ಲೂಕುಗಳಲ್ಲಿ ಈ ಒಂದು ವ್ಯವಸ್ಥೆ ಕುಸಿದು ಬಿದ್ದಾಗ ನನ್ನ ಗಮನಕ್ಕೆ ನೇರವಾಗಿ ತರಬೇಕೆಂದು ಕೇಳಿಕೊಳ್ಳುತ್ತೇನೆ. ನೇರವಾಗಿ ನನ್ನ ಗಮನಕ್ಕೆ ತನ್ನಿ. ಮುಂದಿನ ಕೆಲಸ ನಾನು ಮಾಡುತ್ತೇನೆ ಎನ್ನುವ ಆಶ್ವಾಸನೆ ಕೊಡುತ್ತೇನೆ. ಒಂದು ಸಲಹೆ ಶ್ರೀಮಾನ್ ಬನ್ನಿಕೋಡ್‌ರವರು ಕೊಟ್ಟರು. ಪ್ರತಿಯೊಂದು ತಾಲ್ಲೂಕಿನಲ್ಲಿ ಎಂ.ಎಲ್.ಎ.ಗಳು ಇರುತ್ತಾರೆ; ಅವರು ಪಂಚಾಯತಿ ಸಮಿತಿಗಳ ಅಧ್ಯಕ್ಷರಾಗಿರುತ್ತಾರೆ. ಅವರಿಗೆ ಈ ಜವಾಬ್ದಾರಿ ಕೊಡಿ ಎಂದು. ಇಂತಹ ಪರಿಸ್ಥಿತಿಯಲ್ಲಿ ಅವರು ಪಂಚಾಯತಿ ಸಮಿತಿಗಳನ್ನು ಕರೆದು ಕೂಲಂಕಷವಾಗಿ ವಿಮರ್ಶೆ ಮಾಡತಕ್ಕಂಥ ಒಂದು ಅವಕಾಶ ಇರುತ್ತದೆ; ಈಗ ಎಂ.ಎಲ್.ಎ.ಗಳು ಇದ್ದಾರೆ, ಅವರ ಅಧ್ಯಕ್ಷತೆಯಲ್ಲಿ ತಹಶೀಲ್ದಾರರು ಬಿಡಿಓ ಗಳು ಇರುತ್ತಾರೆ. ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನೀಯರ್ಸ್ ಇರುತ್ತಾರೆ. ಮತ್ತು ಅಲ್ಲಿರತಕ್ಕ ಎಂ.ಪಿ.ಗಳು ಇರುತ್ತಾರೆ. ಎಂ.ಎಲ್.ಎ.ಗಳು ಎಂ.ಎಲ್.ಸಿ.ಗಳು ಯಾರ್ಯಾರು ಇರುತ್ತಾರೋ, ಅವರೆಲ್ಲಾ ಈ ಒಂದು ಎರಡು ಮೂರು ತಿಂಗಳ ಮಟ್ಟಿಗೆ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿದರೆ ಆ ಹಳ್ಳಿಯಲ್ಲಿ ಎಲ್ಲೆಲ್ಲಿ ಜರೂರಾಗಿ ಅವಶ್ಯಕತೆ ಇದ್ದರೆ

ಬೋರ್‌ವೆಲ್‌ಗಳನ್ನು ಕೊರೆಸುವುದಕ್ಕೆ, ಅವರೇ ತೀರ್ಮಾನ ತೆಗೆದುಕೊಂಡು ಕೊರೆಸುವ ಜವಾಬ್ದಾರಿ ಕೊಡತಕ್ಕಂಥಾದ್ದು ಸರಿ ಎಂದು ನಾನು ಸಹ ಯೋಚನೆ ಮಾಡುತ್ತಿದ್ದೇನೆ. ಶ್ರೀ ಬನ್ನಿಕೋಡ್‌ರವರು ಸಹ ಅದೇ ರೀತಿ ಸಲಹೆ ಮಾಡಿದರು. ಇಲ್ಲಿರತಕ್ಕಂಥ ಎಲ್ಲಾ ಮಾನ್ಯ ಸದಸ್ಯರು ಆ ಸಲಹೆಯನ್ನು ಒಪ್ಪಿದರೆ ನಾನು ಒಂದು ಹುಕುಂ ಹೊರಡಿಸುವುದಕ್ಕೆ ಯಾವೊತ್ತೂ ರೆಡಿಯಾಗಿದ್ದೇನೆ. ಮಾನ್ಯ ಭೈರೇಗೌಡರು ಮತ್ತು ನಂಜಪ್ಪನವರು ಮತ್ತು ಶ್ರೀ ಬನ್ನಿಕೋಡ್‌ರವರು ಮತ್ತು ವಾಟಾಳ್ ನಾಗರಾಜ್‌ರವರು ಬಹಳ ತೀವ್ರತೆಯಿಂದ ಹೇಳಿದ್ದಾರೆ. ಮಾನ್ಯ ಸದಸ್ಯರು ಕುಡಿಯುವ ನೀರಿನ ಅಭಾವದ ಬಗ್ಗೆ ಹೇಳಿದ್ದಾರೆ. ಆದರೆ ನಾನು ಒಂದು ಮಾತನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಅಬ್ದುಲ್ ನಜೀರಸಾಬ್‌ರವರು ಈ ಗ್ರಾಮಾಭಿವೃದ್ಧಿ ಮಂತ್ರಿಗಳಾಗಿದ್ದಾಗ ಒಂದು ದೊಡ್ಡ ಕ್ರಾಂತಿಯನ್ನೇ ಮಾಡಿದರು. ಪ್ರತಿಯೊಂದು ಹಳ್ಳಿಯಲ್ಲಿಯೂ ಕೂಡ ಇಂತಹ ಒಂದು ವ್ಯವಸ್ಥೆ ಮಾಡಬೇಕೆಂದು ಪ್ರಯತ್ನ ಮಾಡಿ ಒಂದು ಲಕ್ಷ 20 ಸಾವಿರ ಬೋರ್‌ವೆಲ್‌ಗಳನ್ನು ಆ ಕಾಲಕ್ಕೆ ತೋಡಿಸಲು ಪ್ರಯತ್ನ ಮಾಡಿದರು. ಸುಮಾರು 52 ಸಾವಿರ ಗ್ರಾಮಗಳಲ್ಲಿ ಈ ವ್ಯವಸ್ಥೆ ಮಾಡಬೇಕೆಂದು ಮಾಡಿದರು. ಆ ಕಾಲದಲ್ಲಿ 70 ಅಡಿ ನೂರು ಅಡಿ 110 ಅಡಿಗಳಿಗೆ ನೀರು ಬರುತ್ತಿತ್ತು. ಆದರೆ ಈಗ ಸತತವಾಗಿ ಬರಗಾಲ ಬಂದು ಅಭಾವ ಪರಿಸ್ಥಿತಿ ಬಂದಿದ್ದರಿಂದ ಪರಿಸ್ಥಿತಿ ಏನಾಗಿದೆ ಎಂದರೆ ನಾವು 110 ಅಡಿಗಳು ಅಲ್ಲ 120, 150 ಅಡಿಗಳು 300 ಅಡಿಗಳು ಇವತ್ತು ಭೂಮಿಯನ್ನು ನಾವು ಕೊರೆಯುವಂತಹ ಪರಿಸ್ಥಿತಿ ಬಂದಿದೆ. ಈ ರೀತಿ ಮಾಡಿದಾಗ ಒಂದು ಬಾವಿಯ ನೀರು ಮತ್ತೊಂದು ಬಾವಿಗೆ ಹೋಗುವುದು ಸಹ ಇರುತ್ತದೆ.

ಇಂಥಾ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ನಿಮ್ಮ ಸಹಕಾರ ನಮಗೆ ಬೇಕು. ನೀವು ಬಯ್ದರೂ ನಾವು ಕೇಳುತ್ತೇವೆ. ಏಕೆಂದರೆ ನಾವು ಅಧಿಕಾರ ಮಾಡುತ್ತಿದ್ದೇವೆ. ನೀವು ಬಯ್ಯುವುದನ್ನು ಕೇಳತಕ್ಕಂಥ ಪರಿಸ್ಥಿತಿಯಲ್ಲಿ ನಾವಿದ್ದೇವೆ. ನೀವು ಟೀಕೆ ಮಾಡಿ ನಾನು ನಮ್ರವಾಗಿ ಹೇಳುವುದೇನೆಂದರೆ,

ಶ್ರೀ ವಾಟಾಳ್ ನಾಗರಾಜ್ : ಏನು ಇವತ್ತು ಇಷ್ಟು ಸುಮಧುರವಾಗಿ ಮಾತನಾಡುತ್ತಿದ್ದೀರಿ?

ಶ್ರೀ ಹೆಚ್. ಏಕಾಂತಯ್ಯ : ನಿಮ್ಮ ಭಾಷಣದ ಧಾಟಿ ಬೇರೆ ತರಹ ಇದೆಯೆಂದು ಅವರು ಹೇಳುತ್ತಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ : ನೀವು ಈ ತರಹ ಹೇಳಿದರೆ ಆಗುವುದಿಲ್ಲ. ಕೆಟ್ಟಿರುವ ಬೋರ್‌ವೆಲ್‌ಗಳನ್ನು ರಿಪೇರಿ ಮಾಡುವುದಕ್ಕೆ ದುಡ್ಡು ಕೊಡುತ್ತೀರಾ? ಪ್ರೈವೈಟ್ ರಿಗ್‌ನವರಿಗೆ ಕಾಂಟ್ರಾಕ್ಟ್ ಕೊಟ್ಟು ಬೇಗ ಬೇಗ ಬೋರ್‌ವೆಲ್‌ಗಳನ್ನು ಹಾಕಿಸಿ ಜನರುಗಳಿಗೆ ನೀರು ಕೊಡುತ್ತೀರಾ? ಇಷ್ಟು ಹೇಳಿ; ಕ್ರಮ ತೆಗೆದುಕೊಳ್ಳುವುದು ಬೇರೆ.

ಶ್ರೀ ಬಿ. ಬಸವಲಿಂಗಪ್ಪ : ಶ್ರೀಮಾನ್ ಜಾಲಪ್ಪನವರೇ ನನ್ನ ಮನಸ್ಸು ನಿಮಗೆ ಗೊತ್ತಿಲ್ಲವಾ?

ಶ್ರೀ ಆರ್.ಎಲ್. ಜಾಲಪ್ಪ : ನಿಮ್ಮ ಮನಸ್ಸು ಗೊತ್ತಿದೆ. ಆದರೆ, ನೀರು ಕೊಡಿಸುವ ತಾಕತ್ತು ನಿಮಗೆ ಇಲ್ಲವಲ್ಲ;

ಶ್ರೀ ಬಿ. ಬಸವಲಿಂಗಪ್ಪ : ನಾವು ಅಲ್ಲಿಗೆ ಹೋಗಿ ನೋಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ನೀವು ಹೋಗುವುದು ಬೇಡ. ಏನೂ ಬೇಡ. ಬೋರ್‌ವೆಲ್ ರಿಪೇರಿ ಮಾಡಿಸುವುದಕ್ಕೆ ದುಡ್ಡು ಕೊಡಿ.

ಶ್ರೀ ಬಿ. ಬಸವಲಿಂಗಪ್ಪ : ನಾನು ಅಲ್ಲಿಗೇ ಬರುತ್ತಿದ್ದೇನೆ. ಈ ಬೋರ್‌ವೆಲ್‌ಗಳನ್ನು ಜಿಲ್ಲಾಪರಿಷತ್ತಿನ ಮೂಲಕ ಮಾಡಿಸಬೇಕೆಂದು ವ್ಯವಸ್ಥೆ ಮಾಡಿದ್ದೆವು. ಈಗ ಮಾನ್ಯ ಸದಸ್ಯರು ಸರ್ಕಾರದಿಂದ ನೇರವಾಗಿ ಮಾಡಿಸಿ ಎಂದು ಹೇಳಿದ್ದಾರೆ. ಇದರ ಬಗ್ಗೆ ಹೇಳುವುದಾದರೆ ನಾವೂ ಮಾಡಿಸುತ್ತೇವೆ, ಜಿಲ್ಲಾ ಪರಿಷತ್ತಿನವರೂ ಮಾಡಿಸಲಿ. ಆಮೇಲೆ ಪ್ರೈವೇಟ್ ರಿಗ್‌ನವರಿಗೆ ಈ ಕೆಲಸ ಕೊಡಿ ಎಂದು ಹೇಳಿದ್ದೀರಿ; ನಿಮ್ಮ ಸಲಹೆಯನ್ನು ಮನಸ್ಸಿನಲ್ಲಿಟ್ಟುಕೊಂಡು ತೀರ್ಮಾನ ತೆಗೆದುಕೊಳ್ಳುತ್ತೇವೆ. ಈಗ ಡೆಪ್ಯುಟಿ ಕಮೀಷನರ್‌ರವರಿಗೂ ಅಧಿಕಾರ ಕೊಟ್ಟಿದ್ದೇವೆ. ಅವರೂ ಕೆಲಸ ಮಾಡಿಸುತ್ತಾರೆ. ಜಿಲ್ಲಾಪರಿಷತ್ತಿನವರೂ ಮಾಡಿಸಲಿ. ಇದಕ್ಕಾಗಿ ಡೆಪ್ಯುಟಿ ಕಮೀಷನರ್‌ರವರಿಗೆ 15.43 ಕೋಟಿ ಒಂದು ಸಾರಿ, ಇನ್ನೊಂದು ಸಾರಿ 6.52 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅವರೂ ಕೆಲಸ ಮಾಡುತ್ತಿದ್ದಾರೆ. ಪ್ರೈವೇಟ್ ರಿಗ್‌ನವರಿಂದ ಬೋರ್‌ವೆಲ್‌ಗಳನ್ನು ಬೇಗ ಕೊರೆಸುವುದಕ್ಕೆ ಅವರಿಗೆ ಹೇಳುತ್ತೇವೆ. ಇದರ ಜೊತೆಗೆ ನಮ್ಮ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ರಿಗ್‌ಗಳು ಇವೆ.

ಶ್ರೀ ಆರ್.ಎಲ್. ಜಾಲಪ್ಪ: ಆಗ್ರೋದವರು ಬೆಳಿಗ್ಗೆ 10 ಗಂಟೆಯಿಂದ 5 ಗಂಟೆಯವರೆಗೆ ಮಾತ್ರ ಕೆಲಸ ಮಾಡುತ್ತಾರೆ. ಅದೂ ಅಲ್ಲದೆ ಶೇಕಡಾ 75ರಷ್ಟು ಅವು ರಿಪೇರಿ ಒಳಗೆ ಇರುತ್ತದೆ. ಅಂತಹವರನ್ನು ನಂಬಿಕೊಂಡು ನಮಗೆ ನೀರು ಕೊಡುತ್ತೀರಾ?

(ಅನೇಕ ಜನ ಮಾನ್ಯ ಸದಸ್ಯರುಗಳು ಮಾತನಾಡುತ್ತಿದ್ದು ಗೊಂದಲ ವಾತಾವರಣ ಉಂಟಾಗಿತ್ತು)

ಉಪಾಧ್ಯಕ್ಷರು: ಅವರು ಉತ್ತರ ಮುಗಿಸಲಿ.

ಶ್ರೀ ಬಿ. ಬಸವಲಿಂಗಪ್ಪ: ಆಮೇಲೆ, ಮಾನ್ಯ ಅಧ್ಯಕ್ಷರೇ, ಇನ್ನು ಎರಡೆ ನಿಮಿಷದಲ್ಲಿ ಮುಗಿಸಿಬಿಡುತ್ತೇನೆ. ಈ ಒಂದು ವಿಚಾರ ಮಾನ್ಯ ಸದಸ್ಯರುಗಳಿಗೆ ಹೇಳುತ್ತೇನೆ. ಕೆಟ್ಟಿರುವ ಬೋರ್‌ವೆಲ್‌ಗಳನ್ನು ರಿಪೇರಿ ಮಾಡಿಸುವುದು ಹಾಗೂ ಎಲ್ಲೆಲ್ಲಿ ಬೋರ್‌ವೆಲ್‌ಗಳು ಇಲ್ಲವೋ ಅಂಥಾ ಕಡೆ ಬೋರ್‌ವೆಲ್ ಹಾಕಿಸಬೇಕೆಂದು ತಾವು ಹೇಳಿದ್ದೀರಿ. ಇದಕ್ಕಾಗಿ ಒಂದು ತಾಲ್ಲೂಕು ಮಟ್ಟದಲ್ಲಿ ಸಮಿತಿಯನ್ನು ಇನ್ನು 2 ತಿಂಗಳಿಗಾಗಿ ನಾಳೆಯೋ ನಾಡಿದ್ದೋ ಮಾಡುತ್ತೇವೆ.

ಶ್ರೀ ಆರ್. ಜಾಲಪ್ಪ : ಇವರು ಬಹಳ ಬುದ್ಧಿವಂತರು. ಸಮಿತಿ ಮಾಡಿ ಅದರಲ್ಲಿ ನಮ್ಮನ್ನು ಸದಸ್ಯರುಗಳನ್ನಾಗಿ ಹಾಕುತ್ತಾರೆ. ನಾವು ಜನಗಳಿಂದ ಬಯ್ಸಿಕೊಳ್ಳಬೇಕು. ಹಣ ಇಲ್ಲದೆ ಕೆಲಸ ಹೇಗೆ ಮಾಡಬೇಕು?

ಶ್ರೀ ಎಸ್.ಹೆಚ್. ಕೌಜಲಗಿ : ನಮಗೆ ದುಡ್ಡು ಕೊಡಿ ಸಾಕು. ಸಮಿತಿ ಏಕೆ?

ಶ್ರೀ ಆರ್.ಎಲ್. ಜಾಲಪ್ಪ: ಇಲ್ಲಿ ನಾವು ನಿಮಗೆ ರಾಜೀನಾಮೆ ಕೇಳುತ್ತೇವೆ. ನೀವು ಸಮಿತಿ ಮಾಡಿದರೆ ಜನರು ನಮ್ಮ ರಾಜೀನಾಮೆ ಕೇಳುತ್ತಾರೆ ಅಷ್ಟೇ ಆಗುವುದು.

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ: ಮಾನ್ಯ ಜಾಲಪ್ಪನವರೇ, ನಾವು ಆಮೇಲೆ ಮಾತನಾಡೋಣ. ನಾನು ಮುಗಿಸುತ್ತಿದ್ದೇನೆ. ನೀವು ಏನು ಕೇಳುತ್ತಿದ್ದೀರಿ ಅದಕ್ಕೆ ನಾನು ಹೇಳುತ್ತಿದ್ದೇನೆ. ನಾನು ಅಲ್ಲಿಗೆ ಬರುವುದರಲ್ಲಿ ಎಷ್ಟು ಅವಸರ ನಿಮಗೆ. ಅದಕ್ಕೋಸ್ಕರ ತಾವು ಕೇಳುತ್ತೀರಿ ಎಂದು ಈ ಸರ್ಕಾರ ಸಹ ತೀವ್ರತೆಯಿಂದ ನೋಡಿದೆ. ಈ ಸಪ್ಲಿಮೆಂಟರಿ ಬಜೆಟ್‌ನಲ್ಲಿ ತಾವು ಓದಿರಬೇಕು. ಅದರಲ್ಲಿ ಆರು

ಕೋಟಿ ಎಪ್ಪತ್ತೈದು ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಇದನ್ನು ತಕ್ಷಣ ಖರ್ಚು ಮಾಡಬೇಕು ಎಂದು ಹೇಳಿದ್ದೇವೆ. ಈ ಸಮಿತಿ ಮುಖಾಂತರ ನಿಮ್ಮ ಅವಶ್ಯಕತೆಗಳು ಏನು ಇದ್ದಾವಲ್ಲ ಆ ಅವಶ್ಯಕತೆಗಳಿಗೆ ಅನುಗುಣವಾಗಿ ಈ ಹಣವನ್ನು ಒದಗಿಸಬೇಕು. ಈ ನೀರಿನ ಅಭಾವವನ್ನು ಏನೇ ಆಗಲಿ ಇದನ್ನು ನಾವು ನೀಗಿಸಬೇಕು. ನಾವು ಜನರನ್ನು ಸಂತುಷ್ಟರಾಗಿ ಮಾಡಬೇಕು ಎನ್ನತಕ್ಕ ನಿರ್ಧಾರ ಸರ್ಕಾರದ್ದು. ತಾವು ಯಾರೂ ಚಿಂತೆ ಏನೂ ಮಾಡಬೇಕಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್: ಚಿಂತೇನೂ ಮಾಡಬೇಕಾಗಿಲ್ಲ, ಊರಿಗೂ ಹೋಗಬೇಕಾಗಿಲ್ಲ..

ಶ್ರೀ ಬಿ. ಬಸವಲಿಂಗಪ್ಪ: ನಾನು ಮುಗಿಸುತ್ತೇನೆ ಸ್ವಲ್ಪ ತಾಳಿ. ಈಗ ಹಲವಾರು ಯೋಜನೆಗಳು ಇದ್ದಾವೆ. ಗುಂಪು ಗ್ರಾಮಗಳಿಗೋಸ್ಕರ ನೀರು ಕೊಡತಕ್ಕಂಥದ್ದು, ಶಾಶ್ವತವಾಗಿ ನೀರು ಸಿಗತಕ್ಕಂಥಹ ಒಂದು ಉಗಮದಿಂದ ನಾವು ಎಲ್ಲಾ ಹಳ್ಳಿಗಳಿಗೆ ನೀರನ್ನು ಒದಗಿಸತಕ್ಕ ಯೋಜನೆಗಳನ್ನು ನಾವು ಇಟ್ಟುಕೊಂಡಿದ್ದೇವೆ. ಆದರೆ ಮಳೆ ಬರಬೇಕಲ್ಲ. ನಮಗೆ ಎಲ್ಲಾ ಕಷ್ಟ ಏನು ಇದೆ ಅಂದರೆ ಮಳೆ. ಮಳೆ ಬಂದರೆ ನಮಗೆ ಅಭಾವ ಬರುತ್ತಾ ಇರಲಿಲ್ಲ. ಆದರೆ ಮಳೆ ಬರುತ್ತಾ ಇಲ್ಲ. ಆದ್ದರಿಂದ ನೀರು ಕೊಡುವುದಕ್ಕೆ ಕಷ್ಟವಾಗಿದೆ ಶ್ರೀಮಾನ್ ಬಾಬಾಗೌಡರು ಹೇಳಿದ ಹಾಗೆ ದಿನೇದಿನೇ ನೀರಿನ ಮಟ್ಟ ಕೆಳಗೆ ಹೋಗುತ್ತಿದೆ. ಆದ್ದರಿಂದ ಸರ್ಕಾರಕ್ಕೆ ತೊಂದರೆ ಆಗಿದೆಯೇ ಹೊರತಾಗಿ ಇಲ್ಲದಿದ್ದರೆ ಸರ್ಕಾರಕ್ಕೆ ಮನಸ್ಸು ಇಲ್ಲ, ಸರ್ಕಾರಕ್ಕೆ ಗುರಿ ಸಾಧನೆ ಇಲ್ಲ ಎನ್ನತಕ್ಕ ಮಾತು ಅಲ್ಲ. ಜನಗಳ ಕಷ್ಟ ನಮಗೆ ಗೊತ್ತಿಲ್ಲ ಎಂದಲ್ಲ. ಆದ್ದರಿಂದ ಈ ಒಂದು ಪರಿಸ್ಥಿತಿಯನ್ನು ಎದುರಿಸಲಿಕ್ಕೆ ಸರ್ಕಾರ ಸರ್ವ ಪ್ರಯತ್ನ ಮಾಡುತ್ತಿದೆ. ಹಣವನ್ನು ಒದಗಿಸುತ್ತಿದ್ದೇವೆಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಎಷ್ಟು ಒದಗಿಸಬೇಕು ಎಂದು... ಇಷ್ಟೇ ಒದಗಿಸಿ ಅಷ್ಟೇ ಒದಗಿಸಿ ಎಂದು ಹೇಳುವುದು...

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಇದು ಬರೀ ಹರಿಕಥೆ...

(ಗೊಂದಲ)

ಶ್ರೀ ಬಿ ಬಸವಲಿಂಗಪ್ಪ: ನಿಮಗೆ ಜಾಸ್ತಿ ಬೇಕಾದರೆ ಜಾಸ್ತಿ ಕೊಡುತ್ತೇವೆ.

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : 50 ಕೋಟಿ ರೂಪಾಯಿ ಕೊಡುತ್ತೀರಾ ಹೇಳಿ ?

(ಗೊಂದಲ)

ಶ್ರೀ ಸಿ. ಬೈರೇಗೌಡ: ಇದೇ ಸದನದಲ್ಲಿ ಮಾತು ಕೊಟ್ಟಿದ್ದೀರ. ಹೆಚ್ಚುವರಿಯಾಗಿ 25 ಕೋಟಿ ರೂಪಾಯಿಗಳನ್ನು ಈ ವರ್ಷ ಕೊಡುತ್ತೇವೆ ಎಂದು. ಅದನ್ನು ಕೊಡುತ್ತೀರೋ ಅಥವಾ ಇಲ್ಲವೋ ಅಷ್ಟು ಹೇಳಿ..

ಶ್ರೀ ಎಲ್.ಆರ್. ಶಿವರಾಮೇಗೌಡ: ಮಾನ್ಯ ಸಚಿವರು 250 ರೂಪಾಯಿಗಳನ್ನು ಒಂದು ಬೋರ್‌ವೆಲ್ ರಿಪೇರಿಗೆ ಕೊಟ್ಟಿರುವುದು ಸಾಲುತ್ತಾ ಇಲ್ಲ. ಅದನ್ನು ಜಾಸ್ತಿ ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ಇದರ ಬಗ್ಗೆ ತಾವು ಏನು ಹೇಳುತ್ತೀರಿ ?

ಶ್ರೀ ಬಿ. ಬಸವಲಿಂಗಪ್ಪ: ನಾನು ಸ್ಪಷ್ಟವಾಗಿ ಹೇಳಿದ್ದೇನೆ. ದುಡ್ಡಿಗೆ ಕೊರತೆ ಇದಕ್ಕೆ ಬೀಳುವುದಿಲ್ಲ ಎಂದು ಹೇಳಿದ್ದೇನೆ. ಆದರೆ ಇಷ್ಟೇ ಹೇಳಿ, ಅಷ್ಟೇ ಹೇಳಿ ಎಂದ್ದರೆ ಹೇಗೆ ? ನಾನು 25 ಕೋಟಿ ರೂಪಾಯಿ ವಿಚಾರಕ್ಕೆ ಬರುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : 25ರಿಂದ 30 ಕೋಟಿ ರೂಪಾಯಿಗಳವರೆಗೆ ನಿಗದಿ ಮಾಡಿದ್ದಾರೆ. ಕೊಡುತ್ತೀರಾ ಹೇಳಿ ?..

ಉಪಾಧ್ಯಕ್ಷರು : ದಯವಿಟ್ಟು ಮಾನ್ಯ ಮಂತ್ರಿಗಳು ಉತ್ತರ ಹೇಳುವುದನ್ನು ಕೇಳಿ...

ಶ್ರೀ ಬಿ. ಬಸವಲಿಂಗಪ್ಪ: ಮಾನ್ಯ ಗುರುಪಾದಪ್ಪನವರೇ, ತಾವು ಎಷ್ಟು ಮಾತನಾಡುತ್ತೀರಿ? 25ಕೋಟಿ ರೂಪಾಯಿ ಬಗ್ಗೆ ಹೇಳಿದ್ದಾರೆ. ಶ್ರೀಮಾನ್ ಬೈರೇಗೌಡರು ಆಗಿಂದಾಗ್ಗೆ ಕೇಳುತ್ತಿದ್ದಾರೆ. ಈಗ 25 ಕೋಟಿ ರೂಪಾಯಿ ಹಣ ಒದಗಿಸಬೇಕು ಎಂದು. ಹಣ ಇದ್ದಿದ್ದರೆ ನಾವು ಇದುವರೆಗೆ ತಡೆಯುತ್ತಲೇ ಇರಲಿಲ್ಲ. ಇದು ಏನು ಆಯಿತೆಂದು ನಾನು ಹೇಳುವುದನ್ನು ಕೇಳಿ. ಹಿಂದೆ ಎಕ್ಸೈಜ್ ಬಾಬಿನಲ್ಲಿ ಜಾಸ್ತಿ ನಮಗೆ ಆದಾಯ ಬರುತ್ತದೆ ಎಂದು ನಿರೀಕ್ಷಣೆ ಮಾಡಿದ್ದೆವು. ಅದು 225 ಕೋಟಿ ರೂಪಾಯಿಯೋ ಅಥವಾ 250 ಕೋಟಿ ರೂಪಾಯಿನೋ ಹೆಚ್ಚುವರಿಯಾಗಿ ಬರುತ್ತದೆಂದು ನಿರೀಕ್ಷೆ ಮಾಡಿದ್ದೆವು.

ಶ್ರೀ ಪಿ.ಜಿ.ಆರ್. ಸಿಂಧ್ಯ : 314 ಕೋಟಿ ರೂಪಾಯಿ..

ಶ್ರೀ ವಾಟಾಳ್ ನಾಗರಾಜ್: ತಾವು ಹೇಳುತ್ತಾ ಇರುವುದನ್ನು ನೋಡಿದರೆ ಸರ್ಕಾರ ದಿವಾಳಿ ಎದ್ದು ಬಿಟ್ಟಿದೆಯಾ ಹೇಗೆ ಎಂದು ನನಗೆ ಭಯ ಬರುತ್ತದೆ. ನೀರಿನ ವಿಚಾರಕ್ಕೆ ಹೋಗಿ ಸರ್ಕಾರದಲ್ಲಿ ದುಡ್ಡು ಇಲ್ಲ ಎಂದರೆ ಇದು ಬಹಳ ದೀರ್ಘವಾದ್ದಂಥ.....

ಶ್ರೀ ಬಿ. ಬಸವಲಿಂಗಪ್ಪ: ತಮಗೆ ಅರ್ಥ ಆಗಿಲ್ಲ. ದಯವಿಟ್ಟು ಶಾಂತವಾಗಿ ಕೇಳಿ. ನೀವು ನನಗೆ ಶಾಂತವಾಗಿ ಇರಿ ಎಂದು ಹೇಳುತ್ತೀರಿ. ನಾನು ಏನಾದರೂ ಕೇಳಿದರೆ ನೀವು ರೇಗದಿರಿ ಎಂದು ಹೇಳುತ್ತೀರಿ. ಹೆಚ್ಚುವರಿಯಾಗಿ 25 ಕೋಟಿ ರೂಪಾಯಿಗಳನ್ನು ಒದಗಿಸುತ್ತೇವೆಂದು ಹೇಳಿದ್ದಿರಿ. ನೀವು ಯಾಕೆ ಇದನ್ನು ಕೊಡುವುದಿಲ್ಲ ಎಂಬ ವಾದ ಅಷ್ಟೇ ತಾನೇ ಇರುವುದು. ನಾವು ಈ ಹಿಂದೆ ಶ್ರೀಮಾನ್ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ, ಆಗಿನ ಫೈನಾನ್ಸ್ ಮಿನಿಸ್ಟರ್ ಅವರು ಒಂದು ಮಾತು ಹೇಳಿದರು. ನಮಗೆ ಇಷ್ಟು ಆದಾಯ ಎಕ್ಸೈಜ್ ಬಾಬಿನಿಂದ ಬರುತ್ತದೆ ಎಂದು. ಆದರೆ ಅಷ್ಟು ಆದಾಯ ಬರಲಿಲ್ಲ. ಆದ್ದರಿಂದ ಆಗ ನಾವು ಏನು ನಿರೀಕ್ಷಣೆ ಮಾಡಿ ವಾಗ್ದಾನ ಮಾಡಿದ್ದೆವು ಅದನ್ನು ಪೂರೈಸಲಿಕ್ಕೆ ಆಗಲಿಲ್ಲ.

ಆದಾಯ ಬಾರದಿದ್ದರೆ ಪೂರೈಸುವುದು ಹೇಗೆ? ಸರಕಾರ ಒಂದು ಕಾನೂನಿನ ಮೇಲೆ, ನಿಯಮಗಳ ಮೇಲೆ, ನಡೆಯಬೇಕಾಗುತ್ತದೆ. ಆದಾಯವನ್ನು ನೋಡಿಕೊಂಡು ನಾವು ಖರ್ಚು ಮಾಡಬೇಕಾಗುತ್ತದೆ. ಆ 25 ಕೋಟಿ ರೂಪಾಯಿಗಳು ಕೂಡ..... ನಾನು ಮೊನ್ನೆ ಹೇಳಿದ್ದೇನೆ, ಮಾನ್ಯ ಮುಖ್ಯಮಂತ್ರಿಯವರು ಹೇಳುತ್ತಾರೆ ಎಂದು ಹೇಳಿದರು. ನಾನು ಅವರ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ.

ಶ್ರೀ ಆರ್.ಎಲ್. ಜಾಲಪ್ಪ: ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ತಿಮ್ಮಪ್ಪನವರು ಅಲ್ಲೆ ಹೋಗಿ ಏನೇನೋ ಹೇಳುತ್ತಾ ಇದ್ದಾರೆ....

ಶ್ರೀ ಬಿ.ಹೆಚ್. ಬನ್ನಿಕೋಡ್: ಸದನದಲ್ಲಿ.....

(ಗೊಂದಲ)

ಉಪಾಧ್ಯಕ್ಷಿಣಿಯವರು: ದಯಮಾಡಿ ತಾವುಗಳೆಲ್ಲರೂ ಕುಳಿತುಕೊಳ್ಳಬೇಕು. ನಿಮಗೆ ಸಚಿವರ ಉತ್ತರ ಬೇಡ ಅಂದರೆ ನಾನು ಸದನವನ್ನು ಅಡ್ಜರ್ನ್ ಮಾಡುತ್ತೇನೆ. ಹೀಗೆ ಪದೇ ಪದೇ ನಿಂತುಕೊಂಡು ಮಾತನಾಡುವುದು ಸರಿಯಲ್ಲ...

ಶ್ರೀ ಎಂ.ವೈ. ಘೋರ್ಪಡೆ: ಆ 35 ಕೋಟಿ ರೂಪಾಯಿಗಳಲ್ಲಿ 21 ಕೋಟಿ ಮಾತ್ರ ಖರ್ಚಾಗಿದೆ ಎಂದು ಮಾನ್ಯ ಸಚಿವರ ಹೇಳಿಕೆ ಪ್ರಕಾರ ಗೊತ್ತಾಗುತ್ತದೆ. ಅವರೇ ಹೇಳಿಕೆಯನ್ನು ಕೊಟ್ಟಿದ್ದಾರೆ. ಜನವರಿ ಅಂತ್ಯದವರೆಗೂ 21 ಕೋಟಿ ರೂಪಾಯಿಗಳು ಮಾತ್ರ ಖರ್ಚಾಗಿವೆ. ಅಂದರೆ, ಬಜೆಟ್‌ನಲ್ಲಿ ಏನು 35 ಕೋಟಿ

ಇತ್ತು, ಅದರಲ್ಲಿ 21 ಕೋಟಿ ಖರ್ಚಾಗಿದೆ ಅಂದರೆ, ಇನ್ನೂ 15 ಕೋಟಿಗಳು ಖರ್ಚಾಗಿಲ್ಲ ಅಂದಮೇಲೆ ಪುನಃ 25 ಕೋಟಿ ರೂಪಾಯಿಗಳನ್ನು ಉಪಯೋಗಿಸುವ ಪ್ರಶ್ನೆಯೇ ಬರಲಿಲ್ಲ....

ಮಾನ್ಯ ವಿರೋಧಿ ಪಕ್ಷದ ಸದಸ್ಯರು ಶೇಮ್ ಶೇಮ್ ಎಂದು ಉದ್ಗಾರ ಮಾಡಿದರು

ಮತ್ತೆ ಈ 240 ಕೋಟಿ ರೂಪಾಯಿಗಳು ಏನಿವೆ, ಅದರಲ್ಲಿ 78 ಕೋಟಿ ರೂಪಾಯಿಗಳನ್ನು ಬೇರೆ ಬೇರೆ ಬಾಬುಗಳಿಗೆ ಕೊಟ್ಟಿದ್ದಾರೆ. ನಾಳೆ ನನಗೆ ಏನಾದರೂ ಅವಕಾಶವನ್ನು ಕೊಡುವುದಾದರೆ ಈ 240 ಕೋಟಿ ರೂಪಾಯಿಗಳು ಏನಾಯಿತು ಎಂಬುದನ್ನು ವಿವರಗಳ ಮೂಲಕ ನಾನು ಕೊಡುತ್ತೇನೆ. ಆದರೆ ಇಲ್ಲಿ 35 ಕೋಟಿಗಳಲ್ಲಿ 15ಕೋಟಿ ಖರ್ಚಾಗಿಲ್ಲ ಅಂದಮೇಲೆ ಪುನಃ 25ಕೋಟಿ ರೂಪಾಯಿಗಳನ್ನು ಖರ್ಚು ಮಾಡುವ ಪ್ರಶ್ನೆ ಬರುವುದಿಲ್ಲ. ಇದರ ಕಡೆಗೆ ಗಮನಕೊಡಿ ಎಂದು ವಿರೋಧಿ ಪಕ್ಷದವರು ಮಾತನಾಡುವಾಗ ಹೇಳಬೇಕೆಂದಿದ್ದೆ. ಇಲ್ಲಿ ಇರುವುದು ಹಣಕಾಸಿನ ಪ್ರಶ್ನೆಯಲ್ಲ, ಯಾವರೀತಿಯಾಗಿ ನಾವು ಸಕ್ರೀಯವಾಗಿ, ಪರಿಣಾಮಕಾರಿಯಾಗಿ ಖರ್ಚು ಮಾಡುವ ಕಡೆಗೆ ಆಡಳಿತ ಪಕ್ಷದವರು ಮತ್ತು ವಿರೋಧ ಪಕ್ಷದವರು ಸೇರಿಕೊಂಡು ಎಂಬ ಮಾತನ್ನು ನಾವು ಗಮನದಲ್ಲಿಟ್ಟುಕೊಂಡು ಇಲ್ಲಿ ಚರ್ಚೆ ಮಾಡಬೇಕು ನಾವು ಹಣಕಾಸಿನ ಮೇಲೆ ಜಗಳ ಮಾಡುವ ಪರಿಸ್ಥಿತಿ ಇಲ್ಲ. ಬಂಗಾರಪ್ಪನವರ ಸರಕಾರವೇ ಆಗಲಿ, ವೀರೇಂದ್ರಪಾಟೀಲರ ಸರಕಾರವೇ ಆಗಲಿ ಯಾವ ಸರಕಾರವೇ ಆಗಲಿ ಅವರು ಸ್ಪಷ್ಟವಾಗಿ ಹೇಳಿದ್ದಾರೆ, ಕುಡಿಯುವ ನೀರಿಗೋಸ್ಕರ ಹಣಕಾಸಿನ ಅಭಾವ ಇಲ್ಲ ಎಂದು ಹೇಳಿದ್ದಾರೆ. ಅಂದಮೇಲೆ ಇನ್ನು ಬೇರೆ ಯಾವ ವಾದದಲ್ಲಿ ಕಾಲ ಕಳೆಯುವುದು ಅಷ್ಟು ಸೂಕ್ತವಾದುದು ಅಲ್ಲ ಎಂಬುದು ನನ್ನ ಅಭಿಪ್ರಾಯವಾಗಿದೆ.

ಉಪಾಧ್ಯಕ್ಷರು: 7 ಗಂಟೆಯಾಗಿದೆ ತಾವು ಮುಗಿಸಬೇಕು.

ಶ್ರೀ ಬಿ. ಬಸವಲಿಂಗಪ್ಪ: ನನಗೆ ವ್ಯಾಖ್ಯಾನ ಮಾಡಬೇಕೆಂಬ ಇಚ್ಛೆ ಇಲ್ಲ. 25 ಕೋಟಿ ರೂಪಾಯಿಗಳ ಬಗ್ಗೆ ಕೇಳಿದ್ದಾರಲ್ಲ, ಅದರ ಬಗ್ಗೆ ಹೇಳಿದ್ದೇನೆ. ಕುಡಿಯುವ ನೀರನ್ನು ಒದಗಿಸುವ ಬಗ್ಗೆ ಸರ್ಕಾರವು ಸ್ಪಷ್ಟವಾದ ನಿಲುವನ್ನು ತಾಳಿದೆ. ಅದು ಎಷ್ಟೇ ಆಗಲಿ ಯಾವ ಕಾರ್ಯವನ್ನು ನಿಲ್ಲಿಸಿದರೂ ಸರಿಯೇ, ಈ ಅಭಾವ ಪರಿಸ್ಥಿತಿಯನ್ನು ಎದುರಿಸಲು ಸರಕಾರವು ಸಿದ್ಧವಾಗಿದೆ ಎಂದು ಹೇಳಿ ಈ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

(ಗೊಂದಲ)

ಉಪಾಧ್ಯಕ್ಷಿಣಿಯವರು: ಸದನದ ಇಂದಿನ ಕಲಾಪವನ್ನು ಇಲ್ಲಿಗೆ ಮುಗಿಸಿ ನಾಳೆ ಮತ್ತೆ ಸದನ ಬೆಳಿಗ್ಗೆ 11-00 ಗಂಟೆಗೆ ಸೇರುವುದು.

(ಸದನವು 7ಘಂಟೆ 8 ನಿಮಿಷಕ್ಕೆ ಮುಕ್ತಾಯವಾಗಿ, ಪುನಃ 30ನೇ ಮಾರ್ಚಿ 1991ರ ಬುಧವಾರದಂದು ಬೆಳಿಗ್ಗೆ 11-00 ಘಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)